ಕರ್ನಾಟಕ ವಿಧಾನ ಸಭೆ

ಗುರುವಾರ 27ನೇ ಮಾರ್ಚ್ 2003ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ನಿಲುವಳಿ ಸೂಚನೆ : ಅನುಮತಿ ಕೋರಿಕೆ

ವಿಷಯ :- ಔಷಧ ನಿಯಂತ್ರಣ ಕಚೇರಿ ಮೇಲೆ ಲೋಕಾಯುಕ್ತರ ಧಾಳಿ, ಹಾಗೂ ಮುನ್ನೂರು ಕೋಟಿ ರೂಪಾಯಿಗಳ ನಕಲಿ ಔಷಧಿ ಅವ್ಯವಹಾರ ಪತ್ತೆ ಮಾಡಿರುವ ವರದಿ ಬಗ್ಗೆ.

† ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ನಾವು ಇವತ್ತು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೇವೆ. ಇವತ್ತು ಪತ್ರಿಕೆಗಳಲ್ಲಿ ಔಷಧ ನಿಯಂತ್ರಕರ ಕಚೇರಿ ಮೇಲೆ ಲೋಕಾಯುಕ್ತ ಧಾಳಿ ಮಾಡಿದೆ ಮತ್ತು 300 ಕೋಟಿ ರೂಪಾಯಿಗಳ ನಕಲಿ ಔಷಧಿಯ ಅವ್ಯವಹಾರವನ್ನು ಪತ್ತೆ ಮಾಡಿರುವಂಥಾದ್ದು ಇವತ್ತಿನ ಪತ್ರಿಕೆಗಳ ಮುಖಪುಟದಲ್ಲಿ ಬಂದಿದೆ. ಹಾಗಾಗಿ ಇದರ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ನಾವು ಕೊಟ್ಟಿದ್ದೇವೆ. ಈ ಹಿಂದೆ ಕೂಡ ಈಗಾಗಲೇ ರಾಜ್ಯದಲ್ಲಿ ಬೇರೆ ಬೇರೆ ಇಲಾಖೆಗಳಲ್ಲಿ ಲೋಕಾಯುಕ್ತ ಧಾಳಿ ಮಾಡಿರುವುದನ್ನು ನಾವು ನೋಡಿದ್ದೇವೆ. ಅದು ಸಬ್‌ರಿಜಿಸ್ಟಾರ್ ಕಚೇರಿ ಇರಬಹುದು ಅಥವಾ ಆಸ್ಪತ್ರೆ ಇರಬಹುದು, ಅಥವಾ ನಗರಪಾಲಿಕೆಗಳಲ್ಲಿ ಇರುವಂತಹ ಅವ್ಯವಹಾರಗಳ ಬಗ್ಗೆ ಇರಬಹುದು, ಸಾಕಷ್ಟು ಲೋಕಾಯುಕ್ತದವರು.......

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಟ್ರೇಜರಿಬೆಂಚ್‌ಗಳಲ್ಲಿ ಯಾರೂ ಇಲ್ಲ, ಸರ್ಕಾರ ಖಾಲಿ...

ಶ್ರೀ ಸಿ.ಎಸ್. ನಾಡಗೌಡ (ಸರ್ಕಾರಿ ಮುಖ್ಯ ಸಚೇತಕರು) :- ಸರ್ಕಾರ ಖಾಲಿ ಏನೂ ಇಲ್ಲ.

ಶ್ರೀ ಸಿ. ಭೈರೇಗೌಡ :- ಮಾನ್ಯ ಅಧ್ಯಕ್ಷರೆ, ಸರ್ಕಾರ ಖಾಲಿ ಇದೆ, ಯಾರೂ ಇಲ್ಲ. ಒಬ್ಬ ಮಾನ್ಯ ಸದ್ಯಸರು-ಹಿರಿಯ ಸಚಿವರು ಯಾರೂ ಇಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಸದನದ ಕೋರಂ ಆಗುವುದಕ್ಕೂ ಸಹ ವಿರೋಧ ಪಕ್ಷದರೇ ಬಂದು ಕೋರಂ ಮಾಡಿಸಬೇಕು.

ಶ್ರೀ ಎಸ್.ಎಸ್ ಪಾಟೀಲ್ :- ಮಾನ್ಯ ಅಧ್ಯಕ್ಷರೆ, ತಮಗೂ ಸಹ ಈ ಮಂತ್ರಿಮಂಡಲದ ಬಗ್ಗೆ ಬೇಜಾರಾಗಿದೆ. ನಮಗೆ ಗೊತ್ತಿದೆ ಅದು.

ಅಧ್ಯಕ್ಷರು :- ಭೈರೇಗೌಡರೆ, ನಾನು ಹೇಳುತ್ತೇನೆ, ದಯವಿಟ್ಟು ಕುಳಿತುಕೊಳ್ಳಿ. ಈಗ ಎಲ್ಲಾ ಪಾರ್ಟಿಯವರದ್ದು ರ‍್ಯಾಲಿ, ಮೀಟಿಂಗ್ ನಡೆಯುತ್ತಿದೆ. ಇವತ್ತು ಆ ಪಾರ್ಟಿಯವರದು ಏನೋ ರ‍್ಯಾಲಿ ಇದೆ. ಅರ್ಧ ಗಂಟೆಯಲ್ಲಿ ಬರುತ್ತಾರೆ,

ಶ್ರೀ ಸಿ ಭೈರೇಗೌಡ :- ಹಾಗಾದರೆ ಈಗ ಸದನವನ್ನು ಅರ್ಧ ಗಂಟೆಗಳ ಕಾಲ ಮುಂದಕ್ಕೆ ಹಾಕಿ.

ಅಧ್ಯಕ್ಷರು :- ಬೇಡ, ಇಲ್ಲಿ ಮಂತ್ರಿಗಳು ಮೂರ್ನಾಲ್ಕು ಜನ ಇದ್ದಾರೆ. ಉತ್ತರ ಹೇಳುವುದಕ್ಕೆ ತಯಾರಿದ್ದಾರಲ್ಲಾ.

ಶ್ರೀ ಎಸ್.ಎಸ್. ಪಾಟೀಲ್ :- ಸದನವನ್ನು ಒಂದು ಗಂಟೆ ಅಡ್ಜರ್ನ್ ಮಾಡಿಬಿಡಿ.

(ಗೊಂದಲ)

ಅಧ್ಯಕ್ಷರು :- ಸ್ವಾಮಿ, ಭೈರೇಗೌಡರೆ, ಈ ಕಡೆ ತಿರುಗಿ. ಏಕೆ ಅವರಿಗೆಲ್ಲಾ ಪ್ರೇರೇಪಣೆ ಕೊಡುತ್ತೀರಿ? ಈ ಕಡೆ ತಿರುಗಿ, ಅವರಿಗೆಲ್ಲಾ ಏಕೆ ಹೇಳಿ ಕೊಡುತ್ತೀರಿ?

ಶ್ರೀ ಬಿ.ಎನ್. ಬಚ್ಚೇಗೌಡ :- ಎಲ್ಲಾ ಬಸಸ್‌ಗಳಲ್ಲಿ ಈಗ ಜನ ತುಂಬಿಕೊಂಡು ಬರುತ್ತಿದ್ದಾರೆ. ಎಲ್ಲಾ ರ್‍ಯಾಲಿಯಲ್ಲಿ ಇರುತ್ತಾರೆ.

ಅಧ್ಯಕ್ಷರು :- ಅದೆಲ್ಲಾ ನಮಗ್ಯಾಕೆ......

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೆ, ತಾವು ಮೂರು ಗಂಟೆಗೆ ಅಧಿವೇಶನವನ್ನು ಮಾಡಿ.

ಅಧ್ಯಕ್ಷರು :- ಮೂರು ಜನ ಮಂತ್ರಿಗಳಿದ್ದಾರೆ. ಅವರು ಬರೆದುಕೊಳ್ಳುತ್ತಾರೆ ಬಿಡಿ.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನಾವು ಬಜೆಟ್ ಮೇಲೆ ಮಾತನಾಡುತ್ತೇವೆ ಎಂದರೆ ಅರ್ಧ ತಾಸು ಮಾತನಾಡಿ ಎಂದು ಹೇಳುತ್ತೀರಿ.

ಶ್ರೀ ಸಿ. ಭೈರೇಗೌಡ :- ಮಾನ್ಯ ಅಧ್ಯಕ್ಷರೆ, ಯುದ್ಧ ಎಂದರೆ ನಾವೂ ಕೂಡ ಅದಕ್ಕೆ ವಿರೋಧ. ಅಮೇರಿಕಾದ ನೀತಿ ಏನಿದೆ ಅದನ್ನು ನಾವೂ ಕೂಡ ವಿರೋಧಿಸುತ್ತೇವೆ.

ಅಧ್ಯಕ್ಷರು :- ಎಲ್ಲರೂ ಕೂಡ ನಿಂತು ಮಾತನಾಡುತ್ತಿದ್ದಾರೆ ಯಾರ ಮಾತನ್ನೂ ಬರೆದುಕೊಳ್ಳಬೇಡಿ.

(ಈ ಹಂತದಲ್ಲಿ ಅಧ್ಯಕ್ಷರ ಆದೇಶದ ಮೇರೆಗೆ ಸದನದ ಕಲಾಪಗಳನ್ನು ದಾಖಲು ಮಾಡಿಕೊಂಡಿಲ್ಲ)

(ಗೊಂದಲ)

ಅಧ್ಯಕ್ಷರು :- ಎಲ್ಲಾ ಪಾರ್ಟಿಗಳಿಗೂ ಅನೇಕ ಸಲ ಒಬೆಲೈಜ್ ಮಾಡಿದ್ದೇವೆ. ಮಂತ್ರಿಗಳು ನಿಮ್ಮ ಪಾರ್ಟಿಗೂ ಅನೇಕ ಸಲ ಒಬೆಲೈಜ್ ಮಾಡಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್ :- ಮಾನ್ಯ ಅಧ್ಯಕ್ಷರೆ, ಇದು ಅವರ ಪಾರ್ಟಿ ರ್‍ಯಾಲಿ ವಿರುದ್ಧ ಅಲ್ಲ. ಆದರೆ ಈ ಸದನಕ್ಕೆ ಅವರದು ರ್‍ಯಾಲಿ ಇದೆ ಎಂಬುದು ಗೊತ್ತಿತ್ತು. ಹಾಗಿದ್ದ ಮೇಲೆ ನಾವು ಹನ್ನೆರಡು, ಅಥವಾ ಮಧ್ಯಾಹ್ನದ ಒಂದು ಗಂಟೆಗೆ ಸೇರಬಹುದಾಗಿತ್ತು.

ಅಧ್ಯಕ್ಷರು :- ನಾಲ್ಕು ಮಂತ್ರಿಗಳು ಸದನದಲ್ಲಿ ಇದ್ದಾರೆ. ನಿಮಗೆ ಏನು ಉತ್ತರ ಬೇಕೋ ಹೇಳುತ್ತಾರೆ. ಒಬ್ಬೊಬ್ಬರು ಮಾತನಾಡಿ.

(ಈ ಹಂತದಲ್ಲಿ ಜನತಾ ದಳ (ಯು) ಮತ್ತು (ಎಸ್) ಪರಿವಾರದ ಕೆಲವು ಸದಸ್ಯರುಗಳು ಪ್ರತಿಭಟನೆ ಮಾಡಿ ಸದನದಿಂದ ಹೊರ ನಡೆದರು)

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೆ, ಇದು ಒಂದು ಪಾರ್ಟಿಯ ಕೆಲಸ. ಇದೊಂದು ಶಾಸನ ಸಭೆಯ ಕೆಲಸ. ನಾವೆಲ್ಲಾ ಇಷ್ಟು ಜನ ಬಂದಿದ್ದೇವೆ.

ಶ್ರೀ ಎಸ್. ಸುರೇಶ್‌ಕುಮಾರ್ :- ಮಾನ್ಯ ಅಧ್ಯಕ್ಷರೆ, ಅವರು ಬರುವ ತನಕ ಸಭೆಯನ್ನು ಅಡ್ಜರ್ನ್ ಮಾಡಿ. ಒಂದು ಪ್ರಮುಖ ಪಕ್ಷದವರು ಪ್ರತಿಭಟನೆ ಮಾಡಿ ಆಚೆ ಹೋಗಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೆ, ಜನತಾ ಪರಿವಾರದವರು ಇಲ್ಲಿ ಇರುವಂತಹ ಪರಿಸ್ಥಿತಿ ನೋಡಿಕೊಂಡು ಪ್ರತಿಭಟನೆ ಮಾಡಿ ಹೊರಗಡೆ ಹೋಗಿದ್ದಾರೆ. ಇಂತಹ ಸಮಯದಲ್ಲಿ, ಇವತ್ತು ತಾವೇ ಅವರು ಏಕೆ ಬಂದಿಲ್ಲವೆಂದು ಕೇಳಿದಾಗ ರ್‍ಯಾಲಿ ಇದೆ ಎಂದು ಹೇಳಿದಿರಿ.

ಅಧ್ಯಕ್ಷರು : ಇರುವ ವಿಷಯ ಹೇಳಬೇಕಲ್ಲಾ. ಸುಳ್ಳು ಏಕೆ ಹೇಳಬೇಕು?

ಶ್ರೀ ಜಗದೀಶ್ ಶೆಟ್ಟರ್ :- ಉದ್ದೇಶ ಏನಿದೆ ಅಮೆರಿಕಾ ಮತ್ತು ಇರಾಕ್‌ಮೇಲೆ......

ಅಧ್ಯಕ್ಷರು :- ಮೊನ್ನೆ ಒಂದು ಸಲ ಮಲ್ಲೇಶ್ವರಂನಲ್ಲಿ ನಿಮ್ಮ ಕಡೆಯಿಂದ ಮೀಟಿಂಗ್ ಇದ್ದಾಗ ನಾವು ಬೇಗ ಹೋಗಬೇಕು ಸಭೆಯನ್ನು ಅಡ್ಜರ್ನ್ ಮಾಡಬೇಕು ಎಂದಾಗ ಅವರು ಅಲೋ ಮಾಡಲಿಲ್ಲವೆ?

ಶ್ರೀ ಜಗದೀಶ್ ಶೆಟ್ಟರ್ :- ರ್‍ಯಾಲಿ ಇದೆಯಲ್ಲಾ ಈಗ ಒಂದು ತಾಸು ಬಿಟ್ಟುಬಿಡಿ. ಮಾನ್ಯ ಅಧ್ಯಕ್ಷರೇ, ಈಗ ಅವರಿಗೆ ರ್‍ಯಾಲಿ ಇದೆಯೆಂದು ಹೇಳಿದ್ದಾರೆ, ತಾವು ಸಭೆಯನ್ನು ಅಡ್ಜರ್ನ್ ಮಾಡಿ, ಅವರೆಲ್ಲರೂ ಬರಲಿ, ಮಂತ್ರಿಗಳು, ಶಾಸಕರು, ಸಭೆಗೆ ಬರಲಿ, ಇಲ್ಲಿ ಅವರ ಪಕ್ಷದಿಂದ 150 ಜನರು ಇರುವಂಥಾದ್ದು ಎಷ್ಟು ಜನರು ಇದ್ದಾರೆಂಬುದನ್ನು ಅಧ್ಯಕ್ಷರೇ, ತಾವೇ ನೋಡಿ.

ಅಧ್ಯಕ್ಷರು :- ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನಾವು ಏಕೆ ಸಮಯವನ್ನು ಕಳೆಯಬೇಕು, ನೋಡಿ ಈಗ ಸಭೆಯಲ್ಲಿ 56 ಜನ ಮಂತ್ರಿಗಳು ಇದ್ದಾರೆ, ಈಗ ತಾವು ಅಡ್ಜರ್ನ್‌ಮೆಂಟ್ ಮೋಷನ್ ಏನು ರೈಸ್ ಮಾಡಿದ್ದೀರಿ, ಅದಕ್ಕೆ ಸರ್ಕಾರ ಉತ್ತರಿಸಲು ರೆಡಿಯಾಗಿದೆ, ಈಗ ನೀವು ರೈಸ್ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಇಲ್ಲಿ ನಾಲ್ಕು ಜನ ಮಂತ್ರಿಗಳು ಇದ್ದಾರೆ.

ಅಧ್ಯಕ್ಷರು :- ನೀವು ವಿಷಯವನ್ನು ರೈಸ್ ಮಾಡಿ ಹೇಳಲು ಸರ್ಕಾರದವರು ರೆಡಿಯಾಗಿದ್ದಾರೆ. ಅಷ್ಟರಲ್ಲಿ ಎಲ್ಲರೂ ಸಭೆಗೆ ಬರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಪ್ರಮುಖ ವಿರೋಧಪಕ್ಷದವರು ಹೊರಗಡೆ ಹೋಗಿದ್ದಾರೆ. ಅವರನ್ನು ಸಭೆಗೆ ಕರೆಸಬೇಕು, ಇಲ್ಲಿ ಪ್ರಮುಖ ವಿರೋಧ ಪಕ್ಷದವರು ಹೊರಗಡೆ ಇರುವಾಗ ಇಲ್ಲಿ ವಿಷಯವನ್ನು ಪ್ರಸ್ತಾಪ ಮಾಡುವಂಥಾದ್ದು ಸರಿಯಲ್ಲ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :- ಅದರಿಂದ ಏನಾಯಿತು. ಅವರ ಬಗ್ಗೆ ಅಷ್ಟೊಂದು ಸಿಂಪಥಿ ಬೇಡ......

(ಗೊಂದಲ)

ಅಧ್ಯಕ್ಷರು :- ಮಾನ್ಯ ಮಹಾದೇವ್ ಪ್ರಸಾದ್‌ರವರೇ, ಬಚ್ಚೇಗೌಡರೇ, ಅವರನ್ನು ಒಳಗೆ ಬರಲು ಹೇಳಿ, ಇದು ಪ್ರಜಾಪ್ರಭುತ್ವದಲ್ಲಿ ಇದೆಲ್ಲಾ ಇರುವಂಥಾದ್ದೇ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಒಂದು ಪ್ರಮುಖ ರಾಜಕೀಯ ಪಕ್ಷದವರನ್ನು ಹೊರಗಡೆ ಇಟ್ಟು, ಇಲ್ಲಿ ವಿಷಯ ಪ್ರಸ್ತಾಪ ಮಾಡುವಂಥಾದ್ದು ಸರಿಯಲ್ಲ.

ಮಾನ್ಯ ಸದಸ್ಯರು :- ನಮ್ಮ ಬಗ್ಗೆ ಅಷ್ಟೊಂದು ಸಿಂಪಥಿ ಬೇಡ.

ಅಧ್ಯಕ್ಷರು :- ಸರ್ಕಾರ ಉತ್ತರವನ್ನು ಹೇಳುವುದಕ್ಕೆ ತಯಾರಿದೆ, ಕೋರಂ ಇದೆ, ಮತ್ತೆ ಮಾನ್ಯ ಮಂತ್ರಿಗಳು ಇದ್ದಾರೆ, ನೀವು ಯಾವುದೇ ಪ್ರಶ್ನೆಯನ್ನು ರೇಸ್ ಮಾಡಿ, ನೀವು ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಜನತಾ ಪಕ್ಷದವರು ಸಭೆಯಿಂದ ಹೊರಗಡೆ ಹೋಗಿದ್ದಾರೆ, ಅವರನ್ನು ಸಭೆಗೆ ಕರೆಸುವಂತಹ ವ್ಯವಸ್ಥೆಯನ್ನು ಮಾಡಿ. ಸದನದಲ್ಲಿ ಎಲ್ಲರೂ ಇರಬೇಕು, ಆ ಕಡೆ ಮಂತ್ರಿಗಳು ಇರಬೇಕು, ಈ ಕಡೆ ಶಾಸಕರು ಇರಬೇಕು.

ಅಧ್ಯಕ್ಷರು :- ಎಲ್ಲರೂ ಇದ್ದಾರೆ, ನೋಡಿ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಇವತ್ತು ಒಂದು ಪ್ರಮುಖ ಪಕ್ಷದವರು ಹೊರಗಡೆ ಇರುವಂತಹ ಸಂದರ್ಭದಲ್ಲಿ ಸದನದಲ್ಲಿ ಚರ್ಚೆ ಮಾಡುವಂಥಾದ್ದು ಸರಿಯಲ್ಲ, ಮಂತ್ರಿಗಳು ಇಲ್ಲ.

ಅಧ್ಯಕ್ಷರು :- ನಾನು ಹೇಳಿದ್ದೇನೆ, ಅವರನ್ನು ಸಭೆಗೆ ಕರೆಸುತ್ತೇನೆ, ನೀವು ಪ್ರಾರಂಭ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ದಯವಿಟ್ಟು ಜನತಾ ಪರಿವಾರದವರನ್ನು ಸಭೆಗೆ ಕರೆಸಿ, ಏಕೆಂದರೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಸದನದಲ್ಲಿ ಎಲ್ಲರೂ ಇರಬೇಕಾಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಮಾನ್ಯ ಅಧ್ಯಕ್ಷರೇ, ಇವತ್ತಿನ ಪತ್ರಿಕೆಗಳಲ್ಲಿ ಏನು ಬಂದಿದೆ, ಎಂದರೆ ಅಧಿವೇಶನ ನಡೆಯುವಂತಹ ಸಂದರ್ಭದಲ್ಲಿ ಮಧ್ಯಾಹ್ನ ಊಟ ಕೊಡುವಂಥಾದ್ದು ಇರುವುದರಿಂದ ಇಲ್ಲಿ ಕೋರಂ ಆಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲವೆಂದು ಬಂದಿದೆ, ಹಾಗೆ ಬೆಳಿಗ್ಗೆ ತಿಂಡಿಯನ್ನು ಕೊಟ್ಟರೆ ಪ್ರಾಯಶಃ ಕೋರಂ ಆಗುತ್ತದೆ. ಇಲ್ಲಿ ಸರ್ಕಾರ ಊಟ ಕೊಡುವ ರೀತಿಯಲ್ಲಿ ಬಂದಿದೆ, ಈ ರೀತಿಯಾಗಿ ಕೆಲವು ಪತ್ರಿಕೆಗಳಲ್ಲಿ ಬಂದಿದೆ.

ಅಧ್ಯಕ್ಷರು :- ಇಲ್ಲ, ಇದು ಸರ್ಕಾರದಿಂದ ಕೊಡುವಂತಹ ಊಟವಲ್ಲ, ಇಂಡಿವಿಜ್ಯುಯಲ್ ಆಗಿ ಕೊಡುವಂಥಾದ್ದು, that is not a lunch arranged by the Government. ಇಂಡಿವಿಜಿಯಲ್ ಆಗಿ ಮಂತ್ರಿಗಳು ಸಾಮಾನ್ಯವಾಗಿ ಬಜೆಟ್ ಸೆಷನ್‌ನಲ್ಲಿ, ಅನೇಕ ಜನ ಸದಸ್ಯರು ರಿಕ್ವೆಸ್ಟ್ ಮಾಡಿದ್ದರಿಂದ ಅವರ ಏರ್ಪಾಡು ಮಾಡಿದ್ದಾರೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ :- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರಾದ ಶ್ರೀ ಹೆಗ್ಡೆಯವರು ಮಂತ್ರಿಗಳಾಗಿದ್ದಾಗಲೂ ಕೊಟ್ಟಿರಬಹುದು. ಇದು ಏನೂ ಹೊಸದಲ್ಲ. ಇದು ಒಂದು ಪರಂಪರೆಯಾಗಿ ಬಂದಿರುವಂಥಾದ್ದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಮಾನ್ಯ ಅಧ್ಯಕ್ಷರೇ, I wanted a clarification. ಈ ಸದನದ ಮುಖಾಂತರ ಜನರಿಗೆ ಗೊತ್ತಾಗಬೇಕಾಗಿದೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ :- ಅವರಿಗೆ ಪತ್ರವನ್ನು ಬರೆಯಲಾಗಿದೆ. ಎಲ್ಲವನ್ನೂ ಎಕ್ಸ್‌ಪ್ಲೇನ್ ಮಾಡಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ನಾನು ಅಧ್ಯಕ್ಷರ ಜೊತೆಗೆ ಮಾತನಾಡುತ್ತಿದ್ದೇನೆ. ನೀವು ನಮ್ಮ ಮಾತನ್ನು ಕೇಳದೇ ಇದ್ದರೆ, ಉತ್ತರವನ್ನು ಏಕೆ ಹೇಳುತ್ತೀರಿ, ನಾನು ಇಲ್ಲಿ ಅಧ್ಯಕ್ಷರ ಹತ್ತಿರ ಮಾತನಾಡುತ್ತೇನೆ. ಈಗ ಇದು ಜನರಿಗೆ ಇದು ಸರ್ಕಾರದ ಊಟವಲ್ಲ, ಎನ್ನುವುದು ಗೊತ್ತಾಗಬೇಕಾಗುತ್ತದೆ. ಈ ವಿಷಯ ಸದನದ ಮುಖೇನ ಹೋಗಬೇಕಾಗುತ್ತದೆ. ಇದು ಸರ್ಕಾರದಿಂದ ಊಟದ ವ್ಯವಸ್ಥೆಯನ್ನು ಮಾಡುತ್ತಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿರುವಂಥಾದ್ದು. ಪ್ರಾಯಶಃ ಬರೇ ಕೋರಂಗೋಸ್ಕರ ಮಾಡುವಂಥಾದ್ದು ಎಂದಾದರೆ ಬೆಳಿಗ್ಗೆ ತಿಂಡಿಗೂ ವ್ಯವಸ್ಥೆ ಮಾಡಬೇಕಾಗುತ್ತದೆ. ಮಾನ್ಯ ಸಚಿವರು ಇದಕ್ಕೂ ವ್ಯವಸ್ಥೆ ಮಾಡಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ :- ಮಾನ್ಯ ಅಧ್ಯಕ್ಷರೇ, ಇಷ್ಟು ಗಂಭೀರವಾದಂತಹ ವಿಚಾರವನ್ನು ನಾವು ಇಲ್ಲಿ ನಿಲುವಳಿ ಸೂಚನೆಯ ಮೂಲಕ ನಿಯಮಾವಳಿಯ ಮೂಲಕ ಒಂದು ಗಂಟೆಯ ಮುಂಚಿತವಾಗಿ ಸಲ್ಲಿಸಿ, ತಾವೂ ಸಹ ಇದನ್ನು ಅವರವರ ಕಚೇರಿಗೆ ತಲುಪಿಸಿ, ಈ ರೀತಿ ನಿಲುವಳಿ ಸೂಚನೆಯನ್ನು ತಂದಿದ್ದಾರೆಂಬುದನ್ನು ಸರ್ಕಾರದ ಗಮನಕ್ಕೆ ತಂದಿದ್ದೀರಿ. ಸದನ ಪ್ರಾರಂಭವಾಗುವಾಗ ಒಬ್ಬರು ಮಾತ್ರ ಮಂತ್ರಿಗಳಿದ್ದರೆ. ಇಲ್ಲಿ ಸಂಸದೀಯ ವ್ಯವಹಾರ ಸಚಿವರು ಇಲ್ಲ.

ಅಧ್ಯಕ್ಷರು :- ನೋಡಿ ಈಗ 5 ಜನ ಮಂತ್ರಿಗಳು ಇದ್ದಾರೆ, 6 ಜನರು ಇದ್ದಾರೆ.

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ :- ಮಾನ್ಯ ಧರ್ಮಸಿಂಗ್‌ರವರು ಈಗ ಬರುತ್ತಿದ್ದಾರೆ.

(ಗೊಂದಲ)

ಮಾನ್ಯ ಸದಸ್ಯರು :- ಲೋಕಾಯುಕ್ತದವರ ಧಾಳಿಯಿಂದ ಸರ್ಕಾರ ಕಷ್ಟಕ್ಕೆ ಹೋಗಿದೆ. ಅದಕ್ಕೆ ಹೆದರಿಕೊಂಡು ಯಾರೂ ಬಂದಿಲ್ಲ.

ಅಧ್ಯಕ್ಷರು :- ಕೋರಂ ಇದೆ. sufficient number of Ministers are there. It is not good. It is not advisable to postpone it.

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ :- ಮಾನ್ಯ ಅಧ್ಯಕ್ಷರೇ, ನಮ್ಮ ವಿರೋಧ ಪಕ್ಷದ ನಾಯಕರು ಯಾವ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೋ, ಇದು ಇಷ್ಟು ದೊಡ್ಡ ಅವ್ಯವಹಾರವಾಗಿರುವಂಥಾದ್ದನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ನಿಲುವಳಿ ಸೂಚನೆಯನ್ನು ತಂದು ಆಗಿದೆ. ಆದರೆ ಸರ್ಕಾರದ ವತಿಯಿಂದ ಅವರು ಎಲ್ಲರೂ ಸಭೆಯಲ್ಲಿ ಇರಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೇ, ತಾವು ಸದನಕ್ಕೆ ಬರುವುದಕ್ಕಿಂತ ಮುಂಚಿತವಾಗಿ ನಾನು ಬಂದಿದ್ದೇನೆ. ನೀವು ಆ ಕಡೆಯಿಂದ ಬಂದಿದ್ದೀರಿ. ನಾನು ಈ ಕಡೆಯಿಂದ ಬಂದಿದ್ದೇನೆ.

ಅಧ್ಯಕ್ಷರು :- ಹೌದು.

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ :- ನಾವು ಇಲ್ಲಿ ಒಬ್ಬರು. ಇಬ್ಬರು ಸಚಿವರು ಇದ್ದರು ಎಂದು ಹೇಳುವುದು.

ಶ್ರೀ ಕಾಗೋಡು ತಿಮ್ಮಪ್ಪ :- ಯಾವ ವಿಚಾರದಲ್ಲಿ ಎಂದು ಹೇಳಿ.

(ಗೊಂದಲ)

Mr. Speaker : This is a Quorum. Sufficient number of Ministers are there. ನೀವು ಮಲ್ಲೇಶ್ವರಂಗೆ ಹೋಗುವಂತಹ ಸಂದರ್ಭದಲ್ಲಿ ಅವರು ನಿಮಗೆ ಒಬಲೈಜ್ ಮಾಡಲಿಲ್ಲವೇ?

ಶ್ರೀ ಆರಗ ಜ್ಞಾನೇಂದ್ರ :- ಮಾನ್ಯ ಅಧ್ಯಕ್ಷರೇ, ಈಗ ನಾವು ಯಾರೂ ಇರುಸು ಮುರಿಸಿಗೆ ಒಳಗಾಗುವುದು ಬೇಡ. ಏಕೆಂದರೆ ಆಡಳಿತ ಪಕ್ಷದವರ ರ್‍ಯಾಲಿ ಇದೆ. ಅಲ್ಲಿ ಅವರು ರ್‍ಯಾಲಿಗೆ ಹೋಗದಿದ್ದರೆ, ಅವರ ಅಧ್ಯಕ್ಷರು ನೋಟೀಸ್ ಕೊಟ್ಟು ಮತ್ತೆನೋ ಮಾಡುತ್ತಾರೆ.

ಮಾನ್ಯ ಸದಸ್ಯರು :- ಅದೆಲ್ಲಾ ನಿಮಗೆ ಏಕೆ ಬೇಕು?

ಅಧ್ಯಕ್ಷರು :- ಅವರವರ ಪಾರ್ಟಿ ಇಷ್ಯೂ, ನಾವು ಏಕೆ ಇಲ್ಲಿ ಮಾತನಾಡಬೇಕು. I can't adjourn. Sufficient Ministers are there. Quorum is there. I can't postpone the discussion.

ಶ್ರೀ ಆರಗ ಜ್ಞಾನೇಂದ್ರ :- ಮಾನ್ಯ ಅಧ್ಯಕ್ಷರೇ, ಅವರ ರ್‍ಯಾಲಿಯ ಉದ್ದೇಶ ಒಳ್ಳೆಯದಿದೆ. ಅದರಲ್ಲಿ ನಮ್ಮದೇನೂ ತಕರಾರು ಇಲ್ಲ. ತಾವು ಸದನವನ್ನು ಮುಂದೂಡಿ. ಆಮೇಲೆ ಚರ್ಚೆಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು :- ತಾವು ಮಹತ್ತರವಾದಂತಹ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಜಗದೀಶ್ ಶೆಟ್ಟರ್‌ರವರೇ, ತಾವು ಮಾತನಾಡಿ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಅರಗಜ್ಞಾನೇಂದ್ರರವರು ನಿನ್ನೆ ಪ್ರಸ್ತಾಪ ಮಾಡಿರುವಂತಹ ವಿಚಾರಕ್ಕೆ ದಾಖಲೆಗಳನ್ನು ಕೊಡುವುದರ ಬಗ್ಗೆ ದಯವಿಟ್ಟು ಅನುವು ಮಾಡಿಕೊಡಬೇಕು.

ಅಧ್ಯಕ್ಷರು :- ಅವರು ಸುಮ್ಮನೆ ಕುಳಿತಿದ್ದಾರೆ, ಪುನಃ ಅದನ್ನು ರೈಸ್ ಮಾಡುವುದು ಬೇಡ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ :- ಮಾನ್ಯ ಅಧ್ಯಕ್ಷರೇ, ದಾಖಲೆಗಳ ಬಗ್ಗೆ ಹೇಳಿಕೆ ಕೊಡಲು ತಾವು ಅನುವು ಮಾಡಿಕೊಡಬೇಕು.

ಅಧ್ಯಕ್ಷರು :- ತಾವು ಕುಳಿತುಕೊಳ್ಳಿ. ಈ ವಿಷಯವಾದ ಮೇಲೆ ಕರೆಯುತ್ತೇನೆ, ಇದು 15 ನಿಮಿಷಗಳಾಗುತ್ತದೆ, ಅಷ್ಟೆ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ :- ಮಾನ್ಯ ಅಧ್ಯಕ್ಷರೇ, ನನಗೆ 10 ನಿಮಿಷಗಳ ಸಮಯವನ್ನು ಕೊಟ್ಟರೆ, ಇದನ್ನು ನಾನು ಹೇಳಿ, ಅವರಿಗೆ ಈ ದಾಖಲೆಗಳನ್ನು ಕೊಡುತ್ತೇನೆ.

ಅಧ್ಯಕ್ಷರು :- ಈಗ ಅವರು ನಿಲುವಳಿ ಸೂಚನೆಯನ್ನು ತಂದಿದ್ದಾರೆ. ಅವರಿಗೆ ಮೊದಲು ಆದ್ಯತೆಯನ್ನು ಕೊಡಬೇಕು. ಅದಕ್ಕೆ ಉತ್ತರವನ್ನು ಕೊಟ್ಟ ಮೇಲೆ ಅದು ಮುಗಿಯುತ್ತದೆ. ಇದು ಆದಮೇಲೆ ಅದನ್ನು ತೆಗೆದುಕೊಳ್ಳೋಣ.

ಶ್ರೀ ಪ್ರಕಾಶ್ ಬಿ ಹುಕ್ಕೇರಿ :- ಆಯಿತು.

ಶ್ರೀ ವಿ.ಎಸ್. ಗುರುಸ್ವಾಮಿ :- ಸನ್ಮಾನ್ಯ ಅಧ್ಯಕ್ಷರೇ, ಒಂದೇ ಒಂದು ರಿಕ್ವೆಸ್ಟ್ ಈಗ Priniciples of Parliamentary practice..........

Mr. Speaker : I have not allowed under adjournment motion ನೀವು ಇದನ್ನು ಶೂನ್ಯ ವೇಳೆಯಲ್ಲಿ ರೇಸ್ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ನಾವು ಇನ್ನೂ ಸಬ್‌ಮಿಟ್ ಮಾಡಿಲ್ಲ, ನನಗೆ ಅರ್ಥವಾಗುತ್ತಿಲ್ಲ. ಇನ್ನು ಪ್ರಾಸ್ತಾವಿಕವಾಗಿ ಮಾಡುತ್ತಿದ್ದೇವೆ.

ಅಧ್ಯಕ್ಷರು :- ಆಯಿತು. ಪ್ರಿಲಿಮಿನರಿ ಸಬ್‌ಮಿಷನ್ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ, ಇವತ್ತು ನಿಲುವಳಿ ಸೂಚನೆಯನ್ನು ತರುವಂತಹ ಸಂದರ್ಭ, ಪತ್ರಿಕೆಗಳಲ್ಲಿ ಬಂದಿರುವಂಥಾದ್ದು, ಮತ್ತೆ ಈಗ ಏನು ಚರ್ಚೆಯಾಯಿತು, ಜನತಾ ಪರಿವಾರದವರು ಸಭೆಯಿಂದ ಹೊರಗೆ ಹೋಗಿದ್ದಾರೆ. ದಯವಿಟ್ಟು ಅವರನ್ನು ಸಭೆಗೆ ಕರೆಸುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕು.

ಅಧ್ಯಕ್ಷರು :- ನಾನು ಕಾರ್ಯದರ್ಶಿಯವರ ಕೈಯಲ್ಲಿ ಹೇಳಿ ಕಳುಹಿಸಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ :- ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಒಂದು ಪ್ರಮುಖ ರಾಜಕೀಯ ಪಕ್ಷವನ್ನು ಹೊರಗಿಟ್ಟು, ಸದನದಲ್ಲಿ ಚರ್ಚೆ ಮಾಡುವುದು ಬೇಡವೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ದಯವಿಟ್ಟು ಅವರನ್ನು ಸಭೆಗೆ ಕರೆಸುವಂತಹ ವ್ಯವಸ್ಥೆಯನ್ನು ಮಾಡಿ.

Mr. Speaker : I do agree. ನಮ್ಮ ಕಾರ್ಯದರ್ಶಿಯವರು ಹೋಗಿ ಮಾತನಾಡಿಕೊಂಡು ಬಂದಿದ್ದಾರಲ್ಲಾ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ನಾನು ಚರ್ಚೆಯನ್ನು ಮುಂದುವರೆಸುತ್ತೇನೆ. ಇವತ್ತು ಪತ್ರಿಕೆಗಳಲ್ಲಿ ಬಂದಿರುವಂತಹ ವಿಷಯ, ಮತ್ತೆ ನಿನ್ನೆ ರಾತ್ರಿ ಪ್ರಮುಖ ಎಲೆಕ್ಟ್ರಾನಿಕ್ ಮಾಧ್ಯಮವಾದ ಟಿ.ವಿ. ಚಾನಲ್‌ಗಳಲ್ಲಿ ಈ ಸುದ್ದಿ ಬಿತ್ತರಿಸುವಂತಹ ಸಂದರ್ಭದಲ್ಲಿ ಬಂದಂತಹ ವಿಷಯಗಳನ್ನು ನೋಡಿದಾಗ, ಇವತ್ತು ರಾಜ್ಯದಲ್ಲಿ ಯಾವ ರೀತಿಯ ಹಗರಣವೆಂದರೆ ಕೇವಲ 5 ಕೋಟಿ, ರೂ. 10 ಕೋಟಿ ರೂಪಾಯಿಗಳಲ್ಲಿ ಹಿಂದೆ ಬೊಫೋರ್ಸ್ ಹಗರಣ 67 ಕೋಟಿ ರೂಪಾಯಿಗಳದಾಗಿತ್ತು. ಇಡೀ ರಾಷ್ಟ್ರದಲ್ಲಿ ಯುದ್ಧ ಆದಾಗ, ಆದರೆ ಇವತ್ತು 100,200,300,500, 1000 ಕೋಟಿ ರೂಪಾಯಿಗಳ ಹಗರಣಗಳು ಹೊರಗಡೆ ಬರುತ್ತಿವೆ. ಹೀಗಾಗಿ ಇವತ್ತು ಲೋಕಾಯುಕ್ತರೇ ಹೋಗಿ 300 ಕೋಟಿ ರೂಪಾಯಿಗಳ ಹಗರಣ, ನಕಲಿ ಔಷಧಿಗಳು ಇದೆಯೆಂಬುದನ್ನು ಪತ್ತೆ ಹಚ್ಚುವಂತಹ ಕೆಲಸ, ಮತ್ತೆ ಯಾವ್ಯಾವ ಔಷಧಿಗಳು ನಕಲಿ ಮಾಡಿ ಮಾರಾಟವಾಗುತ್ತಿದೆ, ಸಪ್ಲೈ ಆಗುತ್ತಿದೆ ಎಂಬುದನ್ನು ಮಾನ್ಯ ಲೋಕಾಯುಕ್ತ ನ್ಯಾಯಮೂರ್ತಿ ಆದಂತಹ ಶ್ರೀ ವೆಂಕಟಾಚಲಯ್ಯನವರು ನಿನ್ನೆ ಡ್ರಗ್ ಕಂಟ್ರೋಲ್ ಕಚೇರಿಗೆ ಧಾಳಿ ಮಾಡಿದಂತಹ ಸಂದರ್ಭದಲ್ಲಿ ಹೊರಗಡೆ ಬಂದಂತಹ ವಿಷಯಗಳಾಗಿದೆ. ಇವತ್ತು ಇವರು ಲೋಕಾಯುಕ್ತದಲ್ಲಿ ಅಧಿಕಾರವನ್ನು ತೆಗೆದುಕೊಂಡ ನಂತರ, ಆವತ್ತಿನಿಂದಲೂ ಇಲ್ಲಿಯವರೆಗೂ ನಾವು ನೋಡುತ್ತಿದ್ದೇವೆ. ಸರ್ಕಾರದ ಕಚೇರಿಗಳಿಗೆ ಧಾಳಿ ಮಾಡುವಂಥಾದ್ದು, ಆಸ್ಪತ್ರೆಗಳಿಗೆ ಧಾಳಿ ಮಾಡುವಂಥಾದ್ದು, ಸಬ್ ರಿಜಿಸ್ಟ್ರಾರ್ ಕಚೇರಿಗಳಿಗೆ ಧಾಳಿ ಮಾಡುವಂಥಾದ್ದು. ಎಲ್ಲೆಲ್ಲಿ ದೂರುಗಳು ಬಂದಿವೆ. ಅಲ್ಲಿಗೆ ತಕ್ಷಣವೇ ಪ್ರತಿಕ್ರಿಯಿಸಿ ಮಾಹಿತಿಗಳನ್ನು ಕಲೆಕ್ಟ್ ಮಾಡಿಕೊಂಡು ಆ ಕಚೇರಿಗಳ ಮೇಲೆ ಧಾಳಿ ಮಾಡಿ. ಭ್ರಷ್ಟಾಚಾರದ ಅವ್ಯವಹಾರಗಳನ್ನು ಹೊರಗೆ ತರುವಂತಹ ಉತ್ತಮವಾದಂತಹ ಕೆಲಸವನ್ನು ಮಾನ್ಯ ವೆಂಕಟಾಚಲಯ್ಯನವರು ಮಾಡುತ್ತಿದ್ದಾರೆ. ನಾನು ಅವರಿಗೆ ವಿಶೇಷವಾದಂತಹ

ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಈ ಲೋಕಾಯುಕ್ತವೆನ್ನುವಂಥಾದ್ದು ಸಾರ್ವಜನಿಕರಿಗೆ ಯಾರಿಗೂ ಗೊತ್ತಿರಲಿಲ್ಲ; ಇದು ಅಸ್ತಿತ್ವದಲ್ಲಿದೆ ಎಂಬುದೂ ಕೂಡ ಯಾರಿಗೂ ಗೊತ್ತಿರಲಿಲ್ಲ. ಅಂಥಾದ್ದರಲ್ಲಿ ಮಾನ್ಯ ವೆಂಕಟಾಚಲಯ್ಯನವರು ಬಹಳ ಅತ್ಯುತ್ತಮವಾದಂತಹ ಕೆಲಸವನ್ನು ಮಾಡುತ್ತಿದ್ದಾರೆ, ಮತ್ತೆ ಈ ರೀತಿ ಸಾರ್ವಜನಿಕರಿಗೂ ಅನ್ನಿಸಿದೆ.

ಸಾರ್ವಜನಿಕರಿಗೂ ಕೂಡ, ಹೌದು ಇಲ್ಲಿ ಲೋಕಾಯುಕ್ತ ಇದೆ. ಭ್ರಷ್ಟಾಚಾರ ವಿರುದ್ಧ ಹೋರಾಟ ಮಾಡುವುದಕ್ಕೆ ಇಲ್ಲೊಂದು ವೇದಿಕೆ ಇದೆ. ನಾವೇನಾದರೂ ದೂರನ್ನು ಕೊಟ್ಟರೆ, ಅದಕ್ಕೆ ಸರಿಯಾದ ಸ್ಪಂದನೆ ಸಿಗುತ್ತದೆ ಎನ್ನುವ ನಂಬಿಕೆ ಹಾಗೂ ವಿಶ್ವಾಸವನ್ನು ವ್ಯಕ್ತಪಡಿಸುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ಸಲ, ಭ್ರಷ್ಟಾಚಾರದ ವಿರುದ್ಧ ನಾನು ಧರ್ಮ ಯುದ್ಧಮಾಡುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಇದಕ್ಕೆ ಪೂರಕವಾಗಿ ನಾನು ಕೇಳುವುದೇನೆಂದರೆ, ಅಥವಾ ಹಿಂದೆ ಹಲವಾರು ವಿಷಯಗಳಲ್ಲಿ ಲೋಕಾಯುಕ್ತರು ಧಾಳಿ ಮಾಡಿದ ಸಂದರ್ಭದಲ್ಲಿ ಯಾವ ಅಧಿಕಾರಿಗಳು ತಪ್ಪಿತಸ್ಥರಿದ್ದಾರೆ. ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಇವತ್ತು ಸಿಎಂಸಿ ಹಗರಣ ಹೊರಗೆ ಬಂತು. ಈ ಹಗರಣದಲ್ಲಿ ಇನ್ನೂ ದೊಡ್ಡ ದೊಡ್ಡ ಕುಳಗಳೇ ಇದ್ದಾರೆಂದು ನಾವು ಹೇಳಿದೆವು. ನಾಲ್ಕೈದು ಜನರನ್ನು ಅಮಾನಿತ್ತಿನಲ್ಲಿಟ್ಟರು. ಬಹುಶಃ ರಿ ಇನ್‌ಸ್ಟೇಟ್ ಆಗಿದ್ದರೂ ಆಗಿರಬಹುದು ಆದರೆ ಇನ್ನೂ ದೊಡ್ಡ ದೊಡ್ಡ ಅಧಿಕಾರಿಗಳಿದ್ದಾರೆಂದು ಹೇಳಿದರು. ಇನ್ನೂರು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಗರಣ ಆ ಸಿಎಂಸಿಯಲ್ಲಿ ನಡೆಯಿತು ಅದೇ ರೀತಿ ಇವತ್ತು ಬೇರೆ ಬೇರೆ ಹಗರಣಗಳು ನಡೆಯುತ್ತಿವೆ. ಸಾಕಷ್ಟು ಹೊರಗೆ ಬಂದಿದ್ದಾವೆ. ಎಷ್ಟು ಹಗರಣದಲ್ಲಿ ಎಷ್ಟು ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟಿದ್ದಾರೆಂಬುದು ನಮಗೆ ಗೊತ್ತಿಲ್ಲ. ಎಷ್ಟೆಷ್ಟು ದೊಡ್ಡ ದೊಡ್ಡ ವ್ಯಕ್ತಿಗಳ ಮೇಲೆ ಕ್ರಿಮಿನಲ್ ಕೇಸ್‌ಗಳನ್ನು ಹಾಕಿದ್ದಾರೆಂಬುದು ಗೊತ್ತಿಲ್ಲ. ಒಂದು ರೀತಿಯಲ್ಲಿ ಲೋಕಾಯುಕ್ತರು ಧಾಳಿ ಮಾಡುವುದು. ಭ್ರಷ್ಟಾಚಾರದ ಹಗರಣಗಳನ್ನು ಹೊರಗೆ ಹಾಕುವುದು ಆದರೆ ಮುಂದೇನು ಎನ್ನುವ ಪ್ರಶ್ನೆ ಬರುತ್ತದೆ. ಇವತ್ತು ಬೆಂಗಳೂರಿನ ಅರಮನೆ ರಸ್ತೆಯಲ್ಲಿರುವ ಔಷಧ ನಿಯಂತ್ರಕರ ಕೇಂದ್ರ ಕಛೇರಿಯ ಮೇಲೆ ಧಾಳಿ ಮಾಡಿದ್ದಾರೆ. ಅವರು ಧಾಳಿ ಮಾಡಿದಂತಹ ಸಂದರ್ಭದಲ್ಲಿ ಪ್ರತಿಷ್ಠಿತ ಔಷಧ ತಯಾರಿಕೆ ಸಂಸ್ಥೆಗಳು, ಹಾಗೂ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಕಂಪನಿಗಳ ಔಷಧಿಗಳನ್ನು ನಕಲಿ ಮಾಡಲಾಗುತ್ತಿದೆ ಎಂದು ಬೆಂಗಳೂರಿನಲ್ಲಿರುವ ಔಷಧನಿಯಂತ್ರಕರ ಕಛೇರಿಗೆ ಈಗಾಗಲೇ ಸಾಕಷ್ಟು ಸಲ ಲಿಖಿತವಾದಂಥ ತಕರಾರನ್ನು ಕೊಟ್ಟಿದ್ದಾರೆ. ಮಲ್ಟಿನ್ಯಾಷನಲ್ ಕಂಪನಿಗಳಿರಬಹುದು ಅಥವಾ ನಮ್ಮ ದೇಶದಲ್ಲಿ ಇರುವಂತಹ ಉತ್ತಮ ಔಷಧ ಕಂಪನಿಗಳಿರಬಹುದು. ನಮ್ಮ ಕಂಪನಿಯ ಹೆಸರಿನಲ್ಲಿ ನಕಲಿ ಔಷಧಗಳು ಇವತ್ತು ಮಾರಾಟವಾಗುತ್ತಿವೆ ಸರ್ಕಾರ ಅದಕ್ಕೆ ಪ್ರೋತ್ಸಾಹ ಮಾಡುತ್ತಿದೆ ಎನ್ನುವ ದೂರನ್ನು ಸರ್ಕಾರಕ್ಕೆ ಕೊಟ್ಟಾಗಲೂ ಕೂಡ ಇಲ್ಲಿಯವರೆಗೆ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆ. ಅದರ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಳ್ಳಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು) :- ಅಧ್ಯಕ್ಷರೇ, ಚರ್ಚೆ ಮಾಡುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಪ್ರಿಲಿಮಿನರಿ ಸಬ್‌ಮಿಷನ್ ಮಾಡುವಾಗ ನಾನೇನು ತಮ್ಮ ಗಮನಕ್ಕೆ ತರಬಯಸುತ್ತೇನೆಂದರೆ, ರೂಲ್ 63 ಪ್ರಕಾರ, ಈಗ

ಅವರು ತನಿಖೆ ಮಾಡತಕ್ಕಂಥ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ನಾವು ಇಲ್ಲಿ ಚರ್ಚೆ ಮಾಡುವುದರಿಂದ ತನಿಖೆಗೆ ಯಾವುದೇ ರೀತಿಯಲ್ಲಿ ಬಾಧಕ ಆಗಬಾರದು ಎನ್ನುವುದು ನನ್ನ ಮುಖ್ಯ ಉದ್ದೇಶ.

Sri Visweswara Hegde Kageri : It is not a court.

ಶ್ರೀ ಜಗದೀಶ್ ಶೆಟ್ಟರ್ :- ಲೋಕಾಯುಕ್ತದಲ್ಲಿ ಕೇಸ್ ಪೆಂಡಿಂಗ್ ಇದೆ. ಇದೇ ರೀತಿ ತಮ್ಮದು ಮುಂದುವರಿದಿದೆ.

ಶ್ರೀ ಕಾಗೋಡು ತಿಮ್ಮಪ್ಪ :- ಸ್ವಲ್ಪ ತಾಳಿ. ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆಯಿಂದ ಈ ವಿಷಯವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

"No motion which seeks to raise discussion on a matter pending before any statutory tribunal or statutory authority performing any judicial or quasi-judicial functions or any commission or court of enquiry appointed to enquire into or investigate any matter shall ordinarily be permitted to be moved:

Provided that the Speaker may in his discretion allow such matter being raised in the House as is concerned with the procedure or subject or stage of enquiry if the Speaker is satisfied that it is not likely to prejudice the consideration of such matter by the statutory tribunal, statutory authority commission or court of enquiry".

By raising a discussion, there should not be any obstruction for fair and free investigation and enquiry, because this is a statutory authority. ಆದುದರಿಂದ, ಇದೊಂದು ಕಾನೂನು ಬದ್ಧವಾದ ಸಂಸ್ಥೆ ಇದೆ. ಈ ವಿಚಾರವನ್ನು ಅವರು ಕೈಗೆತ್ತಿಕೊಂಡಿದ್ದಾರೆ, ತನಿಖೆ ಮಾಡುತ್ತಿದ್ದಾರೆ. ನಾವು ಈ ವಿಚಾರದಲ್ಲಿ ಚರ್ಚೆ ಮಾಡುವುದರಿಂದ ಅವರ ತನಿಖೆಗೆ ಬಾಧಕವಾಗುವಂತಹ ಸನ್ನಿವೇಶ ಉಂಟಾಗಬಹುದು ಎಂಬುದು ನನ್ನ ಆತಂಕ, ಆದಕ್ಕೆ ಮಾನ್ಯ ಸಭಾಧ್ಯಕ್ಷರೆ, ಅದನ್ನು ನಿರ್ಧರಿಸುವ ಅಧಿಕಾರವನ್ನು ತಮಗೆ ಬಿಟ್ಟಿರುವುದು. ಈ ವಿಚಾರ ಲೋಕಾಯುಕ್ತ ತನಿಖೆಯ ವ್ಯಾಪ್ತಿಯಲ್ಲಿರುವುದರಿಂದ ಆ ತನಿಖೆಗೆ ಬಾಧಕವಾಗದ ರೀತಿಯಲ್ಲಿ ಈ ಚರ್ಚೆಗೆ ಅವಕಾಶ ಮಾಡಿಕೊಂಡಬೇಕು.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ರೂಲ್ಸ್ ಹೇಳಿದರು. ಒಂದು ವಿಚಾರ ತಾವು ಈಗಾಗಲೇ ಈ ವಿಚಾರವನ್ನು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿದ್ದೀರಿ, ತಮಗೆ ಡಿಸ್ಕ್ರಿಷಿನರಿ ಪವರ್ಸ್ ಇದೆ ಎಂದು ರೂಲ್ಸ್‌ನಲ್ಲಿ ಹೇಳಲಾಗಿದೆ. ಮತ್ತೆ ಇವತ್ತು ಲೋಕಾಯುಕ್ತರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೇವೆ. ಲೋಕಾಯುಕ್ತರು ಏನು ಮಾಡುತ್ತಿದ್ದಾರೆ ಅದನ್ನು ಮಾಡಲಿ, ಅವರು ನಿಮಗೆ 22 ಸೂಚನೆಗಳನ್ನು ಸರ್ಕಾರಕ್ಕೆ, ಮಾನ್ಯ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದರು. ಲೋಕಾಯುಕ್ತವನ್ನು ಬಲಯುತ ಮಾಡಬೇಕಾಗಿದೆ ಮತ್ತಷ್ಟು ಶಕ್ತಿ ಕೊಡಬೇಕಾಗಿದೆ. ಇನ್ನು ಜಾಸ್ತಿ ಅಧಿಕಾರವನ್ನು ಅವರಿಗೆ ಕೊಡಬೇಕು ಎಂದು

ಬಹಳ ಕಡೆ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟರು. ಆದರೆ ಇವತ್ತು ಏನು ಅಧಿಕಾರ ಕೊಟ್ಟಿದ್ದಾರೆಂದು ನೋಡಿದರೆ ಏನೂ ಇಲ್ಲ. ನ್ಯಾಯಮೂರ್ತಿಗಳಾದ ವೆಂಕಟಾಚಲರವರು ಲೋಕಾಯುಕ್ತವನ್ನು ಬಲಯುತ ಮಾಡಲು, ಇಂತಹ ಅಧಿಕಾರ ಕೊಡಿ, ನನ್ನನ್ನು ಸ್ಟ್ರೆಂಥನ್ ಮಾಡಿ ಎಂದು ಹೇಳಿದರು. ತಾವೇನು ಲೋಕಾಯುಕ್ತರನ್ನು ಸ್ಟ್ರೆಂಥನ್ ಮಾಡಿದಿರಿ? ಲೋಕಾಯುಕ್ತವನ್ನು ಸ್ಟ್ರೆಂಥನ್ ಮಾಡುವುದಕ್ಕೆ ನಾವು ಇಲ್ಲಿ ಡಿಬೇಟ್ ಮಾಡುತ್ತಿದ್ದೇವೆ. ಧೈರ್ಯದಿಂದ ಅವರು ತನಿಖೆ ಸರಿಯಾದ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ನೀವು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಎನ್ನುವ ರೀತಿಯಲ್ಲಿ ನಾವು ಹೇಳುತ್ತಿದ್ದೇವೆ. ಆ ಲೋಕಾಯುಕ್ತ ತನಿಖೆಗೆ ಪೂರಕವಾಗಿ ಇಲ್ಲಿ ನಾವು ಚರ್ಚೆ ಮಾಡುತ್ತಿದ್ದೇವೆ. ಅದಕ್ಕೆ ವ್ಯತಿರಿಕ್ತವಾಗಿ, ಲೋಕಾಯುಕ್ತ ತಪ್ಪು ಮಾಡಿದ್ದಾರೆ. ಯಾರ ಮೇಲೋ ರೇಡ್ ಮಾಡಿದ್ದಾರೆ. ಅವರು ಮಾಡಿದ್ದು ಸರಿಯಲ್ಲವೆಂದು ಅವರು ಮಾಡುವ ತನಿಖೆಗೆ ಅಡ್ಡಿಪಡಿಸುತ್ತಿಲ್ಲ. ಇವತ್ತೇನು ಮಂತ್ರಿಗಳು ನಿಯಮವನ್ನು ಇಲ್ಲಿ ಓದಿದಿರಿ ಅದು ಇಲ್ಲಿ ಅನ್ವಯವಾಗುವುದಿಲ್ಲ. ಈಗಾಗಲೇ ಮಾನ್ಯ ಸಭಾಧ್ಯಕ್ಷರು ಈ ವಿಚಾರದಲ್ಲಿ ಚರ್ಚೆ ಮಾಡಲು ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅನುಮತಿಯನ್ನು ಕೊಟ್ಟಿದ್ದಾರೆ. ಹೀಗಾಗಿ ಅದು ಅಪ್ಲೈ ಆಗುವುದಿಲ್ಲವೆನ್ನುವ ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು :- ಆದುದರಿಂದ, ತಾವು ಪ್ರಿಲಿಮಿನರಿ ಸಬ್‌ಮಿಷನಲ್ಲಿ ವಿಚಾರವನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ :- ದಯವಿಟ್ಟು, ನಾವು ಕೆಲವೊಂದು ವಿಚಾರಗಳನ್ನು ತಮಗೆ ಕನ್ವಿನ್ಸ್ ಮಾಡಲು ತರಲೇ ಬೇಕಾಗುತ್ತದೆ. ತಾವು ಈ ರೀತಿಯಾಗಿ ಪ್ರತಿ ಸಾರಿಯೂ ಹೇಳುತ್ತೀರಿ. ಆ ವಿಚಾರವನ್ನು ತಮ್ಮ ಹಾಗೂ ಈ ಸದನದ ಗಮನಕ್ಕೆ ತರಬೇಕಾಗುತ್ತದೆ. ಎರಡೆರಡು, ನಾಲ್ಕು ನಾಲ್ಕು ತಾಸು, ಇಡೀ ದಿವಸ ಪ್ರಿಲಿಮಿನರಿ ಸಬ್‌ಮಿಷನ್ ಮೇಲೆ ಇಲ್ಲಿ ಚರ್ಚೆ ನಡೆದಿರುವ ಉದಾಹರಣೆಗಳಿವೆ. ಚರ್ಚೆಯಾದ ಪ್ರೊಸೀಡಿಂಗ್ಸ್ ಅನ್ನು ತಮಗೆ ಕೊಡುತ್ತೇವೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿರೋಧಪಕ್ಷದಲ್ಲಿದ್ದಾಗ ಆರು ಗಂಟೆ ಕಾಲ ಮಾತನಾಡಿರುವ ಪ್ರೊಸೀಡಿಂಗ್ಸ್ ಅನ್ನು ನಾನು ಕೊಡುತ್ತೇನೆ. ಆದರೆ ಮಾನ್ಯ ಕಾಗೋಡು ತಿಮ್ಮಪ್ಪನವರು ಆ ಕಡೆಗೆ ಹೋದ ಮೇಲೆ ಈ ರೀತಿಯಾಗಿ ಮಾತನಾಡುವುದು ಸರಿಯಲ್ಲ. ಇಲ್ಲಿ ಕುಳಿತಾಗ ಏನು ಮಾಡಿದಿರಿ. within the purview of the rules ನಾವು ಕನ್ವಿನ್ಸ್ ಮಾಡುತ್ತೇವೆ.

ಅಧ್ಯಕ್ಷರು :- ಮಾನ್ಯ ಮಂತ್ರಿಗಳು, ನಮ್ಮ ರೂಲ್ಸ್‌ನಲ್ಲಿ ಏನು ಹೇಳಲಾಗಿದೆ ಅದನ್ನು ಹೇಳಿದ್ದಾರೆ ಅಷ್ಟೆ; ರೂಲ್ಸ್ ಹೀಗೆ ಹೇಳುತ್ತದೆಂದು ನನ್ನ ಗಮನಕ್ಕೆ ತರುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಸಭಾಧ್ಯಕ್ಷರೆ, ಇದು ಸಾರ್ವಜನಿಕ ಮಹತ್ವವುಳ್ಳ ವಿಷಯ. ಈ ವಿಷಯಗಳ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಭ್ರಷ್ಟಾಚಾರ ವಿರುದ್ಧ ಧರ್ಮಯುದ್ಧವೆಂದು ಹೇಳಿದ್ದಾರೆ. ಅದಕ್ಕಾಗಿ ಇದರ ಮೇಲೆ ಚರ್ಚೆಯಾಗಬೇಕಾಗುತ್ತದೆ. ಭ್ರಷ್ಟಾಚಾರ, ಕೇವಲ 10, 20, 30 ಕೋಟಿ ರೂಪಾಯಿಗಳಿಗಷ್ಟೆ ಸೀಮಿತವಾಗಿಲ್ಲ ಕರ್ನಾಟಕ ರಾಜ್ಯದಲ್ಲಿ ನೂರು ನೂರು ಕೋಟಿ ರೂಪಾಯಿಗಳ ಹಗರಣಗಳು ನಡೆದಿವೆ; ಸಿಎಂಸಿ ಹಗರಣ ಹೊರಗೆ ಬಂತು ಇವತ್ತು ಈ ರೀತಿಯ ಪ್ರತಿಷ್ಠಿತ ಕಂಪನಿಗಳು, ಇವತ್ತು ನಮ್ಮ ಕಂಪನಿಯ ಲೇಬಲ್ ಮೇಲೆ ನಕಲಿ ಔಷಧಗಳು ಮಾರಾಟವಾಗುತ್ತಿವೆ, ಸರಬರಾಜಾಗುತ್ತಿದೆ. ಅದಕ್ಕೆ

ಇವರು ಪ್ರೋತ್ಸಾಹ ಕೊಡುತ್ತಿದ್ದಾರೆ ಎಂದು ದೂರು ಕೊಟ್ಟಾಗಲೂ ಕೂಡ ಸರ್ಕಾರ ಗಮನಿಸಲಿಲ್ಲ ಸರ್ಕಾರ ಮಲಗಿತ್ತು. ಹೀಗಾಗಿ ಇದು ಹೀಗೆ ನಡೆದುಕೊಂಡು ಹೋಯಿತು. ಇಲ್ಲಿ ಕೆಲವೊಂದು ವಿವರಗಳನ್ನು ಹೇಳಿದ್ದಾರೆ ಪ್ರೆಮಿಸೆಂಟೀನ್ ಆಂಟಿಬಾಯೋಟಿಕ್ ಅನ್ನು ತೇಜ್‌ಪಾಲ್ ಎನ್ನುವ ಕಂಪನಿ ಸರಬರಾಜು ಮಾಡುತ್ತಿದ್ದು ಇತರ ಐದು ಕಂಪನಿಗಳು ಈ ಔಷಧಿಯನ್ನು ನಕಲಿ ಮಾಡಿ ಸರಬರಾಜು ಮಾಡುತ್ತಿದ್ದವು, ಆಂಟಿಬಾಯೋಟಿಕ್ ಟ್ಯಾಬಲೆಟ್ಸ್ ಏನಿದ್ದಾವೆ ಅವನ್ನು ತೇಜ್‌ಪಾಲ್ ಕಂಪನಿ ಸರಬರಾಜು ಮಾಡುತ್ತಿತ್ತು. ಅದನ್ನು ನಕಲಿ ಕಂಪನಿಗಳು ಸರಬರಾಜು ಮಾಡಲು ಹೊರಟವು.

ಶ್ರೀ ಕಾಗೋಡು ತಿಮ್ಮಪ್ಪ :- ಅಲ್ಲೆ ಪ್ರಶ್ನೆ ಆಗುವುದು, Lok Ayuktha has seized the matter. This has to be investigated into to establish a case. ಅವರು ತನಿಖೆ ಮಾಡುತ್ತಿರುವಾಗ ನಾವು ಅದೇ ವಿಚಾರವನ್ನು ಇಲ್ಲಿ ಚರ್ಚೆ ಮಾಡಿದರೆ ಇದು ಪ್ರಿಜ್ಯುಡಿಸ್ ಆಗುವುದಿಲ್ಲವೇ?

ಶ್ರೀ ಜಗದೀಶ್ ಶೆಟ್ಟರ್ :- ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಹೇಳುತ್ತಿದ್ದೇನೆ, ಇದರಲ್ಲಿ ಯಾರ್‍ಯಾರು ಇದ್ದಾರೆನ್ನುವುದನ್ನು ಬಹಿರಂಗವಾಗಿ ಟಿವಿಯಲ್ಲಿ ತೋರಿಸಿದರು. ಹಾಗಾದರೆ ಟಿವಿಯನ್ನೇ ಬ್ಯಾನ್ ಮಾಡಿ

ಶ್ರೀ ಕಾಗೋಡು ತಿಮ್ಮಪ್ಪ :- ತಾವು ಅಡ್ವೋಕೇಟ್ ಇದ್ದೀರಿ. ತಾವು ಚರ್ಚೆ ಮಾಡುವುದನ್ನು ಬೇಡವೆಂದು ನಾನು ಹೇಳುವುದಿಲ್ಲ Purely it is a technical matter. Lok Ayuktha is investigating into the matter ಅದರ ಫೈಂಡಿಂಗ್ಸ್ ನಮಗೆ ಬಂದಿಲ್ಲ, ಫೈಂಡಿಂಗ್ಸ್ ಬರುವವರೆಗೆ ಕಾಯಿರಿ ನಾವೇಕೆ ಪ್ರಿಜ್ಯುಡಿಸ್ ಮಾಡಬೇಕೆಂದು ನಾನು ಹೇಳಿದ್ದು.

ಶ್ರೀ ಜಗದೀಶ್ ಶೆಟ್ಟರ್ :- ಈ ರೀತಿ ಅಲಿಗೇಷನ್ ಆಗಿದೆ ಎಂದು ಹೇಳಬಾರದೆ?

ಶ್ರೀ ಕಾಗೋಡು ತಿಮ್ಮಪ್ಪ :- ನಾನು, ನೀವು ಅಲಿಗೇಷನ್ ಮಾಡಬಹುದು, But Lok Ayuktha is there for investigation.

ಶ್ರೀ ಆರಗಜ್ಞಾನೇಂದ್ರ :- ಒಟ್ಟಾರೆಯಾಗಿ ಈ ಚರ್ಚೆಯ ಹಳಿ ತಪ್ಪಿಸುವಂತಹ ಕೆಲಸ ನಡೆಯುತ್ತಿದೆ.

11.40 ಎ.ಎಂ

(ಗೊಂದಲ)

ಅಧ್ಯಕ್ಷರು :- ನನ್ನ ಪರ್ಮಿಷನ್ ಇಲ್ಲದೆ ಯಾರಾದರೂ ಮಾತನಾಡಿದರೆ ಅದನ್ನು ಬರೆದುಕೊಳ್ಳಬೇಡಿ. ನಾನು ಯಾರಿಗೆ ಪರ್ಮಿಟ್ ಮಾಡುತ್ತೇನೆ, ಅವರು ಹೇಳಿದ್ದನ್ನು ಮಾತ್ರ ಬರೆದುಕೊಳ್ಳಿ. Don't take down. ಶ್ರೀ ಶೆಟ್ಟರ್‌ರವರೇ ತಾವು ಮಾತನಾಡಿ ಅವರು ಯೀಲ್ಡ್ ಆಗುವುದು, ನೀವು ಮಾತನಾಡುವುದು, where is the end.

ಶ್ರೀ ಎನ್. ಯೋಗೀಶ್ ಭಟ್ :- ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ, ನಕಲಿ ಔಷಧಿಗಳ ಬಗ್ಗೆ ಸದನದಲ್ಲಿ ನಾನು ಪ್ರಸ್ತಾಪಿಸಿದ್ದೆ. ಸುಮಾರು ಒಂದೂವರೆ ಕೋಟಿ ರೂಪಾಯಿಗಳಷ್ಟು ಔಷಧಿಗಳು ಯಾವ ರೀತಿಯಲ್ಲಿ ವಿತರಣೆಯಾಗಿದೆ, ಹೇಗೆಂದು ಹೇಳಿದ್ದೇನೆ.

ಅಧ್ಯಕ್ಷರು :- ನಿಮ್ಮ ನಾಯಕರು ಮಾತನಾಡುವಾಗ ನೀವೇಕೆ ಮಾತನಾಡುತ್ತೀರಿ?

ಶ್ರೀ ಎನ್. ಯೋಗೀಶ್ ಭಟ್ :- ಇದು ಹೊಸ ಸುದ್ದಿ ಅಲ್ಲ. ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ವರ್ಷದ ಹಿಂದೆ 17 ಕೇಸ್ ಬುಕ್ ಮಾಡಿದ್ದಾರೆ.

(ಗೊಂದಲ)

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಜೆಡಿ (ಎಸ್) ಪಕ್ಷದವರಿಗೂ ಅವಕಾಶ ಕೊಡಬೇಕು.

ಅಧ್ಯಕ್ಷರು :- ಬರೆದು ಕಳುಹಿಸಿ, ಆಮೇಲೆ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ :- ಇಲ್ಲಿ ಇನ್ನೂ ಹಲವಾರು ಕಂಪನಿಗಳ ಬಗ್ಗೆ, ಇವತ್ತು ನಕಲಿ ಔಷಧಿಗಳು ಮಾರಾಟವಾಗುತ್ತಿರುವ ಬಗ್ಗೆ ಮತ್ತು ಇವತ್ತು ಒಂದು ಔಷಧಿ ಎನ್ನುತ್ತಾರೆ. ಇಡೀ ರಾಜ್ಯದಲ್ಲಿ ಸರ್ಕಾರ ಆಸ್ಪತ್ರೆಗೆ ಕೊಟ್ಟಿದ್ದಾರೆ. ಕೋಟ್ಯಾಂತರ ಜನರು ಅದನ್ನು ಉಪಯೋಗಿಸುತ್ತಿದ್ದಾರೆ. ಅದು ನಕಲಿ. ಅದರಿಂದೇನೂ ಆಗುವುದಿಲ್ಲ. ಅದರಿಂದ ಯಾವ ಪರಿಣಾಮವೂ ಆಗುವುದಿಲ್ಲ. ಇನ್ನೂ ಕೆಲವೊಂದು ನಕಲಿ ಔಷಧಿಗಳಿವೆ. ನಾಳೆ ಜೀವ ತೆಗೆದುಕೊಂಡು ಹೋಗುವಂತಹ ನಕಲಿ ಔಷಧಿಗಳಿವೆ. ಅಂದರೆ, ಇವತ್ತು ಕೇವಲ ಒಂದು ಲಾಭಕ್ಕಾಗಿ, ಸ್ವಂತ ಲಾಭಕ್ಕಾಗಿ ಮತ್ತು ಕೋಟ್ಯಾಂತರ ರೂಪಾಯಿಗಳನ್ನು ಈಜಿ ಮನಿ ಮಾಡಬೇಕೆಂದು ಈ ರೀತಿಯಾದ ನಕಲಿ ಔಷಧಿ ಕಂಪನಿಗಳು ಮತ್ತು ಅಧಿಕಾರಿಗಳು, ಇನ್ನೂ ದೊಡ್ಡವರು ಇದರಲ್ಲಿ ಇನ್‌ವಾಲ್ವ್‌ಮೆಂಟ್ ಇದ್ದದ್ದರಿಂದ, ಈ ರೀತಿಯಾದ ಹಗರಣಗಳು ನಡೆಯಲಿಕ್ಕೆ ಪ್ರಾರಂಭವಾಗಿವೆ. ಹೀಗಾಗಿ ಈ ರೀತಿ ಇವತ್ತು ಹಲವಾರು ಉದಾಹರಣೆಗಳನ್ನು ಇಲ್ಲಿ ಕೊಟ್ಟಿದ್ದಾರೆ. ಇಲ್ಲಿ Cosmati forte ಎಂಬ anti-bacterial ಔಷಧಿಗಳ ಬಗ್ಗೆ, ಈ ರೀತಿ ಅಲ್ಲಿ ಬ್ಯಾಕ್ಟೀರಿಯಾ ಔಷಧಿಗಳು ರಾಸಾಯನಿಕದಿಂದ ಕಲುಷಿತವಾಗಿವೆ ಎಂಬ ಆಪಾದನೆ ಬಂದಿದೆ. ಇವತ್ತು ಹಲವಾರು ಉದಾಹರಣೆಗಳನ್ನು ಕೊಡಬಹುದು. ಇವತ್ತು ಲೋಕಾಯುಕ್ತರು ತನಿಖೆ ಮಾಡುವ ಸಂದರ್ಭದಲ್ಲಿ ಇದನ್ನೆಲ್ಲಾ ಸೀಜ್ ಮಾಡಬಹುದು. ಯಾವುದು ನಕಲಿ ಇದೆ, ನಕಲಿ ಲೇಬಲ್ ಹಾಕಿ ಔಷಧಿ ಮಾಡುತ್ತಿದ್ದಾರೆ, ಸಪ್ಲೈ ಮಾಡುತ್ತಿದ್ದಾರೆ, ಇದನ್ನೆಲ್ಲಾ ಸೀಜ್ ಮಾಡಿದ್ದಾರೆ. ಹೀಗಾಗಿ, ಸೀಜ್ ಮಾಡುವ ಸಂದರ್ಭದಲ್ಲಿ ಇದರ ಬಗ್ಗೆ ಸಂಪೂರ್ಣವಾದ ತನಿಖೆ ಆಗಬೇಕಾಗುತ್ತದೆ. ಇದರಲ್ಲಿ ಯಾರ್ಯಾರ ಇನ್‌ವಾಲ್ವ್‌ಮೆಂಟ್ ಇದೆ ಎಂಬುದು ಗೊತ್ತಾಗಬೇಕು ಏಕೆಂದರೆ, ಇಲ್ಲಿಯವರೆಗೆ ಕಥೆ ನೋಡಿದ್ದೇವೆ. ಇಲ್ಲಿಯವರೆಗೆ ಯಾವ್ಯಾವ ಹಗರಣಗಳು ಹೊರಗೆ ಬಂದಿವೆ. ಮೊನ್ನೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಸಂದರ್ಭದಲ್ಲಿ ನಾನು ಮಾತನಾಡಿದಾಗ ಮುಖ್ಯಮಂತ್ರಿಗಳು ಉತ್ತರ ಕೊಡಲಿಲ್ಲ. ಮಾನ್ಯ ಅಧ್ಯಕ್ಷರೆ ತಾವು ಒಂದು ಸಾರಿ ಹೇಳಿದಿರಿ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ, ಬಡ್ಜೆಟ್ ಭಾಷಣದ ಮೇಲೆ ಇಂಥ ವಿಷಯವನ್ನು ಮಾತನಾಡಿ ಎಂದು ಹೇಳಿದಿರಿ. ನಾವು ಮಾತನಾಡುತ್ತೇವೆ. ಆದರೆ, ಮುಖ್ಯಮಂತ್ರಿಗಳಿಂದ ಉತ್ತರ ಬರುವುದಿಲ್ಲ ಅಥವಾ ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರ ಬರುವುದಿಲ್ಲ. ನಾನು ಮೊನ್ನೆ ಮಾತನಾಡಿದ್ದೆ. ಮೊನ್ನೆ ಲೋಕಾಯುಕ್ತದ ಬಗ್ಗೆ ರಾಜ್ಯಪಾಲರ ಭಾಷಣದ ಮೇಲೆ ನಾನು ಮಾತನಾಡಿದ್ದೆ. ನೀವು ಇಲ್ಲಿಯವರೆಗೆ ಎಷ್ಟು ಜನರ ಮೇಲೆ ಕ್ರಮ ಕೈಗೊಂಡಿದ್ದೀರಿ? ಏಕೆಂದರೆ, ಪ್ರತಿನಿತ್ಯ ಲೋಕಾಯುಕ್ತ ಧಾಳಿ ಮಾಡುವುದು, ಅಧಿಕಾರಿಗಳ ಮೇಲೆ ಛೀಮಾರಿ ಹಾಕುವುದು, ಪ್ರಕರಣಗಳನ್ನು ದಾಖಲು ಮಾಡುವುದು. ಹಾಗಾಗಿ, ಇವತ್ತು.......

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವಾರ್ತಾಸಚಿವರು) :- ನೀವು ಹೇಳುವ ಈ ಭಾಷೆಯಿಂದ....

ಶ್ರೀ ಜಗದೀಶ್ ಶೆಟ್ಟರ್ :- ಮುಖ್ಯಮಂತ್ರಿಗಳೆ ಇದ್ದರೆ ಸುಮ್ಮನೆ ಕುಳಿತಿರುತಿದ್ದರು. ನಿಮಗೆ ತಾಳ್ಮೆ ಇಲ್ಲವೇ? ಕುಂಬಳಕಾಯಿ ಕಳ್ಳ ಎಂದು...

ಶ್ರೀ ಕಾಗೋಡು ತಿಮ್ಮಪ್ಪ :- ನಾವು ಹೇಳಿದ್ದನ್ನೂ ಸ್ವಲ್ಪ ಕೇಳಬೇಕಲ್ಲವೇ? ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಸಂದರ್ಭದಲ್ಲಿ ನಾನು ಪ್ರಸ್ತಾಪಿಸಿ, ಕೆಲವು ವಿಚಾರದಲ್ಲಿ ಉತ್ತರ ಬಂದಿಲ್ಲವೆಂದು ಹೇಳಿದಿರಿ. ಏಕೆಂದರೆ, ಎಷ್ಟು ರೇಡ್ ಮಾಡಿದ್ದಾರೆಂದು ಸರ್ಕಾರಕ್ಕೆ ವರದಿ ಬಂದಿದೆ. ಬಂದಿರುವ ವರದಿಯಲ್ಲಿ ಏನು ಕ್ರಮ ಕೈಗೊಂಡಿದೆ ಎಂಬ ಬಗ್ಗೆ ವಿವರವಾದ ಪಟ್ಟಿಯನ್ನು ತಮಗೆ ಕೊಡಿಸುವುದಕ್ಕೆ ನಾವು ತಯಾರಿದ್ದೇವೆ.

ಶ್ರೀ ಬಿ.ಎನ್. ಬಚ್ಚೇಗೌಡ :- ಮಂತ್ರಿಗಳ ಮೇಲೆ....

Sri Kagodu Thimmappa :- I do agree with you.. there is no dispute about it.

ಶ್ರೀ ಬಿ.ಎನ್. ಬಚ್ಚೇಗೌಡ :- ನಮ್ಮ ಇತಿಮಿತಿಯಲ್ಲಿ ಮಾತನಾಡುವುದಕ್ಕೆ ಹೊರಟಿದ್ದೆವು. ಆದರೆ, ಯಾವ ಸಚಿವರು ಮಾಡಿದ್ದಾರೆ, ಇನ್ನೊಂದು ಮಾಡಿದ್ದಾರೆ, ಎಂದು ಟಿ.ವಿ., ಪತ್ರಿಕೆಗಳಲ್ಲಿ ಹೇಳಿದಾಗ, ನಿಮ್ಮ ಮೇಲೆ ಎಂದು, ಸರ್ಕಾರದ ಮೇಲೆ ಎಂದು ಹೇಳುವುದಲ್ಲ. ಕಾರ್ಯ ವೈಖರಿ ಬಗ್ಗೆ ಔಷಧ ನಿಯಂತ್ರಣ ಇಲಾಖೆ ಯಾವ ರೀತಿ ನಡೆದುಕೊಳ್ಳುತ್ತದೆ ಎನ್ನುವ ಬಗ್ಗೆ ಮತ್ತು ನಕಲಿ ಔಷಧಿಗಳು ಜನ ಸಾಮಾನ್ಯರ ಮೇಲೆ ಎಷ್ಟು ಪರಿಣಾಮ ಬೀರುತ್ತವೆಂದು ಈ ಸದನಕ್ಕೆ ಬೆಳಕು ಚೆಲ್ಲಬೇಕಲ್ಲವೇ?

ಶ್ರೀ ಕಾಗೋಡು ತಿಮ್ಮಪ್ಪ :- ಇಲಾಖೆ ಬಗ್ಗೆ ಚರ್ಚೆ ಮಾಡುವುದಕ್ಕೆ ಸಂಪೂರ್ಣವಾದ ಅಧಿಕಾರ ತಮಗಿದೆ. ನಾನು ಹೇಳುವುದೇನೆಂದರೆ, ನಿನ್ನೆ ರೇಡ್ ಮಾಡಿದ ವಿಚಾರದಲ್ಲಿ ಕೆಲವು ಮೆಟೀರಿಯಲ್‌ಗಳನ್ನು, ಕೆಲವು ಎವಿಡೆನ್ಸ್‌ಗಳನ್ನು ಸೀಜ್ ಮಾಡಿದ್ದಾರೆ. ಅದರ ಬಗ್ಗೆ ತನಿಖೆ ಮಾಡುತ್ತಿದ್ದಾರೆ. ಆ ತನಿಖೆಗೆ ಆತಂಕವಾಗದ ರೀತಿಯಲ್ಲಿ ಚರ್ಚೆಯಾಗಬೇಕೆಂದು ನಾನು ಹೇಳುತ್ತಿರುವುದು.

ಶ್ರೀ ಸಿ. ಚನ್ನಿಗಪ್ಪ :- ಮಾನ್ಯ ಸಚಿವರು ಹೇಳಿದ್ದಾರೆ. ಈ ರಾಜ್ಯದ ಬಡವರು ಆಸ್ಪತ್ರೆಗೆ ಹೋಗಿ ಔಷಧಿ ತೆಗೆದುಕೊಂಡು, ಮಾತ್ರೆ ತೆಗೆದುಕೊಂಡು ಹೋಗುತ್ತಾರೆ. ಸರ್ಕಾರದ ಮೂಲಕ ಈ ಇಲಾಖೆ ಇದೆ, ಅದು ಇವರ ಕಂಟ್ರೋಲ್‌ನಲ್ಲಿರುವುದು. ಇಂಥ ಒಂದು ಅನ್ಯಾಯವಾಗುವುದಕ್ಕೆ ಬಿಟ್ಟರೆ ಜನರನ್ನು ನಾವೇ ಸಾಯಿಸಿದ ಹಾಗಾಗುತ್ತದೆ.

ಅಧ್ಯಕ್ಷರು :- ಚನ್ನಿಗಪ್ಪನವರೇ ಅವರು ಹೇಳುತ್ತಿದ್ದಾರೆ, he is explaining. The Leader of Opposition is speaking.

ಶ್ರೀ ಆರಗ ಜ್ಞಾನೇಂದ್ರ :- ಪದೇ, ಪದೇ, ನಿಯಮಾವಳಿಗಳ ಹೆಸರಿನಲ್ಲಿ ಚರ್ಚೆಯನ್ನು ತಡೆಗಟ್ಟುವ ಕೆಲಸ ನಡೆಯುತ್ತಿದೆ. ಅದನ್ನು ಮಾನ್ಯ ಆರೋಗ್ಯ ಸಚಿವರು ಮಾಡಬಾರದು. ಬೇರೆ ಯಾರು ಬೇಕಾದರೂ ಮಾಡಲಿ.

Mr. Speaker :- I am here to control. That you need not worry I am here to contorl all those things.

ಶ್ರೀ ಆರಗ ಜ್ಞಾನೇಂದ್ರ :- ಆರೋಗ್ಯ ಸಚಿವರೇಕೆ ಇದನ್ನು ಅಬ್ಜೆಕ್ಷನ್ ಮಾಡುತ್ತಿದ್ದಾರೆಯೋ ನನಗೆ ಗೊತ್ತಿಲ್ಲ.

ಅಧ್ಯಕ್ಷರು :- ತಾವು ಕುಳಿತುಕೊಳ್ಳಿ,

ಶ್ರೀ ಆರಗ ಜ್ಞಾನೇಂದ್ರ :- ಜನರ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು. ಚರ್ಚೆಯಾಗಲಿ.

ಅಧ್ಯಕ್ಷರು :- ಶೆಟ್ಟರ್‌ರವರೆ ಬೇಗನೆ ಮುಗಿಸಿ. ಇದು ಪ್ರಿಲಿಮಿನರಿ ಸಬ್‌ಮಿಷನ್.

ಶ್ರೀ ಜಗದೀಶ್ ಶೆಟ್ಟರ್ :- ಲೋಕಾಯುಕ್ತದ ಬಗ್ಗೆ ನಾನು ಆಗಲೇ ಪ್ರಸ್ತಾಪಿಸಿದೆ. ಲೋಕಾಯುಕ್ತರು ಇಲ್ಲಿಯವರೆಗೆ ಎಷ್ಟು ಧಾಳಿಗಳನ್ನು ಮಾಡಿದ್ದಾರೆ, ಎಷ್ಟು ಅಧಿಕಾರಿಗಳ ಮೇಲೆ ಇವರು ಆರೋಪ ಪಟ್ಟಿ ಹಾಕಿದ್ದಾರೆ, ಇವರ ರಿಪೋರ್ಟ್‌ನ ಆಧಾರದ ಮೇಲೆ ಎಷ್ಟು ಅಧಿಕಾರಿಗಳನ್ನು ಸರ್ಕಾರ ಸಸ್ಪೆಂಡ್ ಮಾಡಿದೆ.

ಅಧ್ಯಕ್ಷರು :- ಬಡ್ಜೆಟ್ ಮೇಲೆ ಉತ್ತರ ಕೊಡುವಾಗ ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ :- ಅದರಲ್ಲಿ ಉತ್ತರ ಕೊಡುವುದಿಲ್ಲ.

ಅಧ್ಯಕ್ಷರು :- ನಾಳೆ ಸಂಜೆ ಉತ್ತರ ಇದೆ. ಆಗ ಹೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ :- ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ನಾನು ಹೇಳಿದೆ, ಉತ್ತರ ಬರಲಿಲ್ಲ. ಕೆಲವು ಇಂಪಾರ್ಟೆಂಟ್ ವಿಷಯದ ಮೇಲೆ ಸರ್ಕಾರ ಉತ್ತರ ಕೊಡುವುದಿಲ್ಲ.

ಅಧ್ಯಕ್ಷರು :- ಕೊಡುತ್ತೇವೆಂದು ಹೇಳಿದ್ದಾರೆ. ಅವರು ಕೊಡಿಸುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :- ಅವರು ಕೊಡುವುದಿಲ್ಲ. ಬೇಕಾದರೆ ಛಾಲೆಂಜ್.

ಶ್ರೀ ಕಾಗೋಡು ತಿಮ್ಮಪ್ಪ :- ಇವರಿಗೆ ಉತ್ತರ ಬೇಡ. ಕೊಡುತ್ತೇವೆ. ಟೈಂ ಕೊಡಿ.

ಶ್ರೀ ಜಗದೀಶ್ ಶೆಟ್ಟರ್ :- ಲೋಕಾಯುಕ್ತರು ಉತ್ತಮ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ ಸರ್ಕಾರ ಸ್ಪಂದಿಸುತ್ತಿಲ್ಲ. ಸುಮ್ಮನೆ ಹೇಳುತ್ತಾರಷ್ಟೆ. ಧರ್ಮಯುದ್ಧವೆಂದು ಹೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ :- ನಾವು ಸ್ಪಂದನವನ್ನು ಮಾಡಿದ್ದೇವೆಯೋ, ಇಲ್ಲವೋ ಎಂಬುದು ವರದಿ ಕೊಟ್ಟ ಮೇಲೆ ಗೊತ್ತಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :- ಇಲ್ಲಿ ಕೆಲವು ಅಧಿಕಾರಿಗಳೇನು ಲೋಕಾಯುಕ್ತಕ್ಕೆ ಸಿಕ್ಕಿದ್ದಾರೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ನನ್ನ ಕಡೆ ಲಿಸ್ಟ್ ಇದೆ. ನೂರಾರು ಅಧಿಕಾರಿಗಳ ಲಿಸ್ಟ್ ಇದೆ. ಎಲ್ಲಾ ತನಿಖಾ ವರದಿ ಕೊಡುತ್ತಾರೆ. 'ಬಿ' ಅಂತಿಮ ವರದಿ ಕೊಡುತ್ತಾರೆ. 50 ಪರ್ಸೆಂಟ್ ಅಧಿಕಾರಿಗಳ ಹೆಸರಿನ ಮುಂದೆ 'ಬಿ' ಅಂತಿಮ ವರದಿ ಎಂದು ಸಲ್ಲಿಸಲಾಗಿದೆ, ತನಿಖೆ ನಡೆಯುತ್ತಿದೆ ಎಂದು ಹೇಳುತ್ತಾರೆ. ಅವರನ್ನು ಸಸ್ಪೆಂಡ್ ಮಾಡಿದ್ದಾರೋ, ಇಲ್ಲವೋ ಏನೂ ಇಲ್ಲ. ನನ್ನ ಕಡೆ ಲಿಸ್ಟ್ ಇದೆ. ಮೊನ್ನೆ ಅವರೇ ಸದನದಲ್ಲಿ ಉತ್ತರ ಕೊಟ್ಟಿದ್ದಾರೆ. ಭ್ರಷ್ಟಾಚಾರವನ್ನು ಹೋಗಲಾಡಿಸಲು, ಭ್ರಷ್ಟಾಚಾರದ ವಿರುದ್ಧ ಧರ್ಮ ಯುದ್ಧ ಘೋಷಣೆ ಮಾಡಿದಿರಿ, ಇದಕ್ಕೆ ನಿಮ್ಮ ಇಚ್ಛಾಶಕ್ತಿ ಇಲ್ಲ. ಇಚ್ಛಾಶಕ್ತಿ ಇದ್ದರೆ ಇಷ್ಟು ಹೊತ್ತಿಗೆ ಈಗ ಹಗರಣಗಳು ನಡೆಯಬಾರದಾಗಿತ್ತು.

ಅಧ್ಯಕ್ಷರು :- ನಿನ್ನೆ ನಡೆದ ಹಗರಣದ ಬಗ್ಗೆ ಬೇಗನೆ ಮುಗಿಸಿ.

ಶ್ರೀ ಜಗದೀಶ್ ಶೆಟ್ಟರ್ :- ತಾವು ಮುಖ್ಯಮಂತ್ರಿಗಳಿಗೆ ಉತ್ತರಿಸಿದ್ದೀರಿ. ಲೋಕಾಯುಕ್ತ ವ್ಯಾಪ್ತಿಗೆ ಮತ್ತಷ್ಟು ಅಧಿಕಾರ, ಮುಖ್ಯಮಂತ್ರಿಗಳಿಗೆ ಮನವಿ, ಇವೆಲ್ಲಾ ಹೇಳಬೇಕಾಗುತ್ತದೆ.

ಅಧ್ಯಕ್ಷರು :- ಇವತ್ತಿನ ಸಬ್ಜೆಕ್ಟ್ ಬಗ್ಗೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ :- 300 ಕೋಟಿ ರೂಪಾಯಿಗಳ ಹಗರಣ ನಡೆದ ಸಂದರ್ಭದಲ್ಲಿ ನಾವು ಇವೆಲ್ಲಾ ಹೇಳಬೇಕಾಗುತ್ತದೆ. ನೀವು ಲೋಕಾಯುಕ್ತಕ್ಕೆ ಅಧಿಕಾರ ಕೊಟ್ಟಿದ್ದರೆ, ಅವರೇ ಕ್ರಮಗಳನ್ನು ತೆಗೆದುಕೊಳ್ಳಬಹುದಿತ್ತು, ಅವರೇ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬಹುದಾಗಿತ್ತು. ಅದನ್ನು ಮಾಡಲಿಲ್ಲ. ನಿಮಗೆ ರಿಪೋರ್ಟ್ ಬರುತ್ತದೆ.

ಅಧ್ಯಕ್ಷರು :- ಡೀಟೇಲ್ ಆಗಿ ಮಾತನಾಡುವಾಗ ಅವೆಲ್ಲಾ ಸಜೆಷನ್ಸ್ ಕೊಡಿ. If I allow the adjournment motion, then you can go into detail. You can speak in detail. Not at this stage.

ಶ್ರೀ ಕಾಗೋಡು ತಿಮ್ಮಪ್ಪ :- ಸರ್ಕಾರಕ್ಕೆ ವರದಿ ಬಾರದೇ ಇದ್ದರೆ....

ಶ್ರೀ ಜಗದೀಶ್ ಶೆಟ್ಟರ್ :- ಪ್ರಿಲಿಮಿನರಿ ಸಬ್‌ಮಿಷನ್‌ನಲ್ಲಿ ಇಷ್ಟು ವಿಷಯ ಹೇಳಬೇಕಾಗುತ್ತದೆ.

ಅಧ್ಯಕ್ಷರು :- ನಾವು ಪರ್ಮಿಷನ್ ಕೊಟ್ಟಮೇಲೆ ನೀವು ಎಷ್ಟಾದರೂ ಮಾತನಾಡಿ. ಎಲ್ಲಾ ಡೀಟೆಲ್ಸ್ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ :- "ಲೋಕಾಯುಕ್ತ ಹೆಚ್ಚಿನ ಅಧಿಕಾರ ನೀಡಲು ನಿರ್ಧಾರ. ರಾಜ್ಯ ಸಚಿವಸಂಪುಟ ಪುನರ್ ರಚನೆ ಕುರಿತಂತೆ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರವರು ತಕ್ಷಣಕ್ಕೆ ಯಾವುದೇ ತೀರ್ಮಾನ ತೆಗೆದುಕೊಳ್ಳುವ ಲಕ್ಷಣ ಇಲ್ಲ. ಆದರೆ, ಕೆಲವು ತಿಂಗಳಿಂದ ರಾಜ್ಯದಲ್ಲಿ ಭ್ರಷ್ಟಾಚಾರದ ವಿವಿಧ ಮುಖಗಳನ್ನು ಪರಿಚಯಿಸುತ್ತಿರುವ ಲೋಕಾಯುಕ್ತ ವೆಂಕಟಾಚಲರವರಿಗೆ ಹೆಚ್ಚಿನ ಅಧಿಕಾರ ನೀಡುವುದು" ಹಾಗೂ ಬೆಂಗಳೂರು ನಗರ ಸೇರಿದಂತೆ ಕೆಲವು ಪ್ರಮುಖ ಪಟ್ಟಣ, ನಗರಗಳಲ್ಲಿ, ಉಳಿದದ್ದು ನೀರಿನ ಸಂಬಂಧ. ಯಾವ ಅಧಿಕಾರವನ್ನೂ ಕೊಡಲಿಲ್ಲ. ಯಾವ ಅಧಿಕಾರವನ್ನು ಕೇಳಿದ್ದರು, ಅದನ್ನು ಕೊಡಲಿಲ್ಲ.

ಅಧ್ಯಕ್ಷರು :- ಡೀಟೇಲ್ ಮಾತನಾಡಬೇಡಿ.

ಶ್ರೀ ಜಗದೀಶ್ ಶೆಟ್ಟರ್ : ಈ ರೀತಿ ಹಗರಣಗಳು ನಡೆದಿದ್ದು. ಸಿಎಂಸಿ ಆಗಿರಬಹುದು, ಸಬ್-ರಿಜಿಸ್ಟ್ರಾರ್ ಆಫೀಸಿಗೆ ಧಾಳಿ ಮಾಡಿದ್ದಿರಬಹುದು, ತಹಸೀಲ್ದಾರ್ ಆಫೀಸ್‌ಗೆ ಧಾಳಿ ಮಾಡಿದ್ದರಬಹುದು.

ಶ್ರೀ ಕಾಗೋಡು ತಿಮ್ಮಪ್ಪ :- ಎಲ್ಲವನ್ನೂ ಹೇಳಬೇಕೋ?

ಶ್ರೀ ಜಗದೀಶ್ ಶೆಟ್ಟರ್ :- ಹೌದು, ಎಲ್ಲವನ್ನೂ ಹೇಳಬೇಕಾಗುತ್ತದೆ. ಆಗಲೇ ನಿಮಗೆ ಗುರುತಾಗುತ್ತದೆ.

Mr. Speaker :- If I admit. afterwards you can tell every thing. Whatever you want to say, now it is only preliminary submission, ನಾನು ಕನ್ಸೆಂಟ್ ಕೊಟ್ಟ ಮೇಲೆ ತಾವು ಅದರ ಬಗ್ಗೆ ಹೇಳಬಹುದು.

ಶ್ರೀ ಜಗದೀಶ್ ಶೆಟ್ಟರ್ :- ಧರ್ಮ ಯುದ್ಧ ಘೋಷಣೆ ಮಾಡಿದ್ದಾರೆ. ಚರ್ಚೆಗೆ ಅವಕಾಶ ಕೊಡಬೇಕು. ಎಲ್ಲೆಲ್ಲಿ ಏನು ನಡೆದಿದೆ ಎಂಬುದು ಅವರಿಗೆ ಗೊತ್ತಾಗಬೇಕು. ಕೆಲವೊಮ್ಮೆ

ಅವರಿಗೆ ಗೊತ್ತಾಗುವುದಿಲ್ಲ. ಕಣ್ಣು ಮುಚ್ಚಿರುತ್ತಾರೆ. ಮಲಗಿಕೊಂಡಿರುತ್ತಾರೆ. ಅದಕ್ಕೆ ಗೊತ್ತಾಗಬೇಕಾಗುತ್ತದೆ.

ಅಧ್ಯಕ್ಷರು :- ಅವರಿಗೆ ಎಲ್ಲಾ ಗೊತ್ತಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :- ಅದಕ್ಕೋಸ್ಕರ ಸದನದಲ್ಲಿ ಚರ್ಚೆಗೆ ಅವಕಾಶ ನೀಡಬೇಕು. ಚರ್ಚೆ ಮಾಡಲು ನೀವು ಹೆಚ್ಚು ಪ್ರೋತ್ಸಾಹ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ :- ಈ ಚರ್ಚೆಯ ವಿಷಯದಲ್ಲಿ ವಿರೋಧ ಪಕ್ಷದ ನಾಯಕರನ್ನು ಸ್ವಾಗತಿಸುತ್ತೇನೆ. ಬೇರೆ ಫಾರಂನಲ್ಲಿ ತೆಗೆದುಕೊಂಡು, ಇಲಾಖೆ ಬಗ್ಗೆ (ಫ್ರೆಡ್‌ಬೇರ್), ಬುಡ ಸಮೇತವಾಗಿ ಚರ್ಚೆ ಮಾಡಬೇಕು. ಕಣ್ಣು ತೆರೆಸಬೇಕು. ಅದನ್ನು ಬಲಪಡಿಸಬೇಕೆನ್ನುವುದೇ ನಮ್ಮ ಇಚ್ಛಾಶಕ್ತಿ. ಆ ಇಚ್ಛಾಶಕ್ತಿಗೆ ಇನ್ನಷ್ಟು ಬಲ ಕೊಡುವುದಕ್ಕೆ ನಿಮ್ಮ ಚರ್ಚೆಯಾಗುವುದಾದರೆ ನನ್ನ ಸಂಪೂರ್ಣ ಸ್ವಾಗತ;

ಶ್ರೀ ಜಗದೀಶ್ ಶೆಟ್ಟರ್ :- ಇಲ್ಲಿ ನಿನ್ನೆ ರೇಡ್ ಮಾಡಿದ ಸಂದರ್ಭದಲ್ಲಿ ಕಪ್ಪು ಪಟ್ಟಿಯಲ್ಲಿರುವ ಕಂಪನಿಗಳಿಂದ ಕೋಟ್ಯಾಂತರ ರೂಪಾಯಿ ಮೌಲ್ಯದ ಔಷಧಿಗಳನ್ನು ಖರೀದಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಅಂದರೆ ಸರ್ಕಾರಕ್ಕೆ, ಅಧಿಕಾರಿಗಳಿಗೆ ಕಪ್ಪು ಪಟ್ಟಿಯಲ್ಲಿ ಇದೆಯೋ, ಇಲ್ಲವೋ ಎಂಬುದು ಗೊತ್ತಿರಲಿಲ್ಲವೇ? ಓಸ್ವಾಲ್ ಕಂಪನಿ ಕಪ್ಪು ಪಟ್ಟಿಯಲ್ಲಿದೆ. ನಿಮಗೆ ಕಾಪಿ ಕಳುಹಿಸಿಕೊಡುತ್ತೇನೆ, ನೋಡಿ. ನೀವು ಬೆಳಿಗ್ಗೆ ಪೇಪರ್ ಓದಿಲ್ಲವೇ? ಭ್ರಷ್ಟಾಚಾರ ಹಗರಣದ ಬಗ್ಗೆ ಇಷ್ಟೊಂದು ದಿವ್ಯ ನಿರ್ಲಕ್ಷ್ಯ.

Mr. Speaker : Now, it is only a preliminary submission.

ಶ್ರೀ ಜಗದೀಶ್ ಶೆಟ್ಟರ್ :- ಕುಟುಂಬ ಕಲ್ಯಾಣ ಇಲಾಖೆ, ಅವರ ಡಿಪಾರ್ಟ್‌ಮೆಂಟ್ ಬಗ್ಗೆ ಬಂದರೂ ತೀವ್ರ ನಿರ್ಲಕ್ಷ್ಯ.

ಅಧ್ಯಕ್ಷರು :- ತಾವು ಅರ್ಥ ಮಾಡಿಕೊಳ್ಳಬೇಕು. It is only a preliminary submission.

ಶ್ರೀ ಜಗದೀಶ್ ಶೆಟ್ಟರ್ :- ಹರಿಕಥೆಯಲ್ಲ. ನಿಮಗೆ ಇದನ್ನು ಹೇಳಬೇಕಾಗುತ್ತದೆ.

ಅಧ್ಯಕ್ಷರು :- ಬೇಗನೆ ಕನ್‌ಕ್ಲೂಡ್ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ :- ಆ ರೀತಿ ಇವತ್ತು 50,60 ಕೋಟಿ ರೂಪಾಯಿ ಹಗರಣದ ಸಂದರ್ಭದಲ್ಲಿ ರಾಷ್ಟ್ರ-ವ್ಯಾಪ್ತಿಯಲ್ಲಿ ಏನೇನಾಗಿದೆ ಎಂಬುದು ತಮಗೆ ಗೊತ್ತಿದೆ, ಯಾರ್‍ಯಾರು ರಾಜೀನಾಮೆ ಕೊಟ್ಟಿದ್ದಾರೆಂಬುದು ತಮಗೆ ಗೊತ್ತಿದೆ. ಇವತ್ತು 300 ಕೋಟಿ ರೂಪಾಯಿ ಹಗರಣ, ಇದು ಅತ್ಯಂತ ದೊಡ್ಡದಾದ ಭ್ರಷ್ಟಚಾರ. ನಾವು ಸಿಎಂಸಿ ಹಗರಣದ ಬಗ್ಗೆ ಇಲ್ಲಿ ಡಿಸ್ಕಷನ್ ಮಾಡಿದ್ದೇವೆ. ಸರ್ಕಾರ ಯಾವ ತನಿಖೆಗೂ ಒಪ್ಪಲಿಲ್ಲ. ಒಂದು ಸಾರಿ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವ ಮೂಲಕ ಒಂದಿಷ್ಟು ಕಣ್ಣೊರೆಸುವುದು ಮಾಡಿದರೇ ಹೊರತು ಮತ್ತೇನೂ ಮಾಡಲಿಲ್ಲ. ಅದಕ್ಕೆ 300 ಕೋಟಿ ರೂಪಾಯಿಗಳ ಹಗರಣ ಇಲ್ಲಿ ಹೊರಗೆ ಬಂದಿದೆ. ಅದು ಕೋಟ್ಯಾಂತರ ಜನರ ಜೀವವನ್ನು ರಕ್ಷಣೆ ಮಾಡುವ ವಿಭಾಗ, ಈ ಇಲಾಖೆ ಈ ರೀತಿ ಕಳಪೆ ಮಟ್ಟದ ಔಷಧಿ, ಕಳಪೆ ಮಟ್ಟದ ಗುಳಿಗೆ ಇರಬಹುದು, ಈ ರೀತಿ ನಕಲಿ ಔಷಧಿ ಸಪ್ಲೈ ಮಾಡುವುದು ಇದ್ದಾಗ, ನಾಳೆ ಬಡವರ ಜೀವದ ಜತೆ ಚೆಲ್ಲಾಟ ಆಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಬೇರೆ ಇಲಾಖೆಯಲ್ಲಿ

ಒಂದಿಷ್ಟು ಹಗರಣ ನಡೆದಾಗ ಎಲ್ಲೋ ಸ್ವಲ್ಪ ಜನರಿಗೆ ಅಫೆಕ್ಟ್ ಆಗಬಹುದು. ಡ್ರಗ್ ಕಂಟ್ರೋಲ್ ಆಫೀಸ್‌ನಲ್ಲಿ ಅವ್ಯವಹಾರ, ಭ್ರಷ್ಟಾಚಾರ ನಡೆದರೆ, ಅದರ ನೇರ ಪರಿಣಾಮ ಒಬ್ಬ ಬಡ ರೋಗಿಗಾಗುತ್ತದೆ. ಇದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಬಡ ರೋಗಿಗಳ ಜೀವದ ಜತೆ ಚೆಲ್ಲಾಟ ಆಡುವುದು ಡ್ರಗ್ ಕಂಟ್ರೋಲ್ ಆಫೀಸ್‌ನಿಂದ ನಡೆಯುತ್ತಿದೆ. ಇವರೆಲ್ಲಾ ಶಾಮೀಲಾಗಿದ್ದಾರೆ. ನಕಲಿ ಔಷಧಿ ಕಂಪನಿಯೊಂದಿಗೆ ಇವರೆಲ್ಲಾ ಶಾಮೀಲಾಗಿದ್ದಕ್ಕೆ ಇವೆಲ್ಲಾ ನಡೆಯುತ್ತಿವೆ. ಇವತ್ತು ಯಾರ್‍ಯಾರ ಹೆಸರು ಪತ್ರಿಕೆಯಲ್ಲಿ ಬಂದಿದೆ. ಯಾರ್‍ಯಾರ ಹೆಸರನ್ನು ಅವರು ಹೇಳಿದ್ದಾರೆಂದು ನಾವು ತಿಳಿದುಕೊಳ್ಳಬೇಕು. ಕೇವಲ ಅಧಿಕಾರಗಳಷ್ಟೇ ಅಲ್ಲ, ಮಂತ್ರಿಗಳ ಹೆಸರನ್ನೂ ಲೋಕಾಯುಕ್ತರು ಹೇಳಿದ್ದಾರೆ. ಡಾ|| ಸುದರ್ಶನ್‌ರವರು ನಿನ್ನೆ ಟಿ.ವಿ. ಇಂಟರ್‌ವ್ಯೂನಲ್ಲಿ ಹೇಳುತ್ತಾರೆ, ಮಂತ್ರಿಗಳ ಹೆಸರನ್ನು ಅವರು ಹೇಳಿದ್ದಾರೆ. ಮಾಜಿ ಮಂತ್ರಿಗಳ ಹೆಸರು ಹೇಳಿದ್ದಾರೆ. 5-6 ವರ್ಷಗಳಿಂದ ನಡೆದುಕೊಂಡು ಬಂದಿರುವ ದಂಧೆ ಎಂದು ಅವರು ಹೇಳಿರುತ್ತಾರೆಂದರೆ, ಇವತ್ತು ಹಾಲಿ ಮಂತ್ರಿಗಳಿರಬಹುದು ಅಥವಾ ಹಿಂದಿನ ಮಂತ್ರಿಗಳಿರಬಹುದು. ಇದರ ಬಗ್ಗೆ ನಾನಿಲ್ಲಿ ಹೇಳುತ್ತಿದ್ದೇನೆ. ಡಾ|| ಮಾಲಕರೆಡ್ಡಿಯವರ ಹೆಸರು ಬಂದಿದೆ. ಹಾಲಿ ಮಂತ್ರಿಗಳು, ಕಾಗೋಡು ತಿಮ್ಮಪ್ಪನವರು....

ಶ್ರೀ **ಕಾಗೋಡು ತಿಮ್ಮಪ್ಪ** :- ಅಧ್ಯಕ್ಷರೆ.....

ಶ್ರೀ **ಜಗದೀಶ್ ಶೆಟ್ಟರ್** :- ನಾವೇನು ಮಾತನಾಡಬಾರದೇ ಇದು ಸರಿಯಲ್ಲ. ನಾನು ಕಂಪ್ಲೀಟ್ ಮಾಡುತ್ತೇನೆ.

(ಗೊಂದಲ)

ಶ್ರೀ **ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ** :- ಅವರು ಮುಗಿಸಿದ ಮೇಲೆ ಮಾತನಾಡಿ.

ಶ್ರೀ **ಕಾಗೋಡು ತಿಮ್ಮಪ್ಪ** :- ಮಾತನಾಡುವಾಗ ಅವರು ಹಾದಿ ತಪ್ಪಿ ಹೋಗಬಾರದು.

ಶ್ರೀ **ಜಗದೀಶ್ ಶೆಟ್ಟರ್** :- ನಾನು ಯೀಲ್ಡ್ ಆಗಿಲ್ಲ.

(ಗೊಂದಲ)

ಶ್ರೀ **ಜಗದೀಶ್ ಶೆಟ್ಟರ್** :- ಪತ್ರಿಕೆಗಳಲ್ಲಿ ಬಂದಿದ್ದನ್ನು ನಾನು ಹೇಳುತ್ತೇನೆ. ಇವತ್ತು ಇಲ್ಲಿ ನಿನ್ನೆ ಲೋಕಾಯುಕ್ತರು ಧಾಳಿ ಮಾಡಿದ ಸಂದರ್ಭದಲ್ಲಿ ಅಲ್ಲಿ ಕೆಲವು ಸಿಬ್ಬಂದಿ ಹೇಳಿದ ವಿಷಯಗಳ ಬಗ್ಗೆ ಇರಬಹುದು, ಅಥವಾ ನಿನ್ನೆ ಎಲೆಕ್ಟ್ರಾನಿಕ್ ಮೀಡಿಯಾ ಇರಬಹುದು. ಸರ್ಕಾರದ ಮಂತ್ರಿಗಳು ಯಾರಾದರೂ ನೋಡಿದ್ದರೆ ಅವರು ಹೇಳಿದ ಹೇಳಿಕೆಗಳನ್ನು ನೋಡಿದಾಗ ಡಾ|| ಮಾಲಕರೆಡ್ಡಿಯವರು, he is a gentleman Politician ಅವರ ಬಗ್ಗೆ ತಕರಾರಿಲ್ಲ. ಇವತ್ತು ಅವರ ಹೆಸರು ಬಂದಿದೆ. ಕಾಗೋಡು ತಿಮ್ಮಪ್ಪನವರು ಹೋರಾಟಗಾರರು, ಅವರ ಹೆಸರು ಬಂದಿಲ್ಲ. ಆದರೆ, ಹಾಲಿ ಮಂತ್ರಿ ಅಂದರೆ, ಆ ಡಿಪಾರ್ಟ್‌ಮೆಂಟ್‌ಗೆ ಸಧ್ಯಕ್ಕೆ ಅವರೇ.

ಶ್ರೀ **ಬಿ.ಎನ್. ಬಚ್ಚೇಗೌಡ** :- ಅವರ ಹೆಸರು ಬಂದಿಲ್ಲ.

ಶ್ರೀ **ಜಗದೀಶ್ ಶೆಟ್ಟರ್** :- ಹಾಲಿ ಮಂತ್ರಿ ಎಂದಷ್ಟೇ ಬಂದಿದೆ.

ಶ್ರೀ **ಕೆ.ಎಂ. ಕೃಷ್ಣಮೂರ್ತಿ** :- ಹೆಸರು ಬಂದಿದೆ.

ಶ್ರೀ **ಕಾಗೋಡು ತಿಮ್ಮಪ್ಪ** :- ನನ್ನ ಹೆಸರು ಬರಲಿ, ಯಾರ ಹೆಸರೇ ಬರಲಿ, we are prepared to face, I don't bother. ಅದು ಬೇರೆ ಮಾತು.

ಶ್ರೀ ಜಗದೀಶ್ ಶೆಟ್ಟರ್ :- ನಾನು ಯೀಲ್ಡ್ ಆಗುವುದಿಲ್ಲ. ನಾನು ಕಂಪ್ಲೀಟ್ ಮಾಡಿದ ಮೇಲೆ ತಾವು ಮಾತನಾಡಿ.

(ಗೊಂದಲ)

ಅಧ್ಯಕ್ಷರು :- ಕನ್‌ಕ್ಲೂಡ್ ಮಾಡಿ,

ಶ್ರೀ ಜಗದೀಶ್ ಶೆಟ್ಟರ್ :- ತಾಳ್ಮೆ ಏಕೆ ಕಳೆದುಕೊಳ್ಳುತ್ತೀರಿ? ನೀವು ಹಿರಿಯರು, ಹೋರಾಟಗಾರರು, ಏಕೆ ತಾಳ್ಮೆ ಕಳೆದುಕೊಳ್ಳುತ್ತೀರಿ? ಮಾತನಾಡೋಣ, ಚರ್ಚೆ ಮಾಡೋಣ. ಯಾರ ಇನ್‌ವಾಲ್ವ್‌ಮೆಂಟ್ ಇದೆ ಇಲ್ಲವೆಂಬುದನ್ನು ನೋಡೋಣ. ಇಲ್ಲಿ ಏನಾಗಿದೆ ಎಂದರೆ, ಇವತ್ತು ಈ ಒಂದು ಪತ್ರಿಕೆಯಲ್ಲಿ ಬಂದ ಅಂದರೆ, ನಿನ್ನೆ ಮಾನ್ಯ ವೆಂಕಟಾಚಲರು ಧಾಳಿ ಮಾಡಿದ ಸಂದರ್ಭದಲ್ಲಿ ಅಲ್ಲಿದ್ದ ಸಿಬ್ಬಂದಿ ಹೇಳಿಕೆ ಕೊಟ್ಟಿದ್ದು, ಅದು ಸರಿಯೋ, ತಪ್ಪೋ ಎನ್‌ಕ್ವಯರಿ ಆಗಬೇಕೆಂದು ನಾನು ಹೇಳುವುದು. ಮಂತ್ರಿಗಳು, ನಿಮ್ಮ ಪಾತ್ರ ಇದೆಯೋ, ಇಲ್ಲವೋ, ಇಲ್ಲವೆಂದರೆ, ಇದೆ ಎಂದರೆ ಎನ್‌ಕ್ವಯರಿ ಆಗಲಿ. ಅದರ ಬಗ್ಗೆ ನಾನು ಹೇಳುತ್ತಿರುವುದು. ಏಕೆಂದರೆ, ಜವಾಬ್ದಾರಿ ಇರುವ ಮಂತ್ರಿಗಳು. ಅಧಿಕಾರಳಷ್ಟೇ ಅಲ್ಲ....

ಶ್ರೀ ಕಾಗೋಡು ತಿಮ್ಮಪ್ಪ :- ಈ ವಿಚಾರದಲ್ಲಿ ಈ ಸ್ಟೇಟ್‌ಮೆಂಟ್ ಮಾಡಿದ್ದರೆ ಅದನ್ನು ಕಳುಹಿಸಿಕೊಡಿ ಎಂದು ಲೋಕಾಯುಕ್ತಕ್ಕೆ ಇವತ್ತು ಪತ್ರ ಬರೆಯುತ್ತಿದ್ದೇನೆ.

ಅಧ್ಯಕ್ಷರು :- ಬೇಗನೆ ಮುಗಿಸಿ.

ಶ್ರೀ ಜಗದೀಶ್ ಶೆಟ್ಟರ್ :- ಪ್ರತಿಪಕ್ಷದ ನಾಯಕರು ನಾವು ಮಾತನಾಡುತ್ತಿದ್ದೇವೆ, ಈ ರೀತಿ ನಾವು ಹೇಳುವುದಕ್ಕೆ ತಾವು ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು :- ಪ್ಲೀಸ್ ಕನ್‌ಕ್ಲೂಡ್ ಎಂದು ಹೇಳುತ್ತಿದ್ದೇನೆ.

ಶ್ರೀ ಆರಗಜ್ಞಾನೇಂದ್ರ :- ಇದು ಗಂಭೀರ ವಿಚಾರ ಅಲ್ಲವೆಂದು ನೀವು ಹೇಳುವುದಾದರೆ ನಾವೆಲ್ಲಾ ಕುಳಿತುಕೊಳ್ಳೋಣ.

ಅಧ್ಯಕ್ಷರು :- ಅಲ್ಲವೆಂದು ಹೇಳಿದ್ದರೆ, ನಾನು ಅಲೋ ಮಾಡುತ್ತಿದ್ದೆನೆ?

ಶ್ರೀ ಆರಗ ಜ್ಞಾನೇಂದ್ರ :- ಸರ್ಕಾರದ ಹಿತಾಸಕ್ತಿ ಇದೆ. ತಾವು ನಮಗೆ ಅನುಮತಿ ಕೊಡಬೇಕು. ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ನಾವು ಇಡೀ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಪ್ರಸ್ತಾಪಿಸಬೇಕಾಗುತ್ತದೆ. ವಿರೋಧಪಕ್ಷದಲ್ಲಿ ಕುಳಿತು ಇನ್ನೇನು ಮಾಡುವುದು?

Mr. Speaker : Mr. Shetter please conclude ಪ್ರಿಲಿಮಿನರಿ ಸಬ್‌ಮಿಷನ್ ಎಂದು ಹೇಳುತ್ತಿದ್ದೇವೆ. ನೀವು ಬೇಗ ಮುಗಿಸಿ.

ಶ್ರೀ ಜಗದೀಶ್ ಶೆಟ್ಟರ್ :- ಇಲ್ಲಿ ಪತ್ರಿಕೆಯಲ್ಲಿ ಬಂದಿದೆ. ಐದು ವರ್ಷಗಳ ಹಿಂದೆ ಅಧಿಕಾರದಲ್ಲಿದ್ದ ಆರೋಗ್ಯ ಸಚಿವರೊಬ್ಬರಿಗೆ ಔಷಧಿ ವಿತರಕರಿಗೂ ಹಣ ನೀಡಲಾಗಿದೆ ಎಂದು ಅವರು ಲೋಕಾಯುಕ್ತ ಮುಂದೆ ವಿವರಿಸಿದ್ದಾರೆ. ಅಲ್ಲದೆ, ಪ್ರಸ್ತುತ ಮಂತ್ರಿಯೊಬ್ಬರಿಗೆ ಲಂಚ ನೀಡುತ್ತಿರುವುದಾಗಿ ಲೋಕಾಯುಕ್ತರ ಬಳಿ ತಿಳಿಸಿದ್ದಾರೆ. ಔಷಧಿ ನಿಯಂತ್ರಣಾಧಿಕಾರಿ ಆನಂದ ರಾಜಶೇಖರ್‌ರವರು ಸಿಬ್ಬಂದಿಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಮನ ಬಂದಂತೆ ವರ್ತಿಸಿದ್ದಾರೆಂದು ಲೋಕಾಯುಕ್ತರ ಮುಂದೆ ಸಿಬ್ಬಂದಿ ದೂರಿದ್ದಾರೆ ಅನ್ನುವುದನ್ನು ಲೋಕಾಯುಕ್ತದವರು ಹೇಳಿಕೆ ಕೊಟ್ಟಿದ್ದು, ಸುದರ್ಶನ್‌ರವರು ಹೇಳಿಕೆ ಕೊಟ್ಟಿದ್ದು. ಅವರೇನಾದರೂ ಪತ್ರಿಕೆಗಳಿಗೆ ಸೂಚನೆ

ಕೊಡದಿದ್ದರೆ, ಇವೆಲ್ಲಾ ಹೇಗೆ ಹೊರಗೆ ಬರುತ್ತಿತ್ತು? ಹೀಗಾಗಿ, ಇವತ್ತು ಮಂತ್ರಿಗಳ ಹೆಸರು, ಹಿರಿಯ ಅಧಿಕಾರಿಗಳ ಹೆಸರು ಇಲ್ಲಿ ಬಂದಿದ್ದರಿಂದ ಅವರ, credibility ಕ್ವೆಶ್ಚನ್ ಮಾಡುವುದು ಬಂದಿದೆ. ಇದರ ಹಿನ್ನೆಲೆಯ ನ್ನು ... ವು ತಿಳಿದುಕೊಳ್ಳಬೇಕಾಗುತ್ತದೆ. ಡಾ॥ ಮಾಲಕರೆಡ್ಡಿಯವರು, ಮಂತ್ರಿಗಳು ಅವರ ಹೆಸ... ಎಂದರೆ, ನಾನು 'yes' ನೀವು ಅಪರಾಧಿ ಎನ್ನುವುದಿಲ್ಲ. ತನಿಖೆಯಾಗಬೇಕು. ನಾ ... ಲೆ ಹೇಳಿದ್ದೇನೆ. ಅವರು ಜಂಟಲ್‌ಮನ್ ಪೊಲಿಟಿಷಿಯನ್ ಆದರೆ, ಇವತ್ತು ಅವರ ಹೆ...ರು ಬಂ...ದಿದೆ ಎಂದರೆ ಇದರ ಬಗ್ಗೆ ತನಿಖೆಯಾಗಬೇಕಲ್ಲವೇ? ಹೀಗಾಗಿ, ಅದರ ಹಿನ್ನೆ...ಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಹಿಂದಿನ ಮಂತ್ರಿಗಳ ಹೆಸರು ಬಂದಿದೆ.

ಶ್ರೀ ಬಿ.ಎನ್. ಬಚ್ಚೇಗೌಡ :- ...ಮಾನ್ಯ ನಾಯಕರೆ, more than the enqiry ಅವರೂ ಹೇಳಿಕೆ ಹೇಳಬೇಕಾಗು...ದೆ. ನಿರಾಕ...ಸಬೇಕಾಗುತ್ತದೆ. ಈ ಸದನದಿಂದ ಮೆಸೇಜ್ ಹೋಗಬೇಕಾಗುತ್ತದೆ. ಇಲ್ಲದಿದ್ದ..., ಅವರ ಮೇ...ರೆ ಹಾಗೂ ಉಳಿಯುತ್ತದೆ.

Mr. Speak er :- L t us wait a d see. ಇವರು ಕನ್‌ಕ್ಲೂಡ್ ಮಾಡಿದ ಮೇಲೆ ತಾನೇ ಉತ್ತರ ಕೇಳಬೇಕಾಗುತ್ತ...

ಶ್ರೀ ಬಿ.ಎನ್. ಬಚ್ಚೇಗೌಡ :- ಅ... ದರಿಂದ ದೂರ ಇದ್ದಾರೆ ಎನ್ನುವುದನ್ನು ಹೇಳಬೇಕಾಗುತ್ತದೆ, ಇಲ್ಲದಿದ್ದರೆ ಈ ಆಪಾದನೆ ಹ... ಲೇ ಉಳಿಯುತ್ತದೆ. ಅವರೂ ಸಹ ಇದರಲ್ಲಿ ಸೇರಿದ್ದಾರೆಂದು ...ಗುತ್ತದೆ. They have to co me out with a statement in the House, they hav e to clarify the things.

ಅಧ್ಯಕ್ಷರು :- ...ವರು ಪೂರಾ ಮುಗಿಸಲಿ, how can re ply.

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೆ, ಈ ಕ... ವಿರೋಧ ಪಕ್ಷದವರು ಮಾತನಾಡಬೇಡಿ ಎಂದರೆ ಈ ವಿಷಯಗಳೆಲ್ಲಾ ಜನರಿಗೆ ಹೇಗೆ ಗೊ...ತ್ತದೆ? ಕಾಗೋಡು ತಿ...ಪ್ಪನವರಿಗೆ ಹೇಳುತ್ತೇನೆ, ಹಿರಿಯ ಸಚಿವರು ಅವರು.....

Mr. Speaker :- I have allowed Mr. Shettar tc talk.

ಶ್ರೀ ಬಿ.ಎನ್. ಬಚ್ಚೇಗೌಡ :- ಐದು ಕೋಟಿ ಜನರಿಗೆ ಸರ್ಕಾರ ಏನು ಮಾಡುತ್ತಿದೆ ಎಂಬುದು ಹೇಗೆ ತಿಳಿಯಬೇಕು? ಈ ರೀತಿ ಹೇಳಿಕೆ ಬಂದಿದೆ, ಇದು ಸರಿಯಲ್ಲ. ಸರಿ ಎಂದು ಹೇಳದಿದ್ದರೆ, ಆಚೆ ಇರುವ ಜನರಿಗೆ ಹೇಗೆ ತಿಳಿಯಬೇಕು? ಇದರಲ್ಲಿ ಏನು ಗೋಲ್‌ಮಾಲ್ ಆಗಿವೆ ಎಂದು ಹೇ... ತಿ...ಯಬೇಕು?

ಅಧ್ಯಕ್ಷರು :- ವಿರೋಧ ಪಕ್ಷದ ನಾಯಕರಿಗೆ ನಾನು ಅಲೋ ಮಾಡಿದ್ದೇನೆ. ಅವರು ಎಕ್ಸ್‌ಪ್ಲೇನ್ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎನ್. ಬಚ್ಚೇಗೌಡ :- ಹೇಳಬೇಡಿ ಹೇಳಬೇಡಿ ಎಂದರೆ ಹೇಗೆ?

ಅಧ್ಯಕ್ಷರು :- ಹೇಳಬೇಡಿ ಎಂದು ನಾನೆಲ್ಲಿ ಹೇಳಿದೆ? ಬೇಗ ಕನ್‌ಕ್ಲೂಡ್ ಮಾಡಿ ಎಂದು ಹೇಳುತ್ತಿದ್ದೇನಷ್ಟೆ. This is only a preliminary submission, not in detail.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ):- ಇದು ಬಹಳ ಗಹನವಾದ ವಿಚಾರ ನಾನು ಡಯಾಬಿಟಿಕ್ ಪೇಷಂಟ್. ನಾನು ಮುಂದೆ ಇಲ್ಲಿ ಔಷಧಿ ಕೊಳ್ಳಬೇಕೆ ಅಥವಾ ಬೇರೆ ರಾಜ್ಯದಲ್ಲಿ ಕೊಳ್ಳಬೇಕೆ ಎಂದು ಚಿಂತನೆ ಮಾಡಬೇಕು. ಇಲ್ಲದಿದ್ದರೆ ನಾವು ಸತ್ತು ಹೋಗುತ್ತೇವೆ.

ಅಧ್ಯಕ್ಷರು :- ಬಹಳ ಇಂಪಾರ್ಟೆಂಟ್ ಎಂದು ಅಲೋ ಮಾಡಿದ್ದೇನೆ. ಅವರು ಹೇಳಿ ಮುಗಿಸಲಿ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ :- ಮಾನ್ಯ ಅಧ್ಯಕ್ಷರೆ, ಶಾಸಕರ ಭವನದ ಕ್ಲಿನಿಕ್‌ನಲ್ಲಿನ ಡಾಕ್ಟರ್‌ಗಳು, ಈ ತರಹದ ಔಷಧಿ ನೀವು ತೆಗೆದುಕೊಳ್ಳಬೇಡಿ, ಹೊರಗಡೆ ತೆಗೆದುಕೊಳ್ಳಿ ಎಂದು ಶಾಸಕರಿಗೆ ಅಡ್‌ವೈಜ್ ಮಾಡುತ್ತಿದ್ದಾರೆ.

ಅಧ್ಯಕ್ಷರು :- ಜಗದೀಶ್ ಶೆಟ್ಟರ್‌ರವರು ಹೇಳುತ್ತಿದ್ದನ್ನು ಮಾತ್ರ ಬರೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು :- ನಿಮ್ಮ ನಾಯಕರು ಮಾತನಾಡುವಾಗ ನೀವು ಏಕೆ ಮಾತನಾಡುತ್ತೀರಿ? I have allowed Mr. Shetter to Speak. Mr. Shetter, You Please conclude.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೆ, ಇವತ್ತು ಪತ್ರಿಕೆಗಳಲ್ಲಿ ಮಂತ್ರಿಗಳ ಹೆಸರು ಬಂದಿದ್ದು, ನಿನ್ನೆ ಎಲೆಕ್ಟ್ರಾನಿಕ್ ಮೀಡಿಯಾಗಳಲ್ಲಿ ಹಾಗೂ ಟಿವಿ ಚಾನಲ್‌ಗಳಲ್ಲಿ ನ್ಯೂಸ್ ಐಟಂಗಳಲ್ಲಿ ನೇರವಾಗಿ ಡಾ|| ಸುದರ್ಶನ್‌ರವರು ಹೇಳಿಕೆ ಕೊಟ್ಟಿರುವುದು ಬಂದಿದೆ. ಅಂದರೆ ಅಲ್ಲಿನ ಸಿಬ್ಬಂದಿ ವರ್ಗದವರು ಏನು ಹೇಳಿಕೆ ಕೊಟ್ಟಿದ್ದಾರೆ ಅದರ ಆಧಾರದ ಮೇಲೆ ಅವರು ಕೊಟ್ಟಿರುವುದು ಇವತ್ತು ಬಂದಿದೆ. ಆ ಹಿನ್ನೆಲೆಯನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಇದರ ಬಗ್ಗೆ ಸಂಪೂರ್ಣವಾದ ತನಿಖೆಯಾಗಬೇಕಾಗುತ್ತದೆ ಮತ್ತು ಲೋಕಾಯುಕ್ತರ ಮೇಲೆ ನಮಗೆ ಸಂಪೂರ್ಣವಾದ ನಂಬಿಕೆಯಿದ್ದು ಅವರು ಕೆಲಸ ಮಾಡುತ್ತಿದ್ದಾರೆ. ಆದರೆ ಈ ಮುನ್ನೂರು ಕೋಟಿ ರೂಪಾಯಿ ಹಗರಣಕ್ಕೆ ಸಂಬಂಧಪಟ್ಟಂತೆ ನಾವು ಹಿಂದೆ ಕೂಡ ಸಿಎಂಸಿ ಹಗರಣಗಳ ಸಂದರ್ಭದಲ್ಲಿಯೂ ಕೂಡ ಪ್ರತ್ಯೇಕವಾದಂಥ ತನಿಖೆಗೆ ಕೊಡಿ ಎಂದು ಹೇಳಿದರೂ ನೀವು ಕೊಡಲಿಲ್ಲ. ಅದಕ್ಕಾಗಿ ನಾವು ಇಲ್ಲಿ ಇನ್‌ಸಿಸ್ಟ್ ಮಾಡುವುದೇನೆಂದರೆ, ಹಿಂದೆ ಲೋಕಾಯುಕ್ತರು ಧಾಳಿ ಮಾಡಿದಂಥ ಸಂದರ್ಭದಲ್ಲಿ ಮಂತ್ರಿಗಳ ಹೆಸರು ಬಂದಿರಲಿಲ್ಲ. ಆದರೆ ಇವತ್ತು ಮಂತ್ರಿಗಳ ಹೆಸರು ನೇರವಾಗಿ ಇಲ್ಲಿ ಬಂದಿದೆ. ಹೀಗಾಗಿ ಇದು ಕೇವಲ ಮಂತ್ರಿಗಳು ಅಷ್ಟೇ ಅಲ್ಲದೆ ಇದು ಜಂಟಿ ಜವಾಬ್ದಾರಿಯಾಗಿದೆ. ಇಡೀ ಮಂತ್ರಿಮಂಡಲ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಜಂಟಿ ಜವಾಬ್ದಾರಿ ಇಲ್ಲಿ ಬರುತ್ತದೆ. ಇದು ಕೇವಲ ಮಂತ್ರಿಗಳಿಗೆ ಮಾತ್ರ ಸೀಮಿತವಾಗುವುದಿಲ್ಲ ಮುಖ್ಯಮಂತ್ರಿಗಳು ಈ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಮುಖ್ಯಮಂತ್ರಿಗಳ ಆಡಳಿತದ ಅವಧಿಯಲ್ಲಿ ಮುನ್ನೂರು ಕೋಟಿ ರೂಪಾಯಿ ಭ್ರಷ್ಟಚಾರದ ಹಗರಣ ನಡೆದರೆ ಅವರು ಕೂಡ ಜವಾಬ್ದಾರಿಯಾಗುತ್ತಾರೆ. ಹೀಗಾಗಿ ಜಂಟಿ ಜವಾಬ್ದಾರಿ ಇಡೀ ಸರ್ಕಾರದ್ದು ಇದೆ. ಅದಕ್ಕಾಗಿ ಇದರ ಬಗ್ಗೆ ಒಂದು ನ್ಯಾಯಾಂಗ ತನಿಖೆಯಾಗಬೇಕಾಗುತ್ತದೆ. ಏಕೆಂದರೆ, ಆ ಒಂದು ಸ್ಪಷ್ಟತೆ ಬರುವುದಿಲ್ಲ. ಜೊತೆಗೆ ನಾವು ಇಲ್ಲಿಯವರೆಗೆ ಗಮನಿಸಿದಂತೆ, ಲೋಕಾಯುಕ್ತರ ತನಿಖೆಗಳ ಯಾವ್ಯಾವು, ಎಷ್ಟರಮಟ್ಟಿಗೆ ನಡೆದಿದೆ. ಎಷ್ಟು ಮಂದಿ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಿ

ಕ್ರಮ ಕೈಗೆ ಗಡಿದ್ದಾರೆ, ಅಂತಿಮವಾಗಿ ಎಲ್ಲಾ ತೀರ್ಪುಗಳು ಹೊರಗೆ ಬಂದಿದ್ದು ಆ ನಂತರ ತನಿಖೆ ಪ್ರಾರಗಿದೆ. ಇನ್ನುವರೆಗೆ ಯಾವುದೂ ಹೊರಗೆ ಬಂದಿಲ್ಲ. ಹೀಗಾಗಿ ಇದು ನಮ್ಮ ರಾಜ್ಯದಲ್ಲಿ ಅತ್ಯಂತ ದೊಡ್ಡದಾದ ಭ್ರಷ್ಟಾಚಾರ ನಡೆದಿದ್ದು, ಇದರ ಬಗ್ಗೆ ಸಂಪೂರ್ಣವಾದ ತನಿಖೆಯಾಗಬೇಕು, ಆ ತನಿಖೆ ನ್ಯಾಯಾಂಗದಿಂದ ಮಾತ್ರ ಸಾಧ್ಯ ಎಂದು ಹೇಳಬೇಕಾಗುತ್ತದೆ. ಅದಕ್ಕಾಗಿ ಈ ತನಿಖೆಯಾಗುವವರೆಗೆ, ಇವತ್ತು ಯಾರ ಮೇಲೆ ಈ ಆಪಾದನೆ ಬಂದಿದೆ, ಮಾನ್ಯ ಮಲಕಾರೆಡ್ಡಿ ಇರಬಹುದು, ಮಾನ್ಯ ಕಾಗೋಡು ತಿಮ್ಮಪ್ಪನವರು ಹಾಗೂ ಮಂತ್ರಿಗಳು, ಹಿಂದಿನ ಮಂತ್ರಿಗಳ ಮೇಲೆ ಬಂದಿದೆ, ಇವರು ರಾಜೀನಾಮೆ ಕೊಡಬೇಕಾಗುತ್ತದೆ. ಅವರ ಜೊತೆಗೆ ಇದರ ಜಂಟಿ ಜವಾಬ್ದಾರಿ ಮಾನ್ಯ ಮುಖ್ಯಮಂತ್ರಿಗಳಿಗೂ ಬರುವುದರಿಂದ, ಆ ತನಿಖೆ ಮುಗಿಯುವವರೆಗೆ ಅವರು ರಾಜೀನಾಮೆ ಕೊಡಬೇಕಾಗುತ್ತದೆ. ರಾಜೀನಾಮೆ ಹಾಗೂ ಸಂಪೂರ್ಣವಾಗಿ ನ್ಯಾಯಾಂಗ ತನಿಖೆ ಆಗಬೇಕೆಂದು ನಾನು ಒತ್ತಾಯ ಪಡಿಸುತ್ತೇನೆ.

Mr. Speaker :- Hon. Member Mr Shindia,

ಶ್ರೀ ಎಸ್. ಸುರೇಶ್ ಕುಮಾರ್ :- ನಾನೂ ನೋಟೀಸ್ ಕೊಡಿದ್ದೇನೆ, ದಯಮಾಡಿ ನನಗೂ ಅವಕಾಶ ಕೊಡಿ.

Mr. Speaker :- No, no, ಪ್ರಿಲಿಮಿನರಿ ಸಬ್‌ಮಿಷನ್ ಮಾಡಲು ಫಸ್ಟ್ ಸಿಗ್ನೇಟರಿಗೆ ಅವಕಾಶ ಕೊಡಲಾಗುವುದು. ಸ್ವಲ್ಪ ತಡೆಯಿರಿ. When I am standing you cannot speak like that-- You please take your seat.

ಶ್ರೀ ಎಸ್. ಸುರೇಶ್ ಕುಮಾರ್ :- * * ನಾವು ಯಾಕೆ ಮಾತನಾಡುವುದು?

ಅಧ್ಯಕ್ಷರು :- * * ಮಾಡುತ್ತಿರಲ್ಲಾ ಅದಕ್ಕೋಸ್ಕರ ನಾನು ನಿಂತುಕೊಳ್ಳಲೇಬೇಕಲ್ಲವೆ? ನೀವು * * ಮಾಡಲಿಲ್ಲವೆಂದರೆ ನಾನೇಕೆ ನಿಂತುಕೊಳ್ಳಬೇಕು? ಪ್ರಾಮಾಣಿಕವಾಗಿ ಕೇಳುತ್ತಿರುತ್ತೇನೆ.

ಶ್ರೀ ಸುರೇಶ್ ಕುಮಾರ್ :- ನಾವು ಎಲ್ಲಿ * * ಮಾಡುತ್ತೇವೆ? * * ಎಲ್ಲಿ ಮಾಡುತ್ತೇವೆ? ನಾವು * * ಮಾಡುವುದಕ್ಕೆ ಹೌಸಿಗೆ ಬಂದಿಲ್ಲ....

Mr. Speaker : Why did you say so; you withdraw your word. You can't say like that.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೆ, ಅವರು ಇಲ್ಲಿ ಸಿಗ್ನೇಟರಿ ಇದ್ದಾರೆ, ಆದುದರಿಂದ ಪ್ರಿಲಿಮಿನರಿ ಸಬ್‌ಮಿಷನ್ ಮಾಡಬೇಕಲ್ಲವೆ?

ಅಧ್ಯಕ್ಷರು :- ಪ್ರಿಲಿಮಿನರಿ ಸಬ್‌ಮಿಷನ್‌ಗೆ ಫಸ್ಟ್ ಸಿಗ್ನೇಟರಿ ಮಾತ್ರ ಅವಕಾಶ ನೀಡಬೇಕೆಂದು ಕೌಲ್ ಅಂಡ್ ಶಕ್ದರ್‌ನಲ್ಲಿ ಇದೆ.

ಶ್ರೀ ಜಗದೀಶ್ ಶೆಟ್ಟರ್ :- ಹಾಗಾದರೆ ನೀವು ಚರ್ಚಿಸಲು ಅವಕಾಶ ಕೊಟ್ಟುಬಿಡಿ, ನಾವು ಎಲ್ಲರೂ ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು :- ನನಗೆ ಆ ವಿಚಾರ ಬಿಡಿ, ಅವರು ಇನ್ನು ಮಾತನಾಡುವವರು ಇದ್ದಾರೆ. ಆಲೋಚನೆ ಮಾಡುವುದು ನನಗೆ ಸಂಬಂಧಪಟ್ಟಿದ್ದು, ನನಗೆ ಆ ವಿಚಾರ ಬಿಟ್ಟುಬಿಡಿ.

---

* * ಅಧ್ಯಕ್ಷರ ಆದೇಶದ ಮೇರೆಗೆ ಈ ಪದಗಳನ್ನು ತೆಗೆದು ಹಾಕಲಾಗಿದೆ.

ಜಗದೀಶ್ ಶೆಟ್ಟರ್ :- ಪ್ರಿಲಿಮಿನರಿ ಸಬ್‌ಮಿಷನ್‌ಗೆ ಯಾರು ಸಿಗ್ನೇಟರಿ ಇದ್ದಾರೆ ಅವರಿಗೂ ನೀವು ಮೊದಲು ಅವಕಾಶ ಕೊಡಬೇಕು.

ಅಧ್ಯಕ್ಷರು :- ಹಾಗಾದರೆ ನೀವು ಒಂದು ಕೆಲಸ ಮಾಡಿ 35 ಜನ ಸಹಿ ಹಾಕಿದರೆ ಏನು ಮಾಡುತ್ತೀರಿ? ನಾನಗೇ ಅವಕಾಶ ಕೊಡಲಿ? ಕೌಲ್ ಅಂಡ್ ಶಕ್ದರ್ ಪ್ರಕಾರ ಯಾರು ಫಸ್ಟ್ ಸಿಗ್ನೇಟರಿ ಇದ್ದಾರೆ ಅವರಿಗೆ ಮೊದಲು ಅವಕಾಶ ನೀಡಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :- ನಾವು 4-5 ಜನರು ಮಾಡಿದ್ದೇವೆ. ಇಲ್ಲಿಯ ವರೆಗೆ ಯಾರು ಸಿಗ್ನೇಟರಿ ಆಗಿಲ್ಲ ಅವರೆಲ್ಲರಿಗೂ ಪ್ರಿಲಿಮಿನರಿ ಸಬ್‌ಮಿಷನ್ ಅವಕಾಶ ಮಾಡಲು ಕೊಟ್ಟಿದ್ದಾರೆ.

Mr. Speaker :- I can't allow all the Members. ಕೃಷ್ಣಮೂರ್ತಿಯವರೇ, I have not called you. ತಮ್ಮನ್ನು ನಾನು ಕರೆದಿದ್ದನೆಯೇ? ದಯವಿಟ್ಟು ತಾವು ಆ ರೀತಿ ನಿಂತುಕೊಳ್ಳಬೇಡಿ, ನಾನು ತಮ್ಮನ್ನು ಕರೆದಿಲ್ಲ ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಸದನದ ಸದಸ್ಯನಾಗಿ ನನಗೆ ಹಾಗೂ ಸದನಕ್ಕೆ ಈ ಮಾಹಿತಿಯನ್ನು ತಾವು ಒದಗಿಸಿಕೊಡಬೇಕು. ದಯವಿಟ್ಟು ತಾವು ಆ ಸ್ಥಾನದಿಂದ ಕೊಟ್ಟಿರುವುದನ್ನು ತೀರ್ಮಾನವೆಂದು ಒಪ್ಪಿಕೊಳ್ಳುತ್ತೇವೆ. ತಾವು ರೂಲ್ಸ್ ಪ್ರಕಾರ ಸಿಗ್ನೇಟರಿಯಲ್ಲಿ ಮೇನ್ ಸಿಗ್ನೇಟರಿ ಯಾರು ಇದ್ದಾರೆ ಅವರಿಗೆ ಕೊಡುತ್ತೇನೆಂದು ಹೇಳಿದಿರಿ.

ಅಧ್ಯಕ್ಷರು :- ನಾನು ಒಂದು ಸಲ ಅಲೌ ಮಾಡಿದ ಮೇಲೆ ಎಲ್ಲರೂ ಮಾತನಾಡಬಹುದು. ನಾನು ಅಡ್ಮಿಟ್ ಮಾಡಿದ ಮೇಲೆ all signatories can speak. I have no objection.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ನಾನು ಕೇಳುತ್ತಿರುವುದು ಎರಡು ವಿಷಯ, ಮೊದಲನೇಯದಾಗಿ ಇದುವರೆವಿಗೂ ನಮ್ಮ ನಿಯಮಾವಳಿಯಲ್ಲಿ ಏನೇ ಇದ್ದರೂ ಸದನದ ಸತ್ಸಂಪ್ರದಾಯವನ್ನು ನಾವು ಮಾಡಿಕೊಂಡು ಬಂದಿದ್ದೇವೆ. ಅದರೊಳಗೆ ಇಂಥ ಸಂದರ್ಭದಲ್ಲಿ ಉಳಿದವರು ಎಷ್ಟೆಷ್ಟು ಜನ ಮಾತನಾಡಿದ್ದಾರೆಂಬುದು ನಮ್ಮ ಸದನದ ದಾಖಲೆಗಳಲ್ಲಿದೆ. ಹೀಗಾಗಿ ತಾವು ಆ ದಾಖಲೆಗಳ ಹಿನ್ನೆಯಲ್ಲಿ ಆ ಎಲ್ಲಾ ಸತ್ಸಂಪ್ರದಾಯದ ಹಿನ್ನಲೆಯಲ್ಲಿ ಆಯ್ದು ಮಾಹಿತಿಗಳನ್ನು ನಮಗೆ ದೊರಕಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು :- ಕಳುಹಿಸಿ ಕೊಡುತ್ತೇನೆ ಬಿಡಿ

ಶ್ರೀ ಬಿ.ಎನ್. ಬಚ್ಚೇಗೌಡ :- ಈಗಾಗಲೇ ತಮ್ಮ ನಾಯಕರು ಹೇಳಿದ್ದಾರೆ, ನಮ್ಮ ನಾಯಕರಿಗೆ ಅವಕಾಶ ಕೊಡಿ.

ಅಧ್ಯಕ್ಷರು :- ನೀವೇ ಹೇಳಿ ಹಾಗಾದರೆ 35 ಜನರಿಗೂ ನಾನು ಅಲೋ ಮಾಡಬೇಕು. All the 35 members! ನಾನು ಒಂದು ಸಲ ಅಡ್ಮಿಟ್ ಮಾಡಿದ ಮೇಲೆ ನಾನು ಯಾರ್ಯಾರಿಗೆ ಪರ್ಮಿಟ್ ಮಾಡುತ್ತೇನೆ ಅವರೆಲ್ಲರೂ ಮಾತನಾಡಲಿ... ಸ್ವಾಮಿ, ಬೇರೆ ಪಾರ್ಟಿಯವರು ಕೊಟ್ಟಿದ್ದಾರೆ, ಅವರಿಗೂ ನಾನು ಅವಕಾಶ ಕೊಡಬೇಕಲ್ಲವೆ?

(ಗೊಂದಲ)

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ನಿಮ್ಮ ನಾಯಕರು ಈಗಾಗಲೇ ಮಾತನಾಡಿದರು. ನಂತರ ಮಾನ್ಯ ಸಿಂಧ್ಯಾರವರು ಮಾತನಾಡಲಿ, ನಂತರ ನಮ್ಮ ನಾಯಕರಾದ ಶ್ರೀ ಚನ್ನಿಗಪ್ಪ ರವರು ಮಾತನಾಡಲಿ. ಅಡ್ಮಿಟ್ ಆದ ಮೇಲೆ ತಾವು ಎಲ್ಲರಿಗೂ ಅವಕಾಶ ಕೊಡಿ.

ಅಧ್ಯಕ್ಷರು :- ಮಾನ್ಯ ಸಿಂಧ್ಯಾರವರೇ ತಾವು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಈ ವಿಷಯಕ್ಕೆ ಇನ್ನು ಯಾರ್ಯಾರು ನಿಲುವಳಿ ಸೂಚನೆ ಕೊಟ್ಟಿದ್ದಾರೆ? ಆ ಬಗ್ಗೆಯೂ ನಮಗೆ ಮಾಹಿತಿ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು :- ಆಯಿತು ಒಪ್ಪಿಕೊಳ್ಳುತ್ತೇನೆ, ನಿಲುವಳಿ ತಾವು ಯಾರೂ ಸಿಗ್ನೇಟರಿ ಮಾಡಿಲ್ಲ ಒಬ್ಬರೇ ಮಾಡಿರುವುದು, ಶೆಟ್ಟರ್‌ರವರು ಒಬ್ಬರೇ ಮಾಡಿರುವುದು ನಂತರ ನೀವು ಎಲ್ಲಾ ಬಂದು ಮಾಡಿದ್ದು, ಅದು ಸಮಯ ಮುಗಿದು ಮೇಲೆ, under Rule 363 I can allow even other parties also, if the matter is very important. He is one of the important leaders. Residiary Powers. ನನಗೆ ಇದೆ.

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೆ, ನಾನು ಕೊಟ್ಟಿದ್ದೇನೆ.

ಅಧ್ಯಕ್ಷರು :- ಕೊಟ್ಟಿದ್ದೀರಿ ಆದರೆ ತಾವು 11-30ಕ್ಕೆ ಕೊಟ್ಟಿದ್ದೀರಿ. Under Rule 363, I have allowed Mr. Scindia to speak.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ರೂಲ್ 363 ಒಳಗೆ ನಮಗೂ ಸ್ವಲ್ಪ ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು :- ನೋಡೋಣ. Let us see.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :- ಮಾನ್ಯ ಅಧ್ಯಕ್ಷರೆ, ಇದು ಗಂಭೀರವಾದ ವಿಚಾರ. ನಾನು ಇವತ್ತು ವೈಯಕ್ತಿಕ ಕಾರಣಗಳಿಂದಾಗಿ ಸದನಕ್ಕೆ ಸ್ವಲ್ಪ ತಡವಾಗಿ ಬಂದಿದ್ದೇನೆ. ಇಲ್ಲದಿದ್ದರೆ ಸಾಮಾನ್ಯವಾಗಿ ತಮ್ಮ ಕೊಠಡಿಗೆ ಬಂದು ಈ ರೀತಿಯ ವಿಚಾರಗಳನ್ನು ನಮ್ಮ ಪಕ್ಷದ ಪರವಾಗಿ ಮಾತನಾಡಲಿಕ್ಕೆ ತಮ್ಮ ಪರವಾನಿಗೆಯನ್ನು ಬೇಡಿಕೊಳ್ಳತಕ್ಕಂಥ ಒಂದು ಸತ್ಸಂಪ್ರದಾಯವನ್ನು ನಾವು ಹಾಕಿಕೊಂಡು ಬಂದಿದ್ದೇವೆ. ಅದರಿಂದ, ಮಾನ್ಯ ವಿರೋಧ ಪಕ್ಷದ ನಾಯಕರು ನನ್ನನ್ನು ಸಂಪರ್ಕ ಮಾಡಿದರು, ವಿರೋಧ ಪಕ್ಷದ ವತಿಯಿಂದ ನಾವು ನಿಲುವಳಿ ಸೂಚನೆಯನ್ನು ಕಳುಹಿಸುತ್ತೇವೆಂದು ಅವರು ಹೇಳಿದಾಗ ನಾವು ಕಳುಹಿಸಿ ಚರ್ಚೆಯಲ್ಲಿ ನಾವೂ ಕೂಡ ಭಾಗವಹಿಸುತ್ತೇವೆಂದು ಹೇಳಿದೆವು. ಅವರು ಆಗಲೇ ಕಳುಹಿಸಿಬಿಟ್ಟಿದ್ದರು, ಆದುದರಿಂದ ಪ್ರತ್ಯೇಕವಾಗಿ ನಮ್ಮ ಪಕ್ಷದ ವತಿಯಿಂದ ಮುಖ್ಯ ಸಚೇತಕರಾದ ಶ್ರೀಮಾನ್ ಬಚ್ಚೇಗೌಡರವರು ಈ ವಿಚಾರದ ಬಗ್ಗೆ ಪ್ರಸ್ತಾಪವಾಗಲಿ ಎನ್ನುವ ದೃಷ್ಟಿಯಿಂದಾಗಿ ಯಾವುದಾದರೊಂದು ರೂಪದಲ್ಲಿ ಅವಕಾಶ ಕೊಡಿ ಎಂದು ತಮ್ಮಲ್ಲಿ ನಾವು ಬೇಡಿದ್ದೇವೆ. ವಿಷಯದ ಸೂಕ್ಷ್ಮತೆಯನ್ನು ತಾವು ಅರ್ಥ ಮಾಡಿಕೊಂಡಿದ್ದೀರಿ, ಬಹುಶಃ ಅರ್ಥ ಮಾಡಿಕೊಂಡಿರದಿದ್ದರೆ ಈ ವಿಷಯಕ್ಕೆ ಇಷ್ಟು ಸಹಿತ ಚರ್ಚೆಗೆ ಅವಕಾಶ ಕೊಡದೆ ಇರುವುದಕ್ಕೆ ಪುಸ್ತಕಗಳ ನಿಯಮಾವಳಿಗಳಲ್ಲಿ ಅವಕಾಶ ಇದೆ. ವಿರೋಧ ಪಕ್ಷದ ನಾಯಕರು ಪತ್ರಿಕೆಗಳಲ್ಲಿ ಬಂದಿರತಕ್ಕಂಥ ಎಲ್ಲಾ ವಿಚಾರಗಳನ್ನು ಸವಿಸ್ತಾರವಾಗಿ ಮಂಡನೆ ಮಾಡಿರುವುದರಿಂದ ನಾನು ಪುನಃ ಅದನ್ನು ಹೇಳಲಿಕ್ಕೆ ಬಯಸುವುದಿಲ್ಲ. ಇದರಲ್ಲಿ ಒಂದೆರಡು ಪ್ರಮುಖವಾದ ವಿಚಾರಗಳು ಬರುತ್ತವೆ. ಮೊದಲನೆಯದಾಗಿ ನಮ್ಮ ಶ್ರೀನಿವಾಸ ಗೌಡರವರು ಹೇಳಿದಂಥ ವಿಚಾರ. 20 ವರ್ಷಗಳ ಹಿಂದೆ ನಾನು 10-12 ತಿಂಗಳು ಎರಡೂ ಇಲಾಖೆ ಮೆಡಿಕಲ್ ಎಜ್ಯುಕೇಷನ್ ಅಂಡ್ ಹೆಲ್ತ್ ಡಿಪಾರ್ಟ್‌ಮೆಂಟ್‌ಗಳನ್ನು ನೋಡಿಕೊಂಡಿದ್ದೆ.

ಆಗ ಗೌರ್ನಮೆಂಟ್ ಮೆಡಿಕಲ್ ಸ್ಟೋರ್ಸ್, ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್ ಇವೆಲ್ಲಾ ಬಹಳ ಚಿಕ್ಕದಾಗಿತ್ತು. ಈಗ 20 ವರ್ಷಗಳ ನಂತರ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಪ್ರಶ್ನೆ ಇರತಕ್ಕಂಥದ್ದು ಏನಿದೆ, ನಾವು ಸರ್ಕಾರಿ ಆಸ್ಪತ್ರೆಗಳಲ್ಲಿ ತೆಗೆದುಕೊಳ್ಳತಕ್ಕಂಥ ಎಲ್ಲಾ ಔಷಧಿಗಳ ಗುಣ ಮಟ್ಟವೂ ನಕಲಿ ಎಂದು ಈ ತನಿಖೆಯಿಂದ ಮೇಲ್ನೋಟಕ್ಕೆ ಕಂಡು ಬರುತ್ತದೆ. ಈಗ ಏನಾಗಿದೆ ಎಂದರೆ, ಒಂದು ವರ್ಷದ ಹಿಂದೆ, ಆರು ತಿಂಗಳುಗಳ ಹಿಂದೆ ನೀವು ತೆಗೆದುಕೊಂಡಿರತಕ್ಕಂಥವುಗಳು, ಸರ್ಕಾರಿ ಆಸ್ಪತ್ರೆಗಳಿಗೆ, ಜಿಲ್ಲಾ ಕೇಂದ್ರಗಳಿಗೆ, ತಾಲ್ಲೂಕು ಕೇಂದ್ರಗಳಿಗೆ, ಪ್ರೈಮರಿ ಹೆಲ್ತ್ ಸೆಂಟರ್‌ಗಳಿಗೆ, ಜಿಲ್ಲಾ ಪಂಚಾಯಿತಿನವರು ಕೆಲವು ಪರ್ಚೇಸ್ ಮಾಡಿರುತ್ತಾರೆ. ಅದೊಂದು ರೇಷಿಯೋ ಇದೆ. ಜಿಲ್ಲಾ ಪಂಚಾಯಿತಿನವರು ಇಷ್ಟು ಮಾಡಬೇಕು. ಗೌರ್ನಮೆಂಟ್ ಮೆಡಿಕಲ್ ಸ್ಟೋರ್ಸ್‌ನವರು ಇಷ್ಟು ಮಾಡಬೇಕು, ಡ್ರಗ್ ಕಂಟ್ರೋಲ್‌ರವರ ರೆಕ್ಮೆಂಡೇಷನ್ನಿನ ಮೇಲೆ ಅವರು ಮಾಡಿರುತ್ತಾರೆ. ಈಗಾಗಲೇ ಅದು ಆಗಿ ಹೋಗಿದೆ. ನೀವು ತಕ್ಷಣ ತೆಗೆದುಕೊಳ್ಳಬೇಕಾದ ಕ್ರಮ ಏನೆಂದರೆ, ನನ್ನ ಒತ್ತಾಯ ಈ ಸಂದರ್ಭದಲ್ಲಿ ಏನೆಂದರೆ, ಮೊದಲನೆಯದಾಗಿ ತಾವು ಇವತ್ತೇ ಲೋಕಾಯುಕ್ತರಿಗೆ ಸಂಪರ್ಕ ಮಾಡಿ ಅವರಿಂದ ಈ ರೀತಿ ಔಷಧಿಗಳ ಬಗ್ಗೆ ಏನು ತೆಗೆದುಕೊಂಡಿದ್ದಾರೆ ಅದರ ಬಗ್ಗೆ ಒಂದು ಮಧ್ಯಂತರ ವರದಿ ತೆಗೆದುಕೊಳ್ಳಬೇಕು. ಅದನ್ನು ತೆಗೆದುಕೊಂಡು ಯಾವ್ಯಾವುದು ಸ್ಪೂರಿಯೆಸ್ ಇದೆ, ಸ್ಪೂರಿಯೆಸ್ ಎಲ್ಲಾ ಔಟಡೇಟಡ್, ಡೇಟ್ ಆಗಿರತಕ್ಕಂಥವುಗಳನ್ನು ಸಪ್ಲೈ ಮಾಡಿರತಕ್ಕಂಥ ಸಂಭವಗಳು ಇವೆ. ಅದನ್ನು ತಕ್ಷಣ ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮೊದಲನೆಯದಾಗಿ ಆಗ್ರಹಪಡಿಸುತ್ತೇನೆ. ಎರಡನೆಯದಾಗಿ ಅಲ್ಲಿರತಕ್ಕಂಥ ಅಧಿಕಾರಿಗಳು, ಬಹಳ ಅಪಾದನೆಗಳನ್ನು ಮಾಡಿದ್ದಾರೆ, ಮಾನ್ಯ ಮಾಲಕರೆಡ್ಡಿಯವರಿಗೆ ದುಡ್ಡನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ, ಪ್ರತಿ ತಿಂಗಳೂ ಕೊಡುತ್ತಿದ್ದೇವೆಂದು ಹೇಳಿದ್ದಾರೆ, ಇವತ್ತಿನ ಸಚಿವರೊಬ್ಬರಿಗೆ ಕೊಡುತ್ತಿದ್ದೇವೆಂದು ಹೇಳಿದ್ದಾರೆ.

12.10 ಪಿ.ಎಂ.

ನಮ್ಮ ಸರ್ಕಾರ ಅಧಿಕಾರದಲ್ಲಿದ್ದಂಥ ಸಂದರ್ಭದಲ್ಲಿ ಆರೋಗ್ಯ ಮಂತ್ರಿಯಾಗಿದ್ದಂಥ ಡಾ।। ಮಹದೇವಪ್ಪನವರ ಹೆಸರೂ ಕೂಡ ಕೆಲವು ಮಾಧ್ಯಮಗಳ ಮುಖಾಂತರ ಕೇಳಿ[illegible] ಮತ್ತು ಓದಿದ್ದೇವೆ. ಈಗ ಪ್ರಶ್ನೆ ಇರತಕ್ಕಂಥದ್ದು ಏನೆಂದರೆ, ತಾವು ಲೋಕಾಯುಕ್ತದಿಂದ ವ[illegible] ತತ್‌ಕ್ಷಣವೇ ತರಿಸಿಕೊಳ್ಳಬೇಕು. ಏಕೆಂದರೆ, ಆರೋಗ್ಯ ಇಲಾಖೆಯಲ್ಲಿ ತ[illegible]ರತಕ್ಕ[illegible] ಡಾ ।। ಸುದರ್ಶನ್‌ರವರನ್ನು ಎನ್‌ಕ್ವಯರಿ ಆಫೀಸರ್ ಎಂದು ಸ್ಪೆಷಲ್ ಆ[illegible]ಲೋಕಾಯು[illegible] ತಾವು ನೇಮಕ ಮಾಡಿದ್ದೀರಿ. ಇವರೂ ಸಹಿತ ಹಾಲಿ ಇರತಕ್ಕಂಥ ಮಂತ್ರಿಗಳ [illegible]ಗ್ಗೆ ಮಾತನಾಡಿದ್ದಾರ[illegible] ಡಾ।। ಮಾಲಕರೆಡ್ಡಿರವರ ಪ್ರಾಮಾಣಿಕತೆ ಬಗ್ಗೆ ಮತ್ತು ಕರ್ತವ್ಯ ಪ್ರಜ್ಞೆ [illegible]ಗ್ಗೆ ಹಾಗೂ ರಸ್ತೆಯ[illegible] ಅಪಘಾತವಾದಂಥ ಸಂದರ್ಭದಲ್ಲಿ ಒಬ್ಬರನ್ನು ಬದುಕಿಸಿದಂಥ ವಿಚಾರ[illegible]ಲ್ಲಾ ವಾಚಕರವಾಣಿಯ[illegible] ಬಂದಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಆದರೆ, ಮೇಲ್ಪಟ್ಟ[illegible]ಗೂ ಸಹ ಮಾಮೂ[illegible] ಕೊಡಬೇಕಾಗುತ್ತದೆ ಎಂದು ಅವರು ಹೇಳಿದ್ದಾರೆ. ಅಂದ[illegible], ನನ್ನ ಅಭಿಪ್ರಾಯ[illegible]ಲ್ಲಿ ಡಾ।। ಮಾಲಕರೆಡ್ಡಿಯವರ ತೇಜೋವಧೆ ನೆನ್ನೆ ಮಧ್ಯಾಹ್ನದಿಂ[illegible] ಪ್ರಾರಂಭವಾಗಿದೆ. ಕೇ[illegible] ಪತ್ರಿಕೆಗಳಲ್ಲಿ ಓದಿರತಕ್ಕಂಥದಲ್ಲ. ಎಲ್ಲಾ ಪ್ರದರ್ಶನ ಆದಮೇಲೆ ನಿಮ್ಮ ಗೌರವ ಏನು ಉಳಿಯು[illegible]ದೆ[illegible]

ಈ ಪ್ರಶ್ನೆ ನನಗೆ ಮತ್ತು ಮತ್ತೊಬ್ಬರಿಗೆ ನಾಳೆ ದಿವಸ ಬರಬಹುದು. ಆದರೆ, ನಿಮ್ಮ ಗೌರವ ಏನು ಉಳಿಯುತ್ತದೆ ಎನ್ನತಕ್ಕಂಥದ್ದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. You have to defend yourselves. This is the right platform to defend. Today it is the right platform to defend yourself. ಈ ವಿಷಯಕ್ಕೆ ಸಂಬಂಧಪಟ್ಟಂತೆ ತಾವು ಏನು ಹೇಳಬೇಕೆಂದು ಇದ್ದೀರಿ? ಲೋಕಾಯುಕ್ತದ ಕಾರ್ಯದ ಬಗ್ಗೆ ಮತ್ತು ಅವರು ಮಾಡಿರತಕ್ಕಂಥ ಕ್ರಮಗಳ ಬಗ್ಗೆ ಈ ಸಂದರ್ಭದಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ಒಂದು ಸ್ಪೆಷಲ್ ನೋಟೀಸ್ ಕೊಟ್ಟು ಅಲ್ಲಿನ ಕಾರ್ಯದ ಬಗ್ಗೆ ಮತ್ತು ಅವರು ಕಳುಹಿಸಿರುವ ವರದಿಯ ಬಗ್ಗೆ ಮತ್ತು ಅಲ್ಲಿರತಕ್ಕಂಥ ಎನ್‌ಕ್ವಯರಿ ಆಫೀಸರ್ ಏನು ಮಾಡುತ್ತಿದ್ದಾರೆ ಎನ್ನತಕ್ಕಂಥದರ ಬಗ್ಗೆ ಮತ್ತು ಲೋಕಾಯುಕ್ತರ ಧಾಳಿಯಿಂದ ಆಗಿರತಕ್ಕಂಥ ಪರಿಣಾಮಗಳು ಮತ್ತು ಅನುಕೂಲ ಹಾಗೂ ಅನಾನುಕೂಲವೆಲ್ಲವನ್ನೂ ಸಹಿತ ಚರ್ಚೆ ಮಾಡಬೇಕಾಗುತ್ತದೆ. ಆದರೆ, ಈಗ that is a different issue. An opportunity should be given to Dr. Maalaka Reddy to explain his position ಈ ವಿಚಾರ ನಿಮಗೆ ಗೊತ್ತಿರುತ್ತದೆ. ಹಾಗೆಯೇ, ನಿಮ್ಮ ಅಭಿಮಾನಿಗಳು ಹೇಳಿರುತ್ತಾರೆ. ಒಂದು ಸಾರಿ ಬೀದಿಯಲ್ಲಿ ಮಾನ ಹರಾಜಾದರೆ ಮತ್ತೆ ಯಾರು ಸರ್ಟಿಫಿಕೇಟ್ ಕೊಟ್ಟರೂ ಸಹ ವಾಪಸ್ಸು ಬರುವುದಿಲ್ಲ. This is the right platform for you to explain what is the position. ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಆಗಿರತಕ್ಕಂಥ ಒಂದು ಉದಾಹರಣೆಯನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಬಿ. ಸೋಮಶೇಖರ್‌ರವರು ಮತ್ತೆ ಇಲ್ಲಿ ಸದಸ್ಯರಾಗಿ ಬಂದಿದ್ದಾರೆ. ಹಿಂದೆ ಇವರ ಮೇಲೆ ಆಪಾದನೆ ಮಾಡಿದರು. ಇದನ್ನು ಏಕೆ ಮಾಡಿದರು ಎನ್ನತಕ್ಕಂಥದ್ದು ಮತ್ತು ಅ ಸಂದರ್ಭದಲ್ಲಿ ಮಾಡಿದಂಥ ರಾಜಕೀಯ ಪಿತೂರಿಗಳೆಲ್ಲವೂ ಕೂಡ ಜನರಿಗೆ ಗೊತ್ತಿರತಕ್ಕಂಥ ವಿಷಯವಾಗಿದೆ. ಒಂದು ಸಾರಿ ಸಿ.ಓ.ಡಿ. ತನಿಖೆಯಾದ ನಂತರ ಹಾಗೂ ಮತ್ತೊಂದು ಸಾರಿ ಅಂದರೆ ಒಟ್ಟು ಎರಡು ಸಾರಿ ಇವರು ರಾಜೀನಾಮೆ ಕೊಟ್ಟರು. ಆದರೆ, ಡಾ॥ ಮಾಲಕರೆಡ್ಡಿಯವರು ರಾಜೀನಾಮೆ ಕೊಡಿ ಎಂದು ನಾನು ಕೇಳುತ್ತಿಲ್ಲ. I am not demanding your resignation because ಯಾವ ಕಾರಣಕ್ಕಾಗಿ ಒಬ್ಬ ಅಧಿಕಾರಿ ಈ ರೀತಿ ಹೇಳಿದ್ದಾರೆ ಎನ್ನತಕ್ಕಂಥದ್ದು ಮತ್ತು ಹೇಗಾಯಿತು ಎನ್ನತಕ್ಕಂಥ ಹಿನ್ನೆಲೆಯನ್ನು ತಿಳಿದುಕೊಳ್ಳಬೇಕಾಗಿದೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ತತ್‌ಕ್ಷಣ, ಅಂದರೆ 24 ಗಂಟೆಯೊಳಗೆ ನಕಲಿ ಔಷಧಿಗಳನ್ನು ರದ್ದು ಮಾಡುವುದಕ್ಕೆ ರಾಜ್ಯದಲ್ಲಿರತಕ್ಕಂಥ ಎಲ್ಲಾ ಆಸ್ಪತ್ರೆಗಳಿಗೆ ಸೂಚನೆ ಕೊಡತಕ್ಕಂಥ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮೊದಲು ಮಾನ್ಯ ಆರೋಗ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಈ ಸದನದ ಹೊರಗಡೆ ಇರತಕ್ಕಂಥ ಮಾಜಿ ಮಂತ್ರಿಗಳು ಪತ್ರಿಕೆಗಳ ಮೂಲಕ ತಮಗೆ ಸಂಬಂಧಪಟ್ಟಂತೆ I still belive, I am sure, I am confident of that. You are not such a mean-level politician to stoop to that level. I am confident of that. ಇಂಥ ಸನ್ನಿವೇಶದಲ್ಲಿ An opportunity should be given to Dr. Malaka Reddy also. Why this has happened? ತಾವು ಇದನ್ನು ಯೋಚನೆ ಮಾಡಬೇಕಾಗುತ್ತದೆ. ಈಗ ನಾನು ಎರಡು ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇನ್ನು ಮಾನ್ಯ ಅಧ್ಯಕ್ಷರು ಸ್ವಲ್ಪ ಸಿಟ್ಟು ಮಾಡಿಕೊಂಡಿದ್ದೀರಿ. ಈ ವಿಷಯವನ್ನು

ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿರತಕ್ಕಂಥದ್ದು ಕಾನೂನು ಪ್ರಕಾರ ಬಹಳ ಒಳ್ಳೆಯದು. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ರಾಜ್ಯದಲ್ಲಿ ಆಗಿರತಕ್ಕಂಥ ಪ್ರಮುಖ ಘಟನೆಗಳ ಬಗ್ಗೆ ವಿರೋಧಪಕ್ಷದ ನಾಯಕರು ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಅವರದು ಅಧಿಕೃತ ವಿರೋಧಪಕ್ಷವಾಗಿದ್ದು, ಅವರಲ್ಲಿ 40 ಜನ ಸದಸ್ಯರು ಕೂಡ ಇದ್ದಾರೆ. ಆದ್ದರಿಂದ, ಅವರಲ್ಲಿ ಒಬ್ಬರಿಗೋ ಇಬ್ಬರಿಗೋ ಮಾತನಾಡಲು ಅವಕಾಶ ಕೊಡಿ. ಮಾನ್ಯ ಸುರೇಶ್‌ಕುಮಾರ್ ಸಜ್ಜನಿಕೆಯ ವ್ಯಕ್ತಿ. ಇವರು ಅಸೆಂಬ್ಲಿಗೆ ಬಂದಾಗ ಗಲಾಟೆ ಮಾಡುತ್ತಾರೆಂದು ತಾವು ಈಗಾಗಲೇ ಹೇಳಿದ್ದೀರಿ. ಇದರಿಂದ ಅವರ ಇಮೇಜ್‌ಗೆ ಧಕ್ಕೆಯಾಗುತ್ತದೆ. ಆ ಒಂದು ಸನ್ನಿವೇಶದಲ್ಲಿ ಗಲಾಟೆ ಎನ್ನತಕ್ಕಂಥ ಶಬ್ದವನ್ನು ಅಕಂಟೆಟ್‌ಲ್ಲಿ ತಾವು ಉಪಯೋಗ ಮಾಡಿದ್ದೀರಿ. ಆದರೆ, 'galate is not a unparliamentary ಏನಪ್ಪ, ಇವರು ಯಾವಾಗಲೂ ಕಿರುಚುತ್ತಾರೆ ಮತ್ತೆ ಕೋಪ ಮಾಡಿಕೊಳ್ಳುತ್ತಾರೆ ಎಂದು ತಾವು ಹೇಳುವುದಾದರೆ ಇವರಿಗೆ ಬಿ.ಪಿ. ಇರಬಹುದು ಎನ್ನತಕ್ಕಂಥ ಭಾವನೆ ಜನರಲ್ಲಿ ಬಂದರೆ ಇವರ ವ್ಯಕ್ತಿತ್ವಕ್ಕೆ ಧಕ್ಕೆಯಾಗುತ್ತದೆ. ತಮ್ಮ ಮನಸ್ಸು ಈಗ ಬದಲಾವಣೆ ಮಾಡಿಕೊಂಡಿದ್ದೀರಿ. ಆದ್ದರಿಂದ ಆ ಶಬ್ದವನ್ನು ಕಡತದಿಂದ ತೆಗೆಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ಪದೇ ಪದೇ ಎದ್ದು ನಿಂತುಕೊಳ್ಳುತ್ತೀರಿ ಎಂದು ಹೇಳಿರುವುದು ಹಾಗೂ ಗಲಾಟೆ ಎನ್ನತಕ್ಕಂಥ ಪದವನ್ನು ಕಡತದಿಂದ ತೆಗೆಯಿರಿ.

+ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ) :- ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ರಾಜ್ಯದಲ್ಲಿ ಡ್ರಗ್ ಕಂಟ್ರೋಲ್‌ನವರು ಔಷಧಿಗಳನ್ನು ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡುತ್ತಾರೆ. ಆದರೆ ಇವತ್ತಿನದಿವಸ ಈ ಔಷಧಿ ಬಗ್ಗೆ ಜನರಲ್ಲಿ ನಂಬಿಕೆ ಹೋಗಿದೆ. ಇವತ್ತಿನ ದಿವಸ ಶುಗರ್ ಮತ್ತು ಬಿ.ಪಿ. ಇರತಕ್ಕಂಥ ವ್ಯಕ್ತಿಗಳು ಔಷಧಿಗಳನ್ನು ತೆಗೆದುಕೊಳ್ಳಬೇಕೋ ಅಥವಾ ಬೇಡವೋ ಎಂದು ಯೋಚನೆ ಮಾಡತಕ್ಕಂಥ ಸಂದರ್ಭ ನೆನ್ನೆ ರಾತ್ರಿಯಿಂದ ಕ್ರಿಯೇಟ್ ಆಗಿದೆ. ಈ ವಿಷಯ ಪತ್ರಿಕೆಯಲ್ಲಿ ಮತ್ತು ಟಿ.ವಿ.ಯಲ್ಲಿ ಬಂದ ತಕ್ಷಣವೇ ನನಗೆ ಒಬ್ಬರು ಎಷ್ಟು ಕೇಳಿದರೆಂದರೆ, ನೀ ಹೋಗಿ ಶುಗರ್ ಚೆಕ್ ಮಾಡಿಸಿಕೊಳ್ಳಿ, ಏಕೆಂದರೆ, ಡ್ಯೂಪ್ಲಿಕೇಟ್ ಔಷಧಿಗಳನ್ನು ಸರಬರಾ ಮಾಡಿದ್ದಾರೆಂದು ಹೇಳಿದರು. ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಮಾನ್ಯ ಪಿ.ಜಿ ಆರ್ ಸಿಂಧ್ಯರವರು ಹಾಗೂ ಎಲ್ಲಾ ಸದಸ್ಯರು ಈ ಒಂದು ವಿಚಾರದ ಬಗ್ಗೆ ಮಾತನಾಡಿ ದ್ದರೆ. ಈ ಒಂದು ಇಲಾಖೆಗೆ ಹಿರಿಯರಾಗಿರತಕ್ಕಂಥ ಮಾನ್ಯ ಕಾಗೋಡು ತಿಮ್ಮಪ್ಪನವರು ಮಂತ್ರಿ ಗಿದ್ದಾರೆ. ಹಾಗೆಯೇ ಡಾ॥ ಮಾಲಕರೆಡ್ಡಿರವರು ವೈದ್ಯರಾಗಿ ಉತ್ತಮವಾದ ಸೇವೆಯನ್ನು ಮಾಡಿದ್ದಾರೆ. ಅವರ ಬಗ್ಗೆ ನಾವು ಬ್ಲೇಮ್ ಮಾಡುವುದಕ್ಕೆ ಹೋಗುವುದಿಲ್ಲ. ಈ ಸಂದರ್ಭ ಲ್ಲಿ ಒಂದು ವಿಷಯವನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇ . ವತ್ತಿನದಿವಸ ಹುಷಾರಿಲ್ಲದಂಥ ವ್ಯಕ್ತಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಅಡ್ಮಿಟ್ ಆದಾಗ ಆ ಯ ಇಂಜಕ್ಷನ್ ಮತ್ತು ಔಷಧಿಗಳನ್ನು ತೆಗೆದುಕೊಳ್ಳುವುದಕ್ಕೆ ಜನ ಭಯ ಬೀಳುತ್ತಿದ್ದಾರೆ. ಮ ಕ್ರಮಾಷೆಯ ವಿಷಯವಲ್ಲ. ಇವತ್ತಿನದಿವಸ ಆಸ್ಪತ್ರೆಗೆ ಹೋದರೆ ಚೀಟಿ ಬರೆದುಕೊಡುವುದಕ್ಕೆ ಕ ಡ ಯಾರು ಇರುವುದಿಲ್ಲ. ನನ್ನ ಕ್ಷೇತ್ರದ ದಾಬಾಸ್‌ಪೇಟೆ ಹತ್ತಿರ ಇರುವ ತ್ಯಾಮಗೊಂಡ್ಲು ನಲ್ಲಿರು ವ ಸರ್ಕಾರಿ ಆಸ್ಪತ್ರೆಗೆ ಹೋಗಿ ಕಾಲು ಮುರಿದಿರುವುದಕ್ಕೆ ಔಷಧಿ ಕೊಡಬೇಕೆಂದು ಕೇಳಿ ದರೆ, ಮ್ಮ ಹತ್ತಿರ ಯಾವುದೇ ಔಷಧಿ ಇಲ್ಲ ಎಂದು ಹೇಳುತ್ತಿದ್ದರು. ಈ ವಿಷಯಕ್ಕೆ ಸಂಬಂಧಪ ತೆ ನಾನು

ಅನೇಕ ಸಾರಿ ಮಾನ್ಯ ಮುಖ್ಯಮಂತ್ರಿಯವರಿಗೆ ಮತ್ತು ಸಚಿವರಿಗೆ ಪತ್ರ ಬರೆದು ತಿಳಿಸಿದ್ದೇನೆ. ಈಗ ಔಷಧಿಗಳನ್ನು ಸರಬರಾಜು ಮಾಡುತ್ತಿದ್ದಾರೆ. ಇವತ್ತಿನ ದಿವಸ ಗುಣಮಟ್ಟ ಇಲ್ಲದೇ ಇರತಕ್ಕಂಥ ಮತ್ತು ಎಕ್ಸ್‌ಪೈರಿ ಡೇಟ್ ಆಗಿರತಕ್ಕಂಥದ್ದು ಮತ್ತು ಡ್ಯೂಪ್ಲಿಕೇಟ್ ಔಷಧಿಗಳನ್ನು ಕಡಿಮೆ ಗುಣಮಟ್ಟ ಔಷಧಿಗಳನ್ನು ತಯಾರು ಮಾಡತಕ್ಕಂಥ ಫ್ಯಾಕ್ಟರಿಗಳಿಂದ ಖರೀದಿ ಮಾಡಿ ಈ ರಾಜ್ಯದ ಜನತೆಗೆ ಸರ್ಕಾರ ಸರಬರಾಜು ಮಾಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಇದರ ಬಗ್ಗೆ ತನಿಖೆ ಆಗಬೇಕಾಗುತ್ತದೆ. ಹಾಗೆಯೇ ಈ ಒಂದು ಉತ್ತಮವಾದಂಥ ಸದನದಲ್ಲಿ ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗಬೇಕಾಗುತ್ತದೆ. ಇದು ಯಾವುದೇ ಪಕ್ಷದ ಪ್ರಶ್ನೆಯಲ್ಲ. ನಮ್ಮದು ಪಾರದರ್ಶಕ ಸರ್ಕಾರ ಎಂದು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ. ಈ ಒಂದು ವ್ಯವಸ್ಥೆಗೆ ನಾವು ತಲೆ ಬಾಗುತ್ತೇವೆ ಮತ್ತು ಒಪ್ಪಿಕೊಳ್ಳುತ್ತೇವೆ. ಲಂಚಕ್ಕೆ ಅವಕಾಶ ಕೊಡದೆ ಲೋಕಾಯುಕ್ತವನ್ನು ಸ್ವತಂತ್ರವಾಗಿ ಬಲಪಡಿಸುತ್ತೇವೆಂದೂ ಸಹ ಹೇಳಿದ್ದಾರೆ. ಉತ್ತಮವಾದ ಲೋಕಯುಕ್ತ ಮಾಡಿದರೆ ನಾವು ಅದನ್ನು ಸ್ವಾಗತ ಮಾಡಿ ಅಭಿನಂದಿಸುತ್ತೇವೆ. ಅವರು ಕೊಟ್ಟಿರತಕ್ಕಂಥ ರಿಪೋರ್ಟ್ ಮತ್ತು ಎಲ್ಲಿ ಏನೇನು ತಪ್ಪುಗಳಾಗಿವೆ ಎಂದು ಅವರು ಹೇಳಿರತಕ್ಕಂಥ ವಿಚಾರದ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡುವುದಕ್ಕೆ ಅವರಿಗೆ ಸ್ವತಂತ್ರವಾದ ಸಮಯಕೊಡಬೇಕಾಗುತ್ತದೆ. ಹಾಗೆಯೇ ಕ್ರಮ ತೆಗೆದುಕೊಳ್ಳುವುದಕ್ಕೂ ಕೂಡ ಸರ್ಕಾರ ಸಮಯ ಕೊಡಬೇಕು. ಸರ್ಕಾರ ಅವರ ಕೈ ಹಿಡಿದುಕೊಳ್ಳಬಾರದು. ಸರ್ಕಾರ ಶಕ್ತಿಯುತವಾಗಿರಬಹುದು. ಇವತ್ತಿನ ದಿವಸ ನಮ್ಮಲ್ಲಿರತಕ್ಕಂಥ ಶಾಸಕಾಂಗ ಕಾರ್ಯಾಂಗ ಮತ್ತು ನ್ಯಾಯಾಂಗ ರೀತಿಯಲ್ಲಿಯೇ ಲೋಕಾಯುಕ್ತವನ್ನು ಬಲಪಡಿಸಿ ಅವರು ಮುಕ್ತವಾಗಿ ಎನ್‌ಕ್ವಯರಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಿರಿಯ ಸಚಿವರಾದಂಥ ಮಾನ್ಯ ಕಾಗೋಡು ತಿಮ್ಮಪ್ಪನವರು ರಾಜಕೀಯ ಮುತ್ಸದ್ದಿ ಮತ್ತು ಹೋರಾಟಗಾರರು. ಆದ್ದರಿಂದ ಇದರ ಬಗ್ಗೆ ದಯವಿಟ್ಟು ಕೂಡಲೇ ತನಿಖೆ ಮಾಡಿಸಬೇಕು. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆಯಾಗಬೇಕು. ಸದರಿ ವಿಷಯದ ಮೇಲೆ ಚರ್ಚೆ ಮಾಡುವುದಕ್ಕೆ ಎಲ್ಲಾ ಸದಸ್ಯರಿಗೆ ಅವಕಾಶಕೊಟ್ಟಿದ್ದಕ್ಕಾಗಿ ಜೆ.ಡಿ.ಎಸ್. ಪಾರ್ಟಿಯ ಪರವಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಈ ಪಾರ್ಟಿಯಿಂದ ಒಬ್ಬರು ಮತ್ತು ಆ ಪಾರ್ಟಿಯಿಂದ ಒಬ್ಬರು ಮಾತನಾಡಿ. ಮೂರು ಜನ ಈ ವಿಷಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

+ ಶ್ರೀ ಎ. ರಾಮದಾಸ್ (ಕೃಷ್ಣರಾಜ) :- ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಲೋಕಾಯುಕ್ತದ ಮೂಲಕ ಬಹಳಷ್ಟು ಪ್ರಕರಣಗಳು ಹೊರಗಡೆ ಬರುತ್ತಿವೆ. ನಮ್ಮ ಸರ್ಕಾರ ಇದ್ದರೂ ಕೂಡ ವಿಚಾರಣೆ ಮಾಡಿ, ಎನ್ನತಕ್ಕಂಥ ವಿಷಯವನ್ನು ನಾವು ಹೇಳುತ್ತೇವೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ನಾನು ಇದನ್ನು ಸ್ವಾಗತ ಮಾಡುತ್ತೇನೆ. ಇದು ಕೇವಲ 300 ಅಥವಾ 200 ಅಥವಾ 100 ಕೋಟಿ ರೂಪಾಯಿಗಳ ಪ್ರಶ್ನೆಯಲ್ಲ. ಪ್ರಮುಖವಾಗಿ ಈ ಒಂದು ವ್ಯವಸ್ಥೆ ಬಗ್ಗೆ ಈ ಸದನದಲ್ಲಿ ಹತ್ತಾರು ಬಾರಿ ಚರ್ಚೆ ಆಗಿರತಕ್ಕಂಥ ವಿಚಾರಗಳ ಬಗ್ಗೆ ಪ್ರಮುಖವಾಗಿ ಎರಡು-ಮೂರು ಅಂಶಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಅವರು ಕೊಟ್ಟಿರತಕ್ಕಂಥ ವರದಿಯನ್ನು ನಾವೆಲ್ಲರೂ ಕೂಡ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಮತ್ತು

ಪತ್ರಿಕೆಗಳಲ್ಲಿ ನೋಡಿದ್ದೇವೆ. ಇಲ್ಲಿ 300 ಕೋಟಿ ರೂಪಾಯಿಗಳಷ್ಟು ಅವ್ಯವಹಾರ ನಡೆದಿದೆ. ಇದು ಕೇವಲ ಒಂದೆರಡು ವರ್ಷಗಳಿಂದ ಆಗಿರತಕ್ಕಂಥದಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೆ, ಪತ್ರಿಕೆಯಲ್ಲಿ ಬಂದಿರತಕ್ಕಂಥ ವಿಷಯವನ್ನು ಸದನದ ಮುಂದೆ ಓದುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ನಾನೇನೂ ಸೇರಿಸಿಕೊಂಡು ಹೇಳುತ್ತಿಲ್ಲ. ಇದರಲ್ಲಿ ಏನಿದೆ ಎಂದರೆ, "ಅನೇಕ ಔಷಧಿಗಳ ಹೆಸರಿನಲ್ಲಿ ಇರುವ ನಕಲಿ ಔಷಧಿಗಳನ್ನು ಖರೀದಿ ಮಾಡಿ ಈಗಾಗಲೇ ರಾಜ್ಯದ ಎಲ್ಲಾ ಆಸ್ಪತ್ರೆಗಳಿಗೆ ವಿತರಿಸಲಾಗಿದೆ. ಇದನ್ನು ರಾಜ್ಯದ ಕೋಟ್ಯಾಂತರ ಜನರು ಬಳಸಿದ್ದಾರೆ. ಈ ಔಷಧಿಗಳ ಒಟ್ಟು ಮೊತ್ತ ಸುಮಾರು 300 ಕೋಟಿ ರೂಪಾಯಿಗಳಾಗುತ್ತದೆ ಎಂದು ಬಂದಿದೆ." ಆದರೆ, ನಮ್ಮ ರಾಜ್ಯ ಸರ್ಕಾರ ಕೇವಲ 100 ಕೋಟಿ ರೂಪಾಯಿಗಳಷ್ಟು ಖರೀದಿ ಮಾಡುತ್ತದೆಯಷ್ಟೆ.

ಶ್ರೀ ಎ. ರಾಮದಾಸ್ :- ಈ ವಿಷಯದ ಬಗ್ಗೆಯೂ ಕೂಡ ನಾನು ಮಾತನಾಡುತ್ತೇನೆ. ಇದಕ್ಕೆ ನಿಮ್ಮ ಬಜೆಟ್ ಅಲೋಕೇಶನ್ ಎಷ್ಟಿದೆ ಎನ್ನತಕ್ಕಂಥದ್ದು ಗೊತ್ತಿದೆ. ನಾವು ಇಲ್ಲಿ ಪ್ರತಿ ವರ್ಷ ಬಜೆಟ್‌ನ್ನು ಪಾಸ್ ಮಾಡಿಕೊಡುತ್ತೇವೆ. ವಿಶೇಷವಾದ ಜೆ.ಎಂ.ಎಸ್.ಗೆ ಔಷಧಿ ಖರೀದಿಗಾಗಿ ಎಷ್ಟು ಹಣ ಕೊಟ್ಟಿದ್ದೀರಿ ಎನ್ನತಕ್ಕಂಥದ್ದನ್ನು ನೋಡಬೇಕಾಗುತ್ತದೆ. ಕಳೆದ ಸಾರಿ ಇದಕ್ಕಾಗಿ 189 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಈ ಸಾರಿ ಎಷ್ಟು ಕೊಟ್ಟಿದ್ದೀರಿ ಎನ್ನತಕ್ಕಂಥ ವಿಚಾರ ಇದೆ. ಇವತ್ತಿನ ದಿವಸ ಜಿ.ಎಂ.ಎಸ್. ಈಗಾಗಲೇ ಎಷ್ಟು ಖರೀದಿ ಮಾಡಿದ್ದಾರೆ ಎನ್ನತಕ್ಕಂಥ ವಿಷಯ ಜನಸಾಮಾನ್ಯರಿಗೆ ತಿಳಿದಿರುವುದಿಲ್ಲ. ಇವತ್ತಿನದಿವಸ ಒಂದು ಪ್ರಮುಖವಾದ ಅಂಶವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ 300 ಕೋಟಿ ರೂಪಾಯಿ ಅವ್ಯವಹಾರ ಆಗಿದೆ ಎನ್ನತಕ್ಕಂಥದ್ದು ಒಂದು ಭಾಗ. ಆದರೆ ರಾಜ್ಯದ ಎಲ್ಲಾ ಕಡೆ ಸ್ಪೂರಿಯಸ್ ಡ್ರಗ್ಸ್ ಮಾರಾಟ ಮಾಡತಕ್ಕಂಥ ಜಾಲ ಇದರಲ್ಲಿ ಇದೆ ಎನ್ನತಕ್ಕಂಥದ್ದು ಆಘಾತ ತರತಕ್ಕಂಥ ವಿಚಾರವಾಗಿದೆ. ನಮಗೆಲ್ಲರಿಗೂ ಕೂಡ ಇವತ್ತು ಆಘಾತವಾಗಿದೆ. ಯಾವುದು ಓರಿಜಿನಲ್ ಯಾವುದು ನಕಲಿ ಎಂದು ಪ್ರತಿಯೊಂದರ ಮೇಲೂ ಕೂಡ ಎಂಆರ್‌ಪಿ ಎಂದು ಇದೆ, ಇದರಲ್ಲಿ ಪ್ರಮುಖವಾದ ಅಂಶಗಳು ಅಡಗಿದೆ. ಹಾಗಾದರೆ ತೆಗೆದುಕೊಂಡಿರುವಂಥ ವ್ಯಕ್ತಿಗಳಿಗೆ ಸೈಡ್ ಎಫೆಕ್ಟ್ ಆಗಿ, ಅವರು ಎಷ್ಟು ಸಫರ್ ಪಡುತ್ತಿದ್ದಾರೆ, ಅದು ಔಷಧಿಯ ಸೇವನೆಯೇ ಡಯಾಗ್ನಾಜ್ ಮಾಡಿರುವುದು ಸರಿ ಇದೆಯೇ? ಇವೆಲ್ಲ ಪ್ರಶ್ನೆಗಳು ನಮ್ಮೆಲ್ಲರ ಮಧ್ಯದಲ್ಲಿ ಕಾಡುವಂಥ ಪ್ರಶ್ನೆಗಳಾಗಿವೆ. 300 ಕೋಟಿ ರೂಪಾಯಿಗಳು ಅಂದರೆ ಬೇರೆ ಬೇರೆ, ಜಿಲ್ಲಾಪರಿಷತ್ ಇರಬಹುದು. ಎಲ್ಲವೂ ಸೇರಿ, 300 ಕೋಟಿ ರೂಪಾಯಿಗಳು ಏನು ಸಿಕ್ಕಿದೆ, ಅದಕ್ಕೆ ಏನು ಕಾರಣವೆಂದರೆ 259 ಕಂಪನಿಗಳಿಂದ ಏನು ಸ್ಯಾಂಪಲ್ಸ್ ತೆಗೆದುಕೊಂಡರು, ಬೇರೆ ಬೇರೆ ಬ್ಯಾಚಿಸ್‌ನಲ್ಲಿ ಬರುತ್ತದೆ. ಅದನ್ನು ಲ್ಯಾಬ್‌ಗೆ ಕಳುಹಿಸಿಕೊಡುತ್ತಾರೆ. ಲ್ಯಾಬ್‌ನಲ್ಲಿ ಟೆಸ್ಟಿಂಗ್ ಆದ ನಂತರದಲ್ಲಿ ಅದು ಸ್ಪೂರಿಯಸ್ ಅಥವಾ ಇಲ್ಲವೇ ಅದು ಸರಿಯಾಗಿದೆಯಾ ಎನ್ನುವುದೆಲ್ಲವೂ ಬಂದ ನಂತರ ಆ ಬ್ಯಾಚಿಸ್‌ನ್ನು ತೆಗೆದು ಕೊಳ್ಳುವಂಥ ವ್ಯವಸ್ಥೆಗಳು ಇವೆ. ನನ್ನ ಪ್ರಶ್ನೆ ಇರುವುದೇನೆಂದರೆ, 259 ಏನು ಪ್ರಕರಣಗಳು ಇವೆ, ಅದು ಯಾವ ದಿವಸದಿಂದ ಎಲ್ಲಿಯವರೆಗೆ ಅದು ಇತ್ತು. ಯಾವ ದಿವಸ ಲ್ಯಾಬ್‌ನಲ್ಲಿ ಟೆಸ್ಟ್ ಆಗಿತ್ತು. ಯಾವ ಕಂಪನಿಯಲ್ಲಿ ಆಗಿತ್ತು. ಆ ಕಂಪನಿಯನ್ನು ನೀವು ಬ್ಲಾಕ್‌ಲಿಸ್ಟ್‌ನಲ್ಲಿ ಇಟ್ಟಿದ್ದೀರಾ ಎನ್ನುವಂಥ ಪ್ರಶ್ನೆಯಾಗಿದೆ.

ಅಧ್ಯಕ್ಷರು :- ನಾನು ಅಡ್ಮಿಟ್ ಮಾಡಿದ ಮೇಲೆ ಅದರ ಡಿಟೇಲ್ಸ್ ಬಗ್ಗೆ ನೀವು ಆಮೇಲೆ ಮಾತನಾಡಿ. ಮಾನ್ಯ ಸಿಂಧ್ಯರವರು ಹೇಳಿದರು, ಆ ಡ್ರಗ್ಸ್‌ಗಳು ಈಗ ಎಲ್ಲಿವೆ ಅವುಗಳನ್ನು ವಾಪಸ್ಸು ತರಿಸಿಕೊಳ್ಳಿ.

ಶ್ರೀ ಎ. ರಾಮದಾಸ್ :- ಇದು ವಿಶೇಷವಾಗಿ 1997ರಲ್ಲಿ ಸೆಂಟ್ರಲ್ ಪ್ರೈಸ್ ಕಂಟ್ರೋಲ್ ಇದು ಏತಕ್ಕೆ ಬಂತು ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಅಧ್ಯಕ್ಷರೆ, ನೀವು ಸ್ವಲ್ಪ ಅಲೌ ಮಾಡಬೇಕು ಪ್ಲೀಸ್. ಯಾರ ಮೇಲೆ ಆಪಾದನೆ ಮಾಡುವ ಪ್ರಶ್ನೆ ಅಲ್ಲ. ಪ್ರಮುಖವಾದ ಅಂಶಗಳನ್ನು ನಾನು ಇವತ್ತು ಹೇಳುತ್ತಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳ ಮೇಲೆ ನಮಗೆ ಅಪಾರವಾದಂಥ ಗೌರವ ಇದೆ. ಆ ದೃಷ್ಟಿಯಲ್ಲಿ ಏನು ವಿಚಾರ ಇದೆ ಎನ್ನುವುದು ಹೇಳುವುದಕ್ಕೆ ನೀವು ಅವಕಾಶವನ್ನು ಮಾಡಿಕೊಡಬೇಕು. 1997ರಲ್ಲಿ ಕೇಂದ್ರ ಸರ್ಕಾರ ಪ್ರೈಸ್ ಕಂಟ್ರೋಲ್ ಪಾಲಿಸಿಯನ್ನು ಜಾರಿಗೆ ತಂದರು. ಅದರ ಜೊತೆಯಲ್ಲಿ ಯಾವುದು ಸ್ಪೂರಿಯಸ್ ಬರಬಾರದೆಂದು ಹೇಳಿ, ಕೇಂದ್ರ ಸರ್ಕಾರದವರು ಪ್ಯಾಕೇಜ್ ಆ್ಯಕ್ಟ್‌ನ್ನು ತಂದಿದ್ದಾರೆ. ಯಾವುದಾದರೂ ಕಂಪನಿ, ಯಾವುದಾದರೂ ಅಂಗಡಿಯ ಮಾಲೀಕ ಸ್ಪೂರಿಯಸ್ ಡ್ರಗ್ಸ್ ಅಲ್ಲಿ ಜಿಲ್ಲೆಯ ಪ್ರಶ್ನೆ ಇದೆ, ಬೆಲೆಗಿಂತ ಹೆಚ್ಚಿಗೆ ಏನಾದರೂ ಕೊಟ್ಟರೆ ಪನಿಷ್‌ಮೆಂಟ್ ಜೊತೆಗೆ ಅವನಿಗೆ ಎರಡು ತಿಂಗಳು ಜೈಲು ಶಿಕ್ಷೆ ಇದೆ.

ಶ್ರೀ **ಕಾಗೋಡು ತಿಮ್ಮಪ್ಪ** :- ಮಾನ್ಯ ಅಧ್ಯಕ್ಷರೆ, ಕಾರ್ಯದರ್ಶಿಗಳನ್ನು ಲೋಕಯುಕ್ತಕ್ಕೆ ಲೇಟರ್ ಕೊಡುವುದಕ್ಕೋಸ್ಕರ ತಯಾರು ಮಾಡುವುದಕ್ಕೆ ಕಳುಹಿಸಿದ್ದೇನೆ. ಅವರ ಡ್ಯೂಟಿ ಇದೆ.

ಅಧ್ಯಕ್ಷರು :- ನೋಡಿ ಎಷ್ಟು ಕ್ವಿಕ್ ಆಗಿ ಆಕ್ಷನ್ ಮಾಡಿದ್ದಾರೆ.

ಶ್ರೀ ಆರಗ್ ಜ್ಞಾನೇಂದ್ರ :- ಎಲ್ಲವನ್ನೂ ಸರಿ ಮಾಡುವುದಕ್ಕೆ ಲೋಕಾಯುಕ್ತರೇ ಬರಬೇಕಾ? ಇವರೇ ಎಲ್ಲಾ ಇಲಾಖೆಯನ್ನು ಸರಿ ಮಾಡಬೇಕೇ.

ಅಧ್ಯಕ್ಷರು :- ಸ್ವಾಮಿ ಶ್ರೀನಿವಾಸಗೌಡರೆ, ಮಾನ್ಯ ಸಿಂಧ್ಯಾರವರು ಸಜೆಸ್ಟ್ ಮಾಡಿದರಲ್ಲಾ, ತಕ್ಷಣ ಪತ್ರವನ್ನು ಬರೆಯಿರಿ ಎಂದು ಹೇಳಿದ್ದಕ್ಕೆ ಆ್ಯಕ್ಟ್ ಮಾಡಿದ್ದಾರೆಂದು ನಾನು ಹೇಳಿದೆ ಅಷ್ಟೆ.

(ಗೊಂದಲ)

In the interest of the general public. ಮಾನ್ಯ ಸಿಂಧ್ಯಾರವರು ಪತ್ರವನ್ನು ಬರೆದು ಅವುಗಳನ್ನು ವಾಪಸ್ಸು ತರಿಸಿಕೊಳ್ಳಿ ಎಂದು ಹೇಳಿರುವುದನ್ನು That is a very good suggestion.

ಶ್ರೀ ಆರಗ ಜ್ಞಾನೇಂದ್ರ :- ಲೋಕಾಯುಕ್ತದಿಂದ ವರದಿ ತರಿಸಿಕೊಳ್ಳಲು ಪತ್ರ ಬರೆದಿರಬಹುದು.

ಅಧ್ಯಕ್ಷರು :- ಸಂತೋಷ ಆಗಬಹುದು. I have no objection.

ಶ್ರೀ ಎ. ರಾಮದಾಸ್ :- ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ 1997ರಲ್ಲಿ ಕೇಂದ್ರ ಸರ್ಕಾರ ಮೂರು ಆಕ್ಟ್‌ಗಳನ್ನು ಮಾಡಿದ ನಂತರದಲ್ಲಿ ಇಂತಹ ಸ್ಪೂರಿಯಸ್ ಡ್ರಗ್ಸ್‌ಗಳನ್ನು ಮತ್ತು 259 ಸ್ಯಾಂಪಲ್ಸ್‌ಗಳನ್ನು ಏನು ನೀವುಕೊಂಡುಕೊಂಡಿದ್ದೀರಿ ಅಲ್ಲಿ ಸ್ಪೂರಿಯಸ್ ಯಾವುದು ಬಂದಿದೆ. ಅದರ ಬಗ್ಗೆ ಕ್ರಮವನ್ನು ತೆಗೆದುಕೊಂಡು ಅಲ್ಲಿ ಎರಡು ತಿಂಗಳ ಕಾಲ ಜೈಲುವಾಸ ಎಂದು ಇದೆ. ಇದುವರೆಗೆ ಏನು ಕ್ರಮವಾಗಿದೆ ಎನ್ನುವುದರ ಬಗ್ಗೆ ಜನ ಪ್ರಶ್ನಿಸುವ ವಿಚಾರಗಳಾಗಿವೆ.

ನೀವು ಎಷ್ಟು ಕ್ವಿಕ್ ಆಗಿ ಆಕ್ಷನ್ ತೆಗೆದುಕೊಂಡಿದ್ದಾರೆಂದು ಹೇಳಿದ್ದೀರಲ್ಲಾ ನಾನು ಅವರಿಗೆ ಕಾಂಗ್ರ್ಯಾಚ್ಯುಲೇಷನ್ ಹೇಳುವ ಮೊದಲು ಒಂದು ವಿಷಯವನ್ನು ನಿಮ್ಮ ಮುಂದೆ ಕೊಡುತ್ತೇನೆ. ಇದೇ ಸದನದಲ್ಲಿ ಅಂದಾಜು ಸಮಿತಿ 1994ನೇ ಮಾರ್ಚ್ 24ನೇ ತಾರೀಖು, ಮಾನ್ಯ ರಾಜುಗೌಡರು ಈ ಒಂದು ಸಮಿತಿಗೆ ಅಧ್ಯಕ್ಷರಾಗಿರುವ ಸಮಿತಿಗೆ ಮಾನ್ಯ ಮಹದೇವ್‌ರವರೂ ಕೂಡ ಸದಸ್ಯರಿದ್ದಾರೆ. ಇದರಲ್ಲಿ ನಾವು ಹೆಚ್ಚು ವಿವರಣೆಯನ್ನು ಕೊಡುವುದಕ್ಕೆ ಹೋಗುವುದಿಲ್ಲ. ಸ್ಪೂರಿಯಸ್ ಡ್ರಗ್ಸ್ ನಾನು ಲಿಸ್ಟ್ ಕೊಡುವುದಕ್ಕೆ ಹೋಗುವುದಿಲ್ಲ. ಇದೆಲ್ಲವನ್ನೂ ಬರೆದು ರಾಜ್ಯದಲ್ಲಿ ಕಳಪೆ ಔಷಧಿಗಳು ದೊಡ್ಡ ದಾಂಧಲೆ ನಡೆಯುತ್ತಿದೆ. ಇದರ ವಿರುದ್ಧವಾಗಿ ಕ್ರಮ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ವರದಿಯನ್ನು ಕೊಟ್ಟರಲ್ಲಾ ಏನಾಯಿತು ಈ ಕ್ರಮ? ನೀವು ಹೇಳಿದಿರಲ್ಲಾ, ಅದಕ್ಕೆ ನಾನು ಹೇಳುತ್ತಿದ್ದೇನೆ ಇಲ್ಲವೆಂದರೆ ನನು ಹೇಳುತ್ತಿರಲಿಲ್ಲ. ಈಗ ಕ್ಲಿಕ್ ಆಕ್ಷನ್ ಮಾಡಿದ್ದಾರೆ, ಅದಕ್ಕೆ ನಾನು ಕಂಗ್ರ್ಯಾಚ್ಯುಲೇಶನ್ ಹೇಳುತ್ತೇನೆ. ಇದರ ಬಗ್ಗೆ ಕ್ರಮವನ್ನು ತೆಗೆದುಕೊಂಡಿದ್ದರೆ, ಇವರದೆ ಸರ್ಕಾರ ಇದ್ದ ಸಂದರ್ಭದಲ್ಲಿ ಆಗಿರುವಂಥದ್ದು ಅದು, ಆ ಸಮಯದಲ್ಲಿಯೂ ಕೂಡ ಕ್ರಮವನ್ನು ತೆಗೆದುಕೊಂಡಿದ್ದರೆ, ಇವತ್ತಿನ ದಿವಸ ಈ ಪರಿಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ ಎನ್ನುವ ಅಂಶಕ್ಕಾಗಿ ಈ ಮಾತನ್ನು ಹೇಳುತ್ತಾ, ಈ ರಿಪೋರ್ಟ್ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿರುತ್ತೀರಿ. ಇನ್ನೊಂದು ಮಾತನ್ನು ಹೇಳಿ ನಾನು ಮುಗಿಸುತ್ತೇನೆ. ಅಧ್ಯಕ್ಷರೆ ಇವತ್ತು ತಮ್ಮ ಕ್ಷೇತ್ರದಲ್ಲಿಯೂ ತಾವು ಹೋದಂಥ ಸಂದರ್ಭದಲ್ಲಿ ಒಂದು ಸಲ ಯಾರಾದರೂ ಒಬ್ಬ ಮೆಡಿಕಲ್ ಸ್ಟೋರ್ಸ್‌ನವನನ್ನು ತಾವು ಕರೆದು ಕೇಳಿ. ತಾವು ಆತ್ಮೀಯರಾದವರನ್ನು ಕರೆದು ಕೇಳಿ, ಒಂದು ವರ್ಷಕ್ಕೆ ಎಷ್ಟು ಬಾರಿ ಡ್ರಗ್ ಕಂಟ್ರೋಲ್ ಡಿಮಾರ್ಪ್‌ಮೆಂಟಿಗೆ ನೀವು ಮಾಮೂಲಿಯನ್ನು ಕೊಡುತ್ತೀರಿ ಎಂದು ಕೇಳಿ,

ಅಧ್ಯಕ್ಷರು :- ನೋಡಿ ಇವೆಲ್ಲವನ್ನೂ ನಾನು ಕೇಳುವುದಕ್ಕಾಗುತ್ತದೆಯೇ?

ಶ್ರೀ ರಾಮದಾಸ್ :- ಅಲ್ಲಾ ಅಧ್ಯಕ್ಷರೆ, ಅವರು ಮಿನಿಸ್ಟರ್ ಮೇಲೆ ಆಪಾದನೆಯನ್ನು ಮಾಡಿದರು ಅವರು ಹೇಗೆ ಆಪಾದನೆ ಮಾಡಿಬಿಟ್ಟರು. ನಿನ್ನೆ ದಿವಸ ಟಿವಿಯಲ್ಲಿ ನೋಡಿ ನನಗೆ ಬಹಳಷ್ಟು ನೋವಾಯಿತು. ರಾಜಕಾರಣಿಯಾದಂಥವರ ಮೇಲೆ ಯಾರಾದರೂ ಕೂಡ ಒಂದು ವಿಚಾರವನ್ನು ಹೇಳಬೇಕಾದರೆ ಡೆಪ್ಯೂಟಿ ಡ್ರಗ್ ಕಂಟ್ರೋಲರ್ ನೇರವಾಗಿ ಮಂತ್ರಿಗಳ ಹೆಸರನ್ನು ಹೇಳುವಂಥವರು ಇವತ್ತು ಅದನ್ನು ಸಾಬೀತು ಮಾಡಬೇಕು. ಇಲ್ಲದಿದ್ದರೆ ಅವರ ಮೇಲೆ ಕ್ರಮವನ್ನು ಕೈಗೊಳ್ಳಬೇಕು. ನಾನು ಏಕೆ ಹೇಳುತ್ತಿದ್ದೇನೆಂದರೆ, ಒಂದು ರಿಟೈಲ್ ಪಾಯಿಂಟ್‌ನಲ್ಲಿ 6 ತಿಂಗಳಿಗೆ ಒಂದು ಸಲ, ಒಂದು ಸಾವಿರ ರೂಪಾಯಿಗಳಂತೆ ಮಾಮೂಲಿಯನ್ನು ಕಲೆಕ್ಟ್ ಮಾಡುವಂಥ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿ ಗೊತ್ತಿದೆ ಎಂದ ಮೇಲೆ ಕ್ರಮವನ್ನು ಕೈಗೊಳ್ಳಬೇಕು ತಾನೇ? ಏಕೆ ನಾನು ಹೇಳುತ್ತಿದ್ದೇನೆ ಗೊತ್ತೇ ಆ ಸ್ಪೂರಿಯಸ್ ಡ್ರಗ್ಸ್ ಅಲ್ಲಿ ಏಕೆ ಉಳಿದಿದೆ ಎಂದರೆ, ಮಾಮೂಲಿ ವಸೂಲಿಗೋಸ್ಕರವಾಗಿ ಉಳಿದಿದೆ.

ಅಧ್ಯಕ್ಷರು :- ನಿಲುವಳಿ ಸೂಚನೆಯನ್ನು ಅಡ್ಮಿಟ್ ಮಾಡಿದ ಮೇಲೆ ನೀವು ಅವೆಲ್ಲವನ್ನು ಹೇಳಿ. I have no objection. It is only a preliminary submission.

ಶ್ರೀ ಕೆ.ಎಂ. ಕೃಷ್ಣಮೂರ್ತಿ :- ಅದು ಅಡ್ಮಿಟ್ ಆದ ಮೇಲೆ ಇಲ್ಲಿ ಎಲ್ಲಾ ವಿಷಯವನ್ನು ರಾಮದಾಸ್ ರವರು ಹೇಳಲಿ, ಎಲ್ಲರಿಗೂ ಅವಕಾಶವನ್ನು ಮಾಡಿಕೊಡಲಿ. ಪ್ರಿಲಿಮಿನರಿ ಸಬ್‌ಮಿಷನ್ ಬಗ್ಗೆ ಮಾತನಾಡಲಿ, ನಂತರ ಏನು ಉಳಿಯುತ್ತದೆ ಹೇಳುವುದಕ್ಕೆ?

ಶ್ರೀ ಎ. **ರಾಮದಾಸ್** :- ಈ ರಾಜ್ಯದಲ್ಲಿರತಕ್ಕಂಥ 16,600 ಮೆಡಿಕಲ್ ಸ್ಟೋರ್ಸ್‌ಗಳ ರಿಟೇಲ್ ಪಾಯಿಂಟ್ ಇದೆ, ಒಂದು ವರ್ಷಕ್ಕೆ ಎರಡು ಸಾವಿರ ರೂಪಾಯಿಗಳಂತೆ ವ್ಯವಹಾರ ಹೋಗಬೇಕಾದರೆ... ವ್ಯವಸ್ಥೆಗಳು ಏನಾಗಬೇಕು.

ಶ್ರೀ **ಕಾಗೋಡು ತಿಮ್ಮಪ್ಪ** :- ಮಾನ್ಯ ಅಧ್ಯಕ್ಷರೆ, ನಿಮ್ಮ ಹತ್ತಿರ ಸಾಕ್ಷಾಧಾರಗಳು ಇದ್ದರೆ, ನೀವು ಹೇಳುವಂಥ ಜನರನ್ನು ನೇಮಕ ಮಾಡಿ ಎನ್‌ಕ್ವಾಯರಿಯನ್ನು ಕಂಡೆಕ್ಟ್ ಮಾಡುತ್ತೇನೆ, ತಾವು ಹೇಳಿರುವ ವಿಚಾರಗಳು ಸಾಬೀತಾಗಬೇಕು.

ಶ್ರೀ ಎ. **ರಾಮದಾಸ್** :- ನೀವು ಜ್ಯುಡಿಷಿಯಲ್ ಎನ್‌ಕ್ವಾಯರಿ ಮಾಡಿಸಿ. I am very proud

ಶ್ರೀ ಜಗದೀಶ್ ಶೆಟ್ಟರ್ :- ನೀವು ಜ್ಯುಡಿಷಿಯಲ್ ಎನ್‌ಕ್ವಾಯರಿಗೆ ಒಪ್ಪಿಕೊಳ್ಳಿ.

(ಗೊಂದಲ)

ಶ್ರೀ **ಕಾಗೋಡು ತಿಮ್ಮಪ್ಪ** :- ಅವರು ಹೇಳುವ ಅಲಿಗೇಷನ್‌ಗೆ ನಾನು ಹೇಳಿದ್ದು. ಪ್ರತಿಯೊಂದು ಷಾಪೂ ಮಾಮೂಲಿ ಕೊಡುತ್ತಾರೆಂದು ಅಲಿಗೇಷನ್ ಮಾಡಿದ್ದಾರಲ್ಲಾ ಅದನ್ನು ಬರೆದು ಕೊಡಲಿ.

ಶ್ರೀ ಎ. **ರಾಮದಾಸ್** :- ಎಸ್, ನಾನು ಮಾನ್ಯ ಮಂತ್ರಿಗಳು ಹೇಳಿದ್ದನ್ನು ಖಂಡಿತವಾಗಿ ಸ್ವಾಗತ ಮಾಡುತ್ತೇನೆ.

ಅಧ್ಯಕ್ಷರು :- ನೀವು ಬರೆದು ಕಳುಹಿಸಿ.

(ಗೊಂದಲ)

ಕಾಗೋಡು ತಿಮ್ಮಪ್ಪ :- ಪ್ರಶ್ನೆಯಲ್ಲ, ಇವತ್ತು ನಡೆದು ಹೋಗಲಿ.

ಶ್ರೀ ಎ. **ರಾಮದಾಸ್** :- ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಮಂತ್ರಿಗಳ ಹೆಸರುಗಳನ್ನು ಹೇಳುವಂಥದ್ದು ಸೂಕ್ತವಲ್ಲ. ಮಾನ್ಯ ಮಂತ್ರಿಗಳ ಹೆಸರನ್ನು ಹೇಳಿರುವ ಅಧಿಕಾರಿಗಳು ಅದನ್ನು ಪ್ರೂವ್ ಮಾಡಬೇಕು.

ಅಧ್ಯಕ್ಷರು :- ಒಂದೊಂದು ಪಾರ್ಟಿಯಿಂದ ಒಬ್ಬೊಬ್ಬರನ್ನು ನಾನು ಅಲೌ ಮಾಡಿದರೆ, ನೀವೊಬ್ಬರೇ ಎಲ್ಲವನ್ನೂ ಡಿಟೇಲ್ ಆಗಿ ಹೇಳಿಕೊಂಡು ಹೊರಟರೆ, ಮಾನ್ಯ ಭೈರೇಗೌಡರೆ, ತಾವು ಕಮೆನ್ಸ್ ಮಾಡಿ. ಅವರು ನಿಲ್ಲಿಸುವುದಿಲ್ಲ.

Sri Kagodu Thimmappa :- We dont know, let them submit the report, we will see.

(ಗೊಂದಲ)

Mr. Speaker :- It is only a prelimary submition Don't go with the details.

ಶ್ರೀ ಎ. **ರಾಮದಾಸ್** :- ನೀವು ಜ್ಯುಡಿಷಿಯಲ್ ಎನ್‌ಕ್ವಾಯರಿ ಮಾಡಿಸಿ, ಸತ್ಯಾಂಶ ಎಲ್ಲವೂ ಹೊರಗಡೆ ಬರುತ್ತದೆ. ಆ ವಿಷಯಕ್ಕೋಸ್ಕರವಾಗಿ ನಾವು ಸ್ವಾಗತ ಮಾಡುತ್ತೇವೆ. ಇವತ್ತು ಯಾರ ಹೆಸರನ್ನು ಹೇಳುವಂಥದ್ದು ಅಲ್ಲ. ಅದು ಸೂಕ್ತವು ಅಲ್ಲ, ನೀವು ಜ್ಯುಡಿಷಿಯಲ್ ಎನ್‌ಕ್ವಾಯರಿ ಮಾಡಿಸಿ.

ಶ್ರೀ ಕಾಗೋಡು ತಿಮ್ಮಪ್ಪ :- ಕೆಲವೊಂದು ವಿಚಾರಗಳನ್ನು ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ. I cannot disclose.

† ಶ್ರೀ ಸಿ. ಭೈರೇಗೌಡ (ವೇಮಗಲ್) :- ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನಾನು ಎರಡು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಮೊದಲನೆಯದು ಕೆಲವು ಮಂತ್ರಿಗಳ ಹೆಸರುಗಳನ್ನು ಒಬ್ಬ ಅಧಿಕಾರಿಯವರು ಹೇಳಿರತಕ್ಕಂಥದ್ದು ಹಾಗೂ ನಾನು ವರ್ಗಾವಣೆಯ ಸಂಬಂಧದಲ್ಲಿ ಹಣವನ್ನು ಕೊಟ್ಟು ಬಂದಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಒಂದು-ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟು ಬಂದಿದ್ದೇವೆ, ಮಾಮೂಲಿ ಕೊಡಬೇಕಾಗಿದೆ, ಎನ್ನತಕ್ಕಂಥದ್ದು ಇದೊಂದು ಬಹಳ ಗಂಭೀರವಾದಂಥ ವಿಚಾರವಾಗಿದೆ. ಒಂದು ವ್ಯಥೆಯಾಗತಕ್ಕಂಥದ್ದು ಏನೆಂದರೆ ರಾಜಕೀಯದಲ್ಲಿ ಇತ್ತೀಚಿನ ಕೆಲವು ವರ್ಷಗಳಲ್ಲಿ ಮಾನಮರ್ಯಾದೆಯನ್ನು ಉಳಿಸಿಕೊಂಡು ಬದುಕುತ್ತಿರುವವರು ಬಹಳ ಅಪರೂಪ. ಆ ಅಪರೂಪದ ವ್ಯಕ್ತಿಗಳಲ್ಲಿ ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ, ಡಾ|| ಮಾಲಕರೆಡ್ಡಿಯವರು ಒಬ್ಬರು, ಇಂತಹವರ ಮೇಲೆ ಈ ರೀತಿಯಾದಂಥ ಗಂಭೀರವಾದಂಥ ಆರೋಪಗಳು ಬಂದರೆ, ಆ ಆರೋಪದ ಹಿನ್ನೆಲೆ ಏನು? ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಆ ಅಧಿಕಾರಿ ತನ್ನ ಭ್ರಷ್ಟತೆಯನ್ನು ಮುಚ್ಚಿ ಹಾಕಲು ತಾನು ನಿರಪರಾಧಿ ಎಂದು ಇನ್ನೊಬ್ಬರ ಕಡೆ ಬೆರಳಚ್ಚು ತೋರಿಸಿ ತಾನು ಮಾಡಿರುವ ತಪ್ಪನ್ನು ಇನ್ನೊಬ್ಬರಿಗೆ ಹಾಕಿ, ಕೋತಿ ತಾನು ತಿಂದು ಮೇಕೆಯ ಮೊಖಕ್ಕೆ ಒರೆಸುವಂಥ ವ್ಯವಹಾರ ಇದರಲ್ಲಿ ಏನಾದರೂ ನಡೆದಿದೆ ಎನ್ನತಕ್ಕಂಥದ್ದು ಈ ಹಿನ್ನೆಲೆಯ ಬಗ್ಗೆ ಕೂಡನೂ ತನಿಖೆಯಾಗಬೇಕಾಗಿರುವಂಥದ್ದು ಬಹಳ ಅವಶ್ಯಕತೆ ಇದೆ. ಇವತ್ತು ಅಪರೂಪ ಆಗತಕ್ಕಂಥ ಸಂದರ್ಭದಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ಉಳಿದುಕೊಂಡಿರುವಾಗ ಅವರನ್ನೂ ಕೂಡ ನಿರ್ನಾಮ ಮಾಡತಕ್ಕಂಥ ಪ್ರಯತ್ನಗಳು ಆಗುವುದಾದರೆ, ಅದಕ್ಕೆ ನಾನು ಈ ಕಡೆ ಕುಳಿತಿರಬಹುದು ಅವರು ಆ ಕಡೆ ಕುಳಿತಿರಬಹುದು. ಅದಕ್ಕೆ ಯಾವ ಸಂಬಂಧವಿಲ್ಲ. ನಾವು ಎಲ್ಲಿ ಕುಳಿತಿದ್ದೇವೆ ಎನ್ನುವಂಥ ಸಂಬಂಧ ಇದೆ.

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಭೈರೇಗೌಡರ ಹೇಳಿದಮಾತಿಗೆ ಧ್ವನಿಗೂಡಿಸಿ...

Mr. Speaker :- This is only a preliminary ನಿಮ್ಮ ನಾಯಕರು ಮಾತನಾಡುತ್ತಿದ್ದಾರೆ. ನಾನು ನಿಮ್ಮನ್ನು ಅಲೌ ಮಾಡಿದ ಮೇಲೆ ನೀವು ಮಾತನಾಡಿ.

ಶ್ರೀ ಬಿ.ಎನ್. ಬಚ್ಚೇಗೌಡ :- ನಾನು ಹೇಳುವಂಥಾದ್ದು ಮಾನ್ಯ ಲೋಕಾಯುಕ್ತರು ಅವರ ವಿಚಾರಣೆಯಲ್ಲಿ ಹೇಳಲಿ, ಆದರೆ ಅವರಿಗೆ ಅಸಿಸ್ಟ್ ಮಾಡುವಂಥ ಮನುಷ್ಯನಿಗೆ ಮಾನ್ಯ ಮಂತ್ರಿಗಳ ಹೆಸರನ್ನು ಹೇಳುವುದಕ್ಕೆ ಯಾವ ಪವರ್ ಇದೆ? ಇದನ್ನು ನಾವು ಟಿವಿ ಮತ್ತು ಪತ್ರಿಕೆಗಳಲ್ಲಿ ನೋಡಿದ್ದೇವೆ. ನಾವು ಯಾರಾದರೊಬ್ಬರನ್ನು ಪ್ರೈವೇಟ್ ಪರ್ಸ್‌ನ್ ಆಗಿ ನೇಮಕ ಮಾಡಿರುತ್ತೇವೆ, ಅವರು ಇದನೆಲ್ಲಾ ಹೇಳುವುದಾದರೆ, ಅದರ ಬಗ್ಗೆ ನಾನು ಪ್ರಶ್ನೆಯನ್ನು ಮಾಡುತ್ತೇನೆ. ಮಾನ್ಯ ಭೈರೇಗೌಡರಿಗೆ ಸಪೋರ್ಟ್ ಆಗಿ ಇದು ಹೇಳುತ್ತೇನೆ. ಆ ಮಾತನ್ನು ಲೋಕಾಯುಕ್ತರವರು ಹೇಳಿದ್ದರೆ ಅದನ್ನು ಒಪ್ಪಿಕೊಳ್ಳೋಣ. ಹೌದು, ಅವರಿಗೆ ಅಧಿಕಾರವಿದೆ. ಅವರು ವರದಿಯನ್ನು ಕೊಡಲಿ ಆದರೆ ಸರ್ಕಾರ ನೇಮಕ ಮಾಡಿರುವಂತಹ to assist Lokayuktha ಎಂದರೆ ಅವರು ಹೇಳುವಂಥದ್ದರಲ್ಲಿ ಅವರಿಗೆ ಹೇಳುವುದಕ್ಕೆ ಅಧಿಕಾರವಿದೆಯೇ? ಮಾನ್ಯ ಸಚಿವರುಗಳಾದ

ಶ್ರೀ ಕಾಗೋಡುತಿಮ್ಮಪ್ಪ ಹಾಗೂ ಶ್ರೀ ಎ.ಬಿ. ಮಾಲಕರೆಡ್ಡಿಯವರು ಇದ್ದಾರೆ, ಹಿಂದೆ ಒಬ್ಬ ಸಚಿವ ಇದ್ದಾರೆ, ಇದೇನೂ ತೇಜೋವಧೆ ಮಾಡುವ ವ್ಯವಸ್ಥೆಯೇ? ಇದನ್ನು ನಾನು ಹೇಳುತ್ತಿರುವುದು.

ಶ್ರೀ ಎ.ಬಿ. **ಪಾಟೀಲ್** :- ಡಾ|| ಸುದರ್ಶನ್ ದೂರದರ್ಶನದಲ್ಲಿ ಏನು ಬಂದಿದೆ ಎಂದರೆ ಖಾಸಗಿ ವ್ಯಕ್ತಿಯನ್ನು ಸರ್ಕಾರ ಅಪಾಯಿಂಟ್‌ಮೆಂಟ್ ಮಾಡಿದೆ, ಇವೆಲ್ಲವನ್ನೂ ಹೇಳುವುದಕ್ಕೆ ಅವರಿಗೆ ಅಧಿಕಾರವನ್ನು ಕೊಟ್ಟಿದ್ದೀರಾ? ಅವರು ಡಾ|| ಮಾಲಕರೆಡ್ಡಿ, ಶ್ರೀ ಮಹದೇವಪ್ಪ, ಹಾಲಿ ಮಂತ್ರಿಗಳ ಹೆಸರುಗಳನ್ನು ಹೇಳುತ್ತಾರೆ. ಹಾಗೆ ಹೇಳುವುದಕ್ಕೆ ಅವರಿಗೆ ಅಧಿಕಾರವಿದೆಯೇ? ಇದರ ಬಗ್ಗೆ ಲೋಕಾಯುಕ್ತರು ಹೇಳಲಿ ಅವರ ಬಗ್ಗೆ ಚರ್ಚೆ ಮಾಡುವುದು ಅದು ಬೇರೆ ವಿಷಯ. ಡಾ|| ಸುದರ್ಶನ್‌ರವರು ಯಾರು ಅವರು?

ಶ್ರೀ ಬಿ.ಎನ್. **ಬಚ್ಚೇಗೌಡ** :- ವರದಿ ಕೊಡಲಿ. ವರದಿ ಕೊಡುವುದಕ್ಕೆ ಮೊದಲೇ ಎಲ್ಲವನ್ನೂ ಹೇಳಿದರೆ ಹೇಗೆ?

ಶ್ರೀ ಎ.ಬಿ. **ಪಾಟೀಲ್** :- ಅವರು ಸರ್ಕಾರದ ವಿರುದ್ಧವೇ ಹೇಳುತ್ತಿದ್ದಾರೆ. ಮಂತ್ರಿಗಳೇ ನೀವೇ ಅವರನ್ನು ಅಪಾಯಿಂಟ್‌ಮೆಂಟ್ ಮಾಡಿದ್ದೀರಿ, ಅವರು ನಿಮ್ಮ ವಿರುದ್ಧವೇ ಅವರುಗಳು ಹೇಳಿಕೆಯನ್ನು ಹೇಳುತ್ತಿದ್ದಾರೆ ಅವರಿಗೆ ಅಧಿಕಾರವಿದೆಯೇ? ತಕ್ಷಣ ಅದರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರೆಂಬ ಬಗ್ಗೆ ಸರ್ಕಾರ ಹೇಳಬೇಕು. ಈ ವಿಷಯದ ಬಗ್ಗೆ ನೇರವಾಗಿ ಇಲ್ಲಿ ಚರ್ಚೆಯಾಗಬೇಕು.

ಶ್ರೀ ಎಸ್.ಎಸ್. **ಪಾಟೀಲ್** :- ಮಾನ್ಯ ಅಧ್ಯಕ್ಷರೆ, ವ್ಯವಸ್ಥಿತವಾಗಿ ಡಾ|| ಮಾಲ ಕರೆಡ್ಡಿಯವರ ಮೇಲೆ ಪಿತೂರಿ ನಡೆದಿದೆ. ಪ್ರಾಮಾಣಿಕವಾದ ರಾಜಕಾರಣಿಗಳು ಬದುಕುವುದಕ್ಕಾಗುವುದಿಲ್ಲ. ಇದರ ಬಗ್ಗೆ ನಾವೇನಾದರೂ ಸಡಿಲ ಬಿಟ್ಟರೆ, ಪ್ರಾಮಾಣಿಕವಾದ ರಾಜಕಾರಣಿಯನ್ನು ಉಳಿಸುವುದಕ್ಕಾಗುವುದಿಲ್ಲ.

ಶ್ರೀ **ಬೆಲ್ಲದ್ ಚಂದ್ರಕಾಂತ್ ಗುರಪ್ಪ** :- ಕರ್ನಾಟಕ ರಾಜ್ಯದಲ್ಲಿ ಈ ಮನೆಗೊಂದು ಇತಿಹಾಸವಿದೆ. ಪ್ರಾಮಾಣಿಕರಾದವರು ಈ ರಾಜಕೀಯದಲ್ಲಿ ಇರಬೇಕೋ ಅಥವಾ ಬೇಡವೋ ಎಂಬುದನ್ನು ಇವತ್ತು ನಿರ್ಣಯ ಮಾಡಬೇಕಾದಂತಹ ಕಾಲ ಬಂದಿದೆ. ಇವತ್ತು ಜನರು ವಿಚಾರ ಮಾಡುವಂತಹ ಕಾಲವಾಗಿದೆ. ಅದಕ್ಕಾಗಿ ತಾವು ಇಲ್ಲಿ ಸಂರಕ್ಷಣೆಯನ್ನು ಮಾಡಬೇಕು, ಇಲ್ಲಿ ಸರಿಯಾದಂತಹ ವಿಚಾರಣೆಗೆ ಇಲ್ಲಿ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ **ವಿಶ್ವೇಶ್ವರ ಹೆಗಡೆ ಕಾಗೇರಿ** :- ಮಾನ್ಯ ಅಧ್ಯಕ್ಷರೆ.......

ಅಧ್ಯಕ್ಷರು :- 5-6 ಜನರು ಮಾತನಾಡುವುದನ್ನು ಬರೆದುಕೊಳ್ಳಬೇಡಿ, ನಾನು ಯಾರಿಗೆ ಅಲೌ ಮಾಡುತ್ತೇನೇ ಅವರು ಹೇಳುವುದನ್ನು ಮಾತ್ರ ಬರೆದುಕೊಳ್ಳಿ. I have allowed Mr. Byregowda.

(ಗೊಂದಲ)

ಶ್ರೀ ಸಿ. **ಬೈರೇಗೌಡ** :- ಮಾನ್ಯ ಅಧ್ಯಕ್ಷರೆ, ಎರಡನೆಯದಾಗಿ ಈ ವಿಚಾರದಲ್ಲಿ ಏನು ಸಮಸ್ಯೆ ಇದೆ ಎಂದರೆ, ಇದು ಭೀಕರವಾದಂತಹ ಸಮಸ್ಯೆ, ಕಳಪೆ ಔಷಧಿಗಳು, ನಕಲಿ ಔಷಧಿಗಳು ಇವೆಲ್ಲವನ್ನು ಇವತ್ತಿನ ದಿವಸ ಸಾರೋದ್ದಾರವಾಗಿ ಯಥೇಚ್ಛವಾಗಿ ಎಲ್ಲಿ ಅಂದರೆ ಅಲ್ಲಿ ಮಾರಾಟ ಮಾಡುತ್ತಿದ್ದಾರೆಂದರೆ ಎಲ್ಲಾ ಕಾಯಿಲೆಗಳು ಇರತಕ್ಕಂತಹ ರೋಗಿಗಳ ಜೀವನದ ಮೇಲೆ

ಚೆಲ್ಲಾಟವಾಡುತ್ತಿರುವಂತಹ ಕೆಲಸವಾಗಿದೆ. ಇದನ್ನು ಸರ್ಕಾರ ನಿಯಂತ್ರಣ ಮಾಡಲೇ ಬೇಕಾಗಿರತಕ್ಕಂತಹ ಅದ್ಯಕರ್ತವ್ಯವಾಗಿದೆ. ಒಂದು ಕಡೆಗೆ ಆಸ್ಪತ್ರೆಗೆ ಔಷಧಿಯನ್ನು ಕೊಡದೇ ಇದ್ದರೂ ಪರವಾಗಿಲ್ಲ. ಆದರೆ ಕೊಡತಕ್ಕಂತಹ ಔಷಧಿ ನಕಲಿಯಾಗಿದ್ದರೆ, ಮತ್ತು ಅದರ ಗುಣಮಟ್ಟವು ಕಡಿಮೆಯಾಗಿದ್ದರೆ ಔಷಧಿ ತೆಗೆದುಕೊಂಡಿರತಕ್ಕಂತಹ ನಂಬಿಕೆ ಆ ಪೇಷಂಟ್‌ದಾಗಿರುತ್ತದೆ. ಆದರೆ ಅದು ಏನು ಕೆಲಸ ಮಾಡದೆ ಇದ್ದರೆ ಅದನ್ನು It is nothing but killing. ಅಂದರೆ ಅವರನ್ನು ಕೊಲೆ ಮಾಡುವುದಕ್ಕೆ ಇದು ಪ್ರಯತ್ನವಾಗಿರುತ್ತದೆ. ಆದ್ದರಿಂದ ಈ ವಿಚಾರವನ್ನು ತೀವ್ರವಾಗಿ ಗವುನಿಸಬೇಕಾಗುತ್ತದೆ. ನಾನು ಈಗ ಹಾಲಿ ಮಂತ್ರಿಗಳಾಗಿರತಕ್ಕಂತಹ ಶ್ರೀ ಕಾಗೋಡುತಿಮ್ಮಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಒಂದು ನಾಲ್ಕು ಜನರನ್ನು ಜಿಲ್ಲೆಗೆ ಒಬ್ಬೊಬ್ಬರಂತೆ ಹಾಕಿ ಇದನ್ನು ಯಾರ್‍ಯಾರು ಮಾರಾಟ ಮಾಡುತ್ತಿದ್ದಾರೆ, ಇದನ್ನು ಯಾರ್‍ಯಾರು ತಯಾರು ಮಾಡುತ್ತಾರೆ ಇಂತಹವರನ್ನು ನೀವು ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಈ ನಕಲಿ ಔಷಧಿಗಳನ್ನು ಮತ್ತು ತಯಾರು ಮಾಡತಕ್ಕಂತಹ ಮಾರಾಟಗಾರರಿಗೆ ಕೈಗಳಿಗೆ ಬೇಡಿಯನ್ನು ಹಾಕಿಸಬೇಕು, ಇದನ್ನು ತಾವು ಕಾನೂನಿನ ಪ್ರಕಾರ ಮಾಡಬೇಕು ನಾನು ಅವರನ್ನು ಹ್ಯಾಂಗ್ ಮಾಡಿ ಎಂದು ಹೇಳುವುದಕ್ಕಾಗುವುದಿಲ್ಲ. ಅವರುಗಳ ಕೈಗಳಿಗೆ ಬೇಡಿಯನ್ನು ಹಾಕಿಸಿ, ಅವರ ಅಂಗಡಿಯಿಂದ ಪೊಲೀಸ್ ಸ್ಟೇಷನ್‌ಗೋ ಅಥವಾ ಪೊಲೀಸ್ ಸ್ಟೇಷನ್‌ನಿಂದ ಕೋರ್ಟ್‌ಗೋ ಈ ಕಡೆ ಆ ಕಡೆಗೆ 4 ಜನ ಪೊಲೀಸ್‌ನವರನ್ನು ಇಟ್ಟುಕೊಂಡು ಮೆರವಣಿಗೆಯನ್ನು ಮಾಡಿಕೊಂಡು ಕರೆದುಕೊಂಡು ಹೋಗಬೇಕು. ಈ ಕೆಲಸವನ್ನು ನಾನು ಹಿಂದೆ ಮಾಡಿಸಿದ್ದೇನೆ, ಮನುಷ್ಯರು ಉಪಯೋಗಿಸುವಂತಹ ಔಷಧಿಗಳು ನಕಲಿ, ಇವತ್ತು ನಾವು ಕೃಷಿರಂಗದಲ್ಲಿಯೂ ಕೂಟ ನಕಲಿ ಔಷಧಿಗಳನ್ನು ಕಾಣುತ್ತಿದ್ದೇವೆ. ಆ ರೀತಿಯಾದಂತಹ ನಕಲಿ ಔಷಧಿಗಳು ಇವತ್ತು ಮಾರಾಟವಾಗುತ್ತಿವೆ. ಆ ರೀತಿಯಾಗಿ ಮಾಡಿದಂತಹ ಸಂದರ್ಭದಲ್ಲಿ ಅವರನ್ನು ಬೀದಿಯಲ್ಲಿ ಪೆರೇಡ್ ಮಾಡಿರತಕ್ಕಂಥದ್ದನ್ನು ಉಂಟು. ಅವರುಗಳನ್ನು ಬೀದಿಯಲ್ಲಿ ಮೆರವಣಿಗೆ ಮಾಡಿರುವಂತಹ ನಿದರ್ಶನಗಳನ್ನು ಕೂಡ ಇದೆ. ಆ ಕೆಲಸವನ್ನು ನಾನು ಮಾಡಿಸಿದ್ದೇನೆ. ಈ ವಿಚಾರದ ಬಗ್ಗೆ ತಾವು ತೀವ್ರವಾಗಿ ಪರಿಗಣಿಸಿ ಒಂದು ನಾಲ್ಕು ಕಡೆಗಳಲ್ಲಿ ಅವರುಗಳಿಗೆ ಬೇಡಿಯನ್ನು ಹಾಕಿಸಿ, ಮೆರವಣಿಗೆಯನ್ನು ಮಾಡಿಸಿ ಅದಕ್ಕೆ ನಿಮ್ಮ ಅಧಿಕಾರವಿದೆ. ಕಾನೂನಿನಲ್ಲಿ ಈ ರೀತಿಯಾಗಿ ಮಾಡುವುದಕ್ಕೆ ಅವಕಾಶಗಳಿವೆ. ನೀವು ನ್ಯಾಯಾಲಯಕ್ಕೆ ಅವರುಗಳನ್ನು ಕರೆದುಕೊಂಡು ಹೋಗುವಾಗ ವ್ಯಾನ್‌ನಲ್ಲಿಯೇ ಕರೆದುಕೊಂಡು ಹೋಗಬೇಕೆಂದಿಲ್ಲ, ಬೇಡಿಯನ್ನು ಹಾಕಿ ಈ ಕಡೆ ಮತ್ತು ಆ ಕಡೆಗೆ ನಾಲ್ಕು ಜನರನ್ನು ನಿಲ್ಲಿಸಿಕೊಂಡು ದಾರಿಯಲ್ಲಿ ಕಡೆದುಕೊಂಡ ಹೋದರೆ ಅದೇ ಮೆರವಣಿಗೆಯಾಗುತ್ತದೆ. ಈ ಕೆಲಸವನ್ನು ಮಾಡಿ ನೀವು ತೀವ್ರವಾದಂತಹ ಕ್ರಿಯೆಯಲ್ಲಿ ತಾವು ತೊಡಗಬೇಕೆಂದು ಅತಿ ಅವಶ್ಯಕವಿದೆ, ಇದನ್ನು ದಯವಿಟ್ಟು ಮಾಡಬೇಕೆಂದು ನಾನು ಆಗ್ರಹವನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

+ ಶ್ರೀ ಕೆ.ಬಿ. ಕೃಷ್ಣಮೂರ್ತಿ (ಕಡೂರು) :- ಮಾನ್ಯ ಸಭಾಧ್ಯಕ್ಷರೆ, ನಿನ್ನೆದಿವಸ ದೂರದರ್ಶನದಲ್ಲಿ ನೇರವಾಗಿ ಈ ರಾಜ್ಯದ ಐದು ಕೋಟಿ ಜನರು ಅದರಲ್ಲಿ ಶೇಕಡ 50 ಭಾಗ ದೂರದರ್ಶನದಲ್ಲಿ ನೋಡುತ್ತಾರೆಂದರೆ ತಪ್ಪಾಗಲಿಕ್ಕಿಲ್ಲ. ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಆರೋಗ್ಯ ಇಲಾಖೆಯೂ ಕೂಡ ಒಂದು ಮೂಲಭೂತವಾದ ಅಂಗವಾಗಿದೆ. ಆದರೆ ಡಾ॥

ಸುದರ್ಶನ್‌ರವರು ನೇರವಾಗಿ ಅಧಿಕಾರಿಗಳಿಗೆ ಹೇಳುತ್ತಾರೆ, ಎಷ್ಟು ಕಳಪೆ, ಎಷ್ಟು ಗುಣಮಟ್ಟದ್ದು ಎಲ್ಲಿಂದ ಬಂದದ್ದು ಯಾರಿಗೆ ಎಷ್ಟು ಕೊಟ್ಟಿದ್ದೀರಿ, ಡಾ|| ಮಾಲಕರೆಡ್ಡಿಯವರಿಗೆ ಎಷ್ಟು ಕೊಟ್ಟಿದ್ದೀರಿ, ಹಾಲಿ ಮಂತ್ರಿಗಳಿಗೆ ಎಷ್ಟು ಕೊಟ್ಟಿದ್ದೀರಿ, ಹಿಂದಿನ ಮಾಜಿ ಮಂತ್ರಿಗಳಿಗೆ ಎಷ್ಟು ಕೊಟ್ಟಿದ್ದೀರಿ ಎಂದೆಲ್ಲ ಕೇಳಿದ್ದಾರೆ ವಾಸ್ತವಿಕವಾಗಿ ಡಾ|| ಮಾಲಕರೆಡ್ಡಿಯವರ ವಿಚಾರದಲ್ಲಿ ಹೇಳುವುದಾದರೆ ಈಗಾಗಲೇ ನಾಯಕರುಗಳು ಹೇಳಿದ್ದಾರೆ. ಇದು ತನಿಖೆಯಾಗದಿದ್ದರೆ ಏನಾಗುತ್ತದೆಂದರೆ, ನಾವು ಎಲ್ಲಾ ರಾಜಕಾರಣಿಗಳ ಅಪವಾದಕ್ಕೆ ಒಳಗಾಗಬೇಕಾಗುತ್ತದೆ. ಡಾ|| ಮಾಲಕರೆಡ್ಡಿಯವರೆ, ಇಂತಹ ಅಪವಾದಕ್ಕೆ ಒಳಗಾದರೆ ನಾವೂ ಕೂಡ ಅಪವಾದಕ್ಕೆ ಒಳಗಾದಂತೆ ಆಗುತ್ತದೆ. ಈಗ ತನಿಖೆಯಾದರೆ ಏನಾಗುತ್ತದೆ ಎಂದರೆ ನಾವು ರಾಮಾಯಣದಲ್ಲಿ ಏನು ಕೇಳಿದ್ದೇವೆಂದರೆ, ಸೀತೆಯು ಬೆಂಕಿಗೆ ಪ್ರವೇಶ ಮಾಡಿದ ಮೇಲೆಯೇ ಆಕೆಯ ಬಗ್ಗೆ ಜನರಿಗೆ ಗೌರವ ಬಂದದ್ದು. ಸೀತೆಯು ಬೆಂಕಿ ಪ್ರವೇಶ ಮಾಡದೆ ಇದ್ದರೆ ಯಾರೋ ಒಬ್ಬನ ಮಾತು ನಿಜವಾಗಿಬಿಡುತ್ತಿತ್ತು. ಹಾಗೆಯೇ ಇವತ್ತು ಇದು ಬಹಳ ಗಂಭೀರವಾದಂತಹ ವಿಚಾರವಾಗಿದೆ, ಮನುಷ್ಯನಿಗೆ ಮಾತ್ರೆಗಳನ್ನು ಕೊಡುವುದು ಜೀವ ರಕ್ಷಣೆಗೆ, ಆದರೆ ಇವತ್ತು ಏನಾಗಿದೆ ಎಂದರೆ, ಈಗಾಗಲೇ ಸರ್ಕಾರಿ ಆಸ್ಪತ್ರೆಗಳ ಬಗ್ಗೆ ಜನಗಳಿಗೆ ನಂಬಿಕೆ ಇಲ್ಲ. ಇನ್ನು ಈ ಕಳಪೆ ಗುಣಮಟ್ಟದ ಮಾತ್ರೆಗಳು ವಿತರಣೆಯಾಗುತ್ತಿದೆ ಇದರಲ್ಲಿ ರಾಜಕಾರಣಿಗಳು ಶಾಮೀಲಾಗಿದ್ದಾರೆ, ಇದರಲ್ಲಿ ಡ್ರಗ್ ಕಂಟ್ರೋಲನ ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂದು ಹೇಳುವುದಾದರೆ ಜನರಲ್ಲಿ ನಾವು ಈ ನಂಬಿಕೆಯನ್ನು ಕಳೆದುಕೊಳ್ಳುತ್ತೇವೆ. ಇವತ್ತು ಏನೋ ಹಿರಿಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪನವರು ಇದ್ದಾರೆ ಅವರಿಗೆ ಬಹಳ ಜವಾಬ್ದಾರಿ ಇದೆ. ಇದು ಬಹಳ ಸಾಧಾರಣವಾದ ವಿಚಾರವಲ್ಲ. ಇಲ್ಲಾ ಒಂದು ಛಾಪಾ ಕಾಗದ 500 ರಿಂದ 700 ಕೋಟಿ ರೂಪಾಯಿಗಳು ಇದ್ದರೆ ಅದರಿಂದಾಗಿ ಜೀವಕ್ಕೆ ಹಾನಿಯಾಗುವುದಿಲ್ಲ. ಅದರ ಬಗ್ಗೆ ತನಿಖೆಯನ್ನು ಯಾವಾಗ ಬೇಕಾದರೂ ಮಾಡಬಹುದು. ಆದರೆ ಇವತ್ತು ಏನೂ ಜೀವ ರಕ್ಷಣೆ ಮಾಡುವಂತಹ ಔಷಧಿಗಳ ಗುಣಮಟ್ಟವು ಕಳಪೆಯಾಗಿದೆ, ಅದು ನಕಲಿ ಎಂದು ಹೇಳಿದರೆ ನಾನಂತೂ ವಾಸ್ತವವಾಗಿ ವಿಧಾನಸಭೆಯಲ್ಲಿ ಕೂಗಾಡುತ್ತಿರುತ್ತೇನೆ. ನಾವು ತೆಗೆದುಕೊಳ್ಳುವಂತಹ ಮಾತ್ರೆಗಳ ಗುಣಮಟ್ಟವು ಕಳಪೆಯಾಗಿದ್ದರೆ ನಮ್ಮ ಸಾವು ಇಲ್ಲೇ ಆಗಬಹುದು. ಆದ್ದರಿಂದ ತಾವು ಮಾನವೀಯತೆಯ ದೃಷ್ಟಿಯಿಂದ ಇದರ ಬಗ್ಗೆ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಹಳ ದೀರ್ಘ ಕಾಲವಾದ ಅವಕಾಶವನ್ನು ಕೊಡಬೇಕೆಂದು ಹೇಳುತ್ತಾ ನಾನು ತಮ್ಮ ಮೂಲಕವಾಗಿ ಸರ್ಕಾರವನ್ನು ಕೋರುತ್ತೇನೆ.

ಅಧ್ಯಕ್ಷರು :- ಮಾನ್ಯ ಕಾಗೋಡು ತಿಮ್ಮಪ್ಪನವರೆ, ತಾವೇನಾದರೂ ಹೇಳುತ್ತೀರಾ?

ಶ್ರೀ ಕಾಗೋಡುತಿಮ್ಮಪ್ಪ (ಆರೋಗ್ಯ ಮತ್ತು ವಾರ್ತಾ ಪ್ರಸಾರ ಸಚಿವರು) :- ಮಾನ್ಯ ಅಧ್ಯಕ್ಷರೆ,

ಶ್ರೀ ಸಿ. ಬೈರೇಗೌಡ :- ಮಾನ್ಯ ಡಾ|| ಮಾಲಕರೆಡ್ಡಿಯವರ ಮೇಲೆ ಆಪಾದನೆ ಬಂದಿದೆ ಅವರು ಹೇಳಲಿ.

+ ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) :- ಮಾನ್ಯ ಅಧ್ಯಕ್ಷರೆ, ನಾನು ಈ ಟಾಸ್ಕ್‌ಫೋರ್ಸ್‌ನ್ನು ಅಪಾಯಿಂಟ್ ಮಾಡಿದಾಗ ಒಂದು ಮಾತನ್ನು ಈ ಸದನದಲ್ಲಿ ಹೇಳಿದ್ದೆ. ಅದು ಇ.ಎಲ್.ಆರ್.ಟಿ.ಎಸ್. ಇದ್ದಹಾಗೆ ಈ ಮಂತ್ರಿಗಳೆಲ್ಲಾ narrow gauge ರೈಲ್ವೆ ಲೈನ್ ಇದ್ದಹಾಗೆ, ಏನಾಗುತ್ತದೆಂದರೆ, ಅವರು ಕೊಟ್ಟ ತೀರ್ಮಾನ ಮಾತ್ರ ಸರ್ಕಾರದಲ್ಲಿ

ನಡೆಯುವಂಥದ್ದು, ಮಂತ್ರಿಗಳದ್ದಲ್ಲ ಒಂದು ಶಬ್ದವನ್ನು ಹೇಳುವುದಕ್ಕೆ ಪುನಃ ನಾನು ಅದನ್ನು ನೆನಪು ಮಾಡಿಕೊಳ್ಳುತ್ತೇನೆ. ನಾನು ಇದರ ಬಗ್ಗೆ ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ, ನಾನು ಏನನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆಂದರೆ, credibility of the institutions. ಒಮ್ಮೆ ಮಂತ್ರಿಗಳು ಉಳಿದುಕೊಳ್ಳಬೇಕು, ಇಲ್ಲದಿದ್ದರೆ ಡಾ॥ ಸುದರ್ಶನ್ ಉಳಿದುಕೊಳ್ಳಬೇಕು. ಇದರಲ್ಲಿ ಯಾರದ್ದು ಸತ್ಯವೆಂದು ತೀರ್ಮಾನವಾಗಬೇಕು. ಒಂದು ವೇಳೆ ಅವರು ಹೇಳುವುದು ಸುಳ್ಳು ಎಂದಾದರೆ ಅವರು ಹೋಗಬೇಕಾಗುತ್ತದೆ. ಅವರು ಹೇಳುವುದು ಸತ್ಯವೆಂದರೆ ಮಂತ್ರಿಗಳು ಹೋಗಬೇಕಾಗುತ್ತದೆ. ಇದರ ಬಗ್ಗೆ ಇನ್ನು ಹೆಚ್ಚು ಚರ್ಚೆಯಾಗಬೇಕಾಗುತ್ತದೆ. ಆದ್ದರಿಂದ ಈ ಸಂದರ್ಭದಲ್ಲಿ ಪ್ರಿಲಿಮಿನರಿ ಸಬ್‌ಮಿಷನ್‌ನಲ್ಲಿ ಇಷ್ಟನ್ನು ಮಾತನಾಡುವುದಕ್ಕೆ ಇಚ್ಛಿಪಡುತ್ತಾ ಮಂತ್ರಿಗಳು ಉತ್ತರ ಕೊಟ್ಟ ಮೇಲೆ ತಾವು ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತೀರೋ ಇನ್ನು ಹೆಚ್ಚು ವಿಷಯಗಳನ್ನು ಮಾತನಾಡುವುದಕ್ಕೆ ಇಚ್ಛಿಪಡುತ್ತೇನೆ.

12.40 ಪಿ.ಎಂ.

+ಶ್ರೀ ಎ.ಬಿ. **ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು)** :- ಸನ್ಮಾನ್ಯ ಸಭಾಧ್ಯಕ್ಷರೇ, ನಿನ್ನೆ ನಾವು ಬ್ಯಾಂಕ್ವೆಟ್ ಹಾಲ್‌ನಲ್ಲಿ ಊಟ ಮಾಡುತ್ತಿದ್ದ ಸಮಯದಲ್ಲಿ ಉದಯ ಟಿವಿ ಅವರು ಬಂದು ಲೋಕಾಯುಕ್ತದವರು ಡ್ರಗ್ ಕಂಟ್ರೋಲರ್ಸ್ ಕಚೇರಿಗೆ ಹೋಗಿ ಕೆಲವು ಔಷಧಿಗಳನ್ನು ಹೊರಗೆ ಹಾಕಿದ್ದಾರೆ ಎಂದಾಗ ನಮಗೆ ಗಾಬರಿಯಾಯಿತು. ತಮ್ಮ ಹೆಸರನ್ನೂ ಕೂಡ ತಮ್ಮ ಜ್ಯೂನಿಯರ್ ಆಫೀಸರ್ ಒಬ್ಬರು ತೆಗೆದುಕೊಂಡರು. ನಮಗೆ ಅದನ್ನು ನಂಬಲಿಕ್ಕೆ ಸಾಧ್ಯವಾಗಲಿಲ್ಲ. ಆದಕ್ಕೆ ಕರೋಬರೇಟ್ ಮಾಡೋಣವೆಂದು ಬಂದಿದ್ದೇವೆ. ತಮ್ಮ ಪ್ರತಿಕ್ರಿಯೆಯನ್ನು ಹೇಳಬೇಕೆಂದು ಕೇಳಿದರು. ನಾನು ಇಲ್ಲಿ ವಿಸ್ತೃತವಾಗಿ ಯಾವುದನ್ನು ಮಾತನಾಡಲಿಕ್ಕೆ ತಯಾರಿಲ್ಲ. ಇವತ್ತು, ಈ ಸಭೆಯಲ್ಲಿ, ಇಂಥ ಪ್ರಕರಣಗಳು ಹಿಂದೆ ಬಂದಾಗ ಯಾವರೀತಿ ಈ ಸದನ ನಡೆದುಕೊಂಡಿದೆಯೆಂಬುದು ನನಗೆ ಗೊತ್ತಿದೆ. ನಾನು ಸಹ 25 ವರ್ಷಗಳಿಂದ ಈ ಸದನದಲ್ಲಿ ಕೆಲಸವನ್ನು ಮಾಡುತ್ತಿದ್ದೇನೆ. ನಮ್ಮೆಲ್ಲರಿಗೂ ಜನ ಗೌರವವನ್ನು ಏಕೆ ಕೊಡುತ್ತಾರೆ. ಮಂತ್ರಿಗಳಾಗಿದ್ದೇವೆಂದು ಅಲ್ಲ, ಜನರು ನಮಗೆ ಗೌರವ ಕೊಡುವುದು, ನಾವು ಜನರ ಪ್ರತಿನಿಧಿಗಳು ಎಂದು, ನಾವು ಶಾಸಕರು, ಎಂದು ಜನರು ನಮಗೆ ಗೌರವ ಕೊಡುತ್ತಾರೆ. ಮಂತ್ರಿಗಳಿಗೆ ಹೆಚ್ಚಾಗಿ ಟೀಕೆಗಳು ಬರುವುದು ಏಕೆ? ಕೆಲವು ಕೆಲಸಗಳನ್ನು ಮಾಡಲಿಕ್ಕೆ ಆಗುತ್ತವೆ, ಕೆಲವು ಕೆಲಸಗಳನ್ನು ಮಾಡಲಿಕ್ಕೆ ಆಗುವುದಿಲ್ಲ. ಆದರೆ ಪ್ರಥಮದಲ್ಲಿ ಜನರು ನಮಗೆ ಗೌರವ ಕೊಡತಕ್ಕದ್ದು, ನಾವು ಈ ಸದನದ ಗೌರವಾನ್ವಿತ ಸದಸ್ಯರು ಎಂದು. ಆದಕ್ಕೆ ನನ್ನ ಗೌರವ ಬೇರೆ, ನಿಮ್ಮ ಗೌರವ ಬೇರೆ ಅಲ್ಲ, ಎಲ್ಲರ ಗೌರವವೂ ಒಂದೇ. ಆದಕ್ಕೋಸ್ಕರವಾಗಿ ಶ್ರೀ ಕೃಷ್ಣಮೂರ್ತಿ ಅವರು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ. ಇವತ್ತು ನನ್ನ ಮರ್ಯಾದೆ ಕಡಿಮೆಯಾದರೆ ನಿಮ್ಮ ಮರ್ಯಾದೆ ಕಡಿಮೆಯಾದಂತೆಯೇ. ಏಕೆಂದರೆ ನಿಮ್ಮ ಗೌರವಕ್ಕೆ ನಾನು ಚ್ಯುತಿ ತಂದಂತಾಗುತ್ತದೆ. ಆದಕ್ಕಾಗಿ ಹಿಂದಿನ ರಾತ್ರಿ ವಿವರವಾಗಿ ಕೇಳಲಿಕ್ಕೆ ಆಗಲಿಲ್ಲ. ಆಗ ನಾನು ಸದನದಲ್ಲಿರಬೇಕಾಗಿತ್ತು. ಸಾಯಂಕಾಲ 10.00 ಗಂಟೆಗೆ ನನಗೆ ಸಮಯ ಸಿಕ್ಕಿತು. ನಾನು ಕೇಳಿದೆ. ನನಗೆ ಆಶ್ಚರ್ಯವಾಗಲಿಲ್ಲ. ತಮಗೆಲ್ಲಾ ಆಶ್ಚರ್ಯವಾಗಿರಬಹುದು ಅಲ್ಲದೆ ತಮಗೆ ಈ ಬಗ್ಗೆ ಸ್ಪಷ್ಟವಾಗಿರಬಹುದು, ಅದರ ಬಗ್ಗೆ ನಾನು ಹೇಳುವುದಿಲ್ಲ. ಆದರೆ ಇವತ್ತು ನಾನು ಬಹಳ ದೀನ ಮನಸ್ಸಿನಿಂದ ಮಾತನಾಡಬೇಕಾಗಿದೆ. ಈ ಸದನದಲ್ಲಿ ವ್ಯಕ್ತವಾದ ಭಾವನೆಗಳು, ತಾವೆಲ್ಲರೂ ಹಿರಿಯ ಧುರೀಣರು ಎಂಬುದು ವ್ಯಕ್ತಪಡಿಸುತ್ತದೆ.

ಮೊದಲಿನ ಸಾಲಿನಿಂದ ಹಿಡಿದು ಕೊನೆಯ ಸಾಲಿನವರೆಗೆ ನಡೆದುಕೊಂಡ ರೀತಿ ನೋಡಿದಾಗ ನಿಜವಾಗಲೂ ಇಂಥ ಸದನದ ಸದಸ್ಯನಾಗಿದ್ದಕ್ಕೆ ನನ್ನ ಗೌರವ ಹೆಚ್ಚಾಗಿದೆ. ಎಂತಹ ಅಭಿಮಾನ, ಗೌರವ, ಗಂಭೀರತೆ, ಸೂಕ್ಷ್ಮತೆ ತಿಳಿದುಕೊಂಡು ತಾವೆಲ್ಲಾ ಮಾತನಾಡಿದ್ದೀರಿ ಮತ್ತು ವೈಯಕ್ತಿಕವಾಗಿ ಕೂಡ ನನ್ನ ಬಗ್ಗೆ ಎಲ್ಲರೂ ಒಳ್ಳೆಯ ಮಾತುಗಳನ್ನೇ ಆಡಿದ್ದೀರಿ. ನಾನು ಹಿಂದೆ ಯಾವ ರೀತಿ ನಡೆದುಕೊಂಡಿದ್ದೇನೆ ಇನ್ನು ಮುಂದೆ ಕೂಡ ಅದೇ ರೀತಿ ನಡೆದುಕೊಳ್ಳುವಂತಹ ಶಕ್ತಿ ಆ ಭಗವಂತ ನನಗೆ ಕೊಡಲಿ ಎಂದು ಕೇಳಿಕೊಳ್ಳುತ್ತೇನೆ. ಇದಕ್ಕಿಂತ ಹೆಚ್ಚಿಗೆ ನಾನೇನೂ ಹೇಳಲಾರೆ. ಶ್ರೀ ರಾಮದಾಸ್ ಅವರು ಆರೋಗ್ಯ ಇಲಾಖೆಯ ಬಗ್ಗೆ ಪರಿಣಿತರಿದ್ದಾರೆ. It is his pet subject ಐ.ವಿ.ಫ್ಲೂಯಿಡ್ಸ್ ಬಂದಾಗ ಅವರು ನೋಟೀಸ್ ಕೊಟ್ಟಿದ್ದರು. ಈ ವಿಷಯದ ಬಗ್ಗೆ ಮಾತನಾಡಲು ನನ್ನ ಬಳಿ ಕೆಲವು ಮಿತ್ರರು ಬಂದರು ನಾನು ನಿಮ್ಮನ್ನು ಅವರೊಂದಿಗೆ ಭೇಟಿ ಮಾಡಿಸುತ್ತೇವೆಂದು ಹೇಳಿದರು ಸ್ವಲ್ಪ ಮಾತನಾಡುವುದು ಇದೆ. ಇಲ್ಲ, ಸದನದಲ್ಲಿ ಈ ವಿಷಯ ಚರ್ಚೆ ಆಗಬೇಕು ಎಂದು ನಾನು ಹಠ ಹಿಡಿದೆ. I have no Ace's to grant. A Government has to be transparent, Government must be clear in its mind as to why it wants to take a particular decision. That is the reason why I sought the help of my senior most colleague, whom I thought is well-versed in Governmental affairs. I took the help of Mr. Kagod Thimappa, my senior colleague. Because I thought, the members from both the sides, ಸದನದ ಎರಡೂ ಕಡೆಯ ಸದಸ್ಯರು ಇದರ ಬಗ್ಗೆ ಪ್ರಶ್ನೆಯನ್ನು ಮಾಡುತ್ತಾರೆ, ಸಂಶಯ ವ್ಯಕ್ತಪಡಿಸುತ್ತಾರೆ ಎಂದ ಮೇಲೆ ನಾನು ಅವರನ್ನು ಮನೆಗೆ ಕರೆಸಿ ಒಂದು ಸಲ ಅಲ್ಲ, ಎರಡು ಸಲ ಚರ್ಚೆ ಮಾಡಿದ್ದೇನೆ. ಅವರೂ ಕೂಡ ಸಾಕಷ್ಟು ಪ್ರಶ್ನೆಗಳನ್ನು ಹಾಕಿದರು, ಏನು? ನಮ್ಮ ಸರ್ಕಾರಿ ಔಷಧಿಗಳಲ್ಲಿ, ಲ್ಯಾಬೋರೇಟರಿ, ಮೆಡಿಕಲ್ ಕಾಲೇಜುಗಳಲ್ಲಿ 18-19-20 ರೂಪಾಯಿಗಳಿಗೆ ತಯಾರಾಗುತ್ತಿತ್ತು. ಆದರೆ ನೀವು ಬಜಾರ್‌ನಲ್ಲಿ ಟೆಂಡರ್ ಕಾಲ್‌ಫಾರ್ ಮಾಡಿ, ರೇಟ್ ಕಂಟ್ರಾಕ್ಟ್ ಅನ್ನು ಫಿಕ್ಸ್ ಮಾಡಿ, ದುಬಾರಿ ಬೆಲೆಯ ಔಷಧಿಗಳನ್ನು ಏಕೆ ಕೊಂಡುಕೊಳ್ಳುತ್ತೀರಿ ಎಂದು ಕೇಳಿದರು. ಅದಕ್ಕೆ ಎಲ್ಲಾ ದಾಖಲೆಗಳನ್ನು ಅವರಿಗೆ ತೋರಿಸಿದ್ದೇನೆ. ಹ್ಯೂಮನ್ ರೈಟ್ಸ್ ಕಮಿಷನ್‌ನವರು ಈಗ ಇತ್ತೀಚೆಗೆ ಈ ರೀತಿ ಒಂದು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ, ಶೀಷೆ ಬಾಟಲಿಯಲ್ಲಿ ಮಾಡಬಾರದು, ಒಂದು ವೇಳೆ ಮಾಡಿದರೆ ಅದನ್ನು ಡೆಸ್ಟ್ರಾಯ್ ಮಾಡಬೇಕು, ಮತ್ತೆ ಅದನ್ನು ರೀಸೈಕಲ್ ಮಾಡಬಾರದೆಂದು ಆದೇಶಿಸಿದ್ದಾರೆ ಹಾಗೆ ಆದೇ ಬಾಟಲನ್ನು ರೀಸೈಕಲ್ ಮಾಡಬಾರದೆಂದು ಹ್ಯೂಮನ್ ರೈಟ್ಸ್ ಕಮೀಷನ್‌ನವರು ಕೇಂದ್ರ ಸರ್ಕಾರಕ್ಕೆ ಡೈರೆಕ್ಷನ್ಸ್ ಕೊಟ್ಟರು. ಕೇಂದ್ರ ಸರ್ಕಾರದವರು ಇನ್‌ಟರ್ನ್ ಎಲ್ಲಾ ರಾಜ್ಯಗಳಿಗೂ ಡೆರೆಕ್ಷನ್ಸ್ ಕೊಟ್ಟಿರುತ್ತಾರೆ ಅಂದ ಮೇಲೆ ಸರ್ಕಾರ ಒಂದು ವೇಳೆ ಅದನ್ನು ತಯಾರು ಮಾಡಬೇಕಾಗಿದ್ದರೆ ಇಪ್ಪತ್ತೆಂಟು ರೂಪಾಯಿಗಳು ಖರ್ಚಾಗುತ್ತದೆ ಎಂಬುದನ್ನು ಹೇಳಿದೆ ನಾನು ಮೈಸೂರಿಗೆ ಹೋಗಿದ್ದಾಗ ರಾಮದಾಸ್ ಅವರು ಒಂದು ದೊಡ್ಡ ಜಾಥಾವನ್ನು ಸರ್ಕಾರ ವಿರುದ್ಧ ಕರೆತಂದಿದ್ದರು. ಅವರಿಗೂ ನಾನು ಕನ್‌ವಿನ್ಸ್ ಮಾಡಿದೆ. ಅದನ್ನು ಅವರೂ ಒಪ್ಪಿಕೊಂಡರು. ಆದುದರಿಂದ ಈ ರೀತಿ ಆಪಾದನೆಗಳು ಬರುತ್ತಿರುತ್ತವೆ, ಬರುವುದಿಲ್ಲ ಎಂದು ನಾನು ಹೇಳಲಿಕ್ಕೆ ತಯಾರಿಲ್ಲ. ಅದರಲ್ಲೂ

ಆರೋಗ್ಯ ಇಲಾಖೆಯ ಬಗ್ಗೆ ನನಗೆ ಚೆನ್ನಾಗಿ ಗೊತ್ತು. at various levels ಸ್ಪೂರಿಮಸ್ ಡ್ರಗ್ ಸಚಿವರು, ಸಚಿವರು ಎಂದು ಈಗ ನಾನು ಸಚಿವನಾದುದ್ದರಿಂದ ಒಬ್ಬ ಟೆಕ್ನಿಕಲ್ ಮನುಷ್ಯನಾದುದರಿಂದ, ತಮಗೆ ಸರಿಯಾದ ಮಾಹಿತಿಯನ್ನು ಕೊಡುವುದು ನನ್ನ ಧರ್ಮ. Drug Control Department has got statutory powers. This House has conferred powers directly on the Drug Control office. They need not come to the Government. Minister need not know, the file need not come to the Government unless a drug which has been included in the rate contract has to be deleted for reasons mentioned by you that it is a spurious one, if it is confirmed by the analysis of the Drug Control Department and then the Drug Controller will send the file to the Government and such a file has come, not once or twice to me and I have ordered prosecution. I do not want to say the details. Then Something else it lands things elsewhere. I do not want to tell. I have ordered prosecution. ಅವರು ಮೆನ್ಷನ್ ಮಾಡಿದ ಡ್ರಗ್ ಈಗಾಗಲೇ ಆಗಿದೆ. ಇದರಲ್ಲಿ ಮುಚ್ಚಿ ಇಡುವಂಥದ್ದು ಏನೂ ಇಲ್ಲ. ಇನ್ನೂ ಅನೇಕ ಅಬ್ಸರ್‌ವೇಷನ್ಸ್ ಮಾಡಿದ್ದಾರೆ. ನಾನು ಲೋಕಾಯುಕ್ತರ ಬಗ್ಗೆ ಏನು ಮಾತನಾಡಲಿಕ್ಕೆ ತಯಾರಿಲ್ಲ, ಅವರ ಮೇಲೆ ನನಗೆ ಸಂಪೂರ್ಣ ಗೌರವ ಇದೆ. ಇದು statutory body ಈ ಮನೇನೇ ಇದನ್ನು ನಿರ್ಮಾಣ ಮಾಡಿರತಕ್ಕಂಥದ್ದು. ಶಿವಮೊಗ್ಗದಲ್ಲಿ ಇದೇ ಪ್ರಕರಣವಾಗಿದೆ. ಪದೇ ಪದೇ ಈ ವಿಷಯ ಪ್ರಸ್ತಾಪವಾಗುತ್ತಿದೆ. ನಾನು ಕ್ಲಾರಿಫೈ ಮಾಡಿದ್ದೇನೆ. ಮತ್ತೊಮ್ಮೆ ಕ್ಲಾರಿಫೈ ಮಾಡುತ್ತೇನೆ. ಆ ದಿವಸ ಅವರು ಇದ್ದರು ಬಿ.ಜೆ.ಪಿ.ಯ ಶಾಸಕರು ಇದ್ದರು, ಅವರು ನನಗೆ ಹಾರ ಹಾಕಿದರು. ಯಾವಾಗಲೂ ಭಾಷಣದ ಮೊದಲು ಹಾರ ಹಾಕುತ್ತಿದ್ದರು, ಆದರೆ ಅಂದು ಭಾಷಣ ಮಾಡಿ ಮುಗಿಸಿದ ಮೇಲೆ ಶಾಸಕರು ಹಾರವನ್ನು ಹಾಕಿದರು. ನಮಗೆ ಗೊತ್ತಿರಲಿಲ್ಲ. ತಾವು ಮಾಹಿತಿಯನ್ನು ಕೊಟ್ಟಿರಿ. ನಮಗೆ ಆ ವಿಷಯಗಳು ಏನು ಗೊತ್ತಿರಲಿಲ್ಲ. ಅಷ್ಟಾದರೂ ಪೇಪರ್‌ನಲ್ಲಿ ಏನೆಲ್ಲಾ ವಿಷಯಗಳು ಬಂತು, ಆಗಲಿ, ಈಗ ಈ ಮಾಧ್ಯಮ ಸರ್ವವ್ಯಾಪಿಯಾಗಿದೆ ಮತ್ತು ಅದರ ವ್ಯಾಪ್ತಿ ಬಹಳ ಶೀಘ್ರಗತಿಯಲ್ಲಿ ಹಬ್ಬುತ್ತದೆ. ನಮ್ಮ ಮಾನ್ಯ ಸೋಮಶೇಖರ್ ಅವರು ಭಾಷಣ ಮಾಡಿದ್ದನ್ನು ನಾನು ಅಮೇರಿಕಾದಲ್ಲಿದ್ದಾಗ ಇಂಟರ್‌ನೆಟ್‌ನಲ್ಲಿ ಸಂಪೂರ್ಣವಾಗಿ ಕೇಳಿದ್ದೇನೆ. ನನ್ನ ಸಾವಿರಾರು ಮಂದಿ ಶಿಷ್ಯರು ಫಾರಿನ್ ಕಂಟ್ರೀಸ್‌ನಲ್ಲಿ ಇದ್ದಾರೆ. My own students. What do they feel when they read on the internet? What opinion they have right from my Primary School same opinion is there even till today. I am not talking of legislative career or public career. Right from my primary school, I have worked as a professor, I have worked as a physician, I have never spoiled my name, there was no need, there is no need also. My needs are very simple. ಈ ವಿಷಯದ ಬಗ್ಗೆ ಯಾವುದನ್ನು ಇನ್ನು ಮುಂದೆ ನಾನು ವಿಶಾಲವಾಗಿ ಹೇಳಬೇಕಾಗಿಲ್ಲ. ಏಕೆಂದರೆ ತಮಗೂ ಕೂಡ ಗೌರವ ಸಲ್ಲಿಸುವುದು ನನ್ನ ಆದ್ಯ ಕರ್ತವ್ಯ. ತಾವು ಯಾವ ಭಾವನೆಯನ್ನು ವ್ಯಕ್ತಪಡಿಸಿದ್ದೀರಿ ಆ ಭಾವನೆ ಹೊಂದಿಕೊಂಡಂತೆ ನಾನು ನಡೆದಿದ್ದೇನೆ. ಆದರೆ ಹಿರಿಯರು

ಕೆಲವರು ಹೇಳಿರುವ ಪಾಯಿಂಟ್ಸ್‌ನೆಲ್ಲಾ ನಾನು ನೋಟ್ ಮಾಡಿಕೊಂಡಿದ್ದೇನೆ. ಕನ್ನಡಪ್ರಭದಲ್ಲಿ ಸ್ವಲ್ಪ ವಿವರವಾಗಿ ಬಂದಿರುವ ವಿಚಾರ ಓದಿ ಸಹಜವಾಗಿ ತಾವೆಲ್ಲಾ ಆತಂಕಕ್ಕೆ ಒಳಗಾಗಿರಬಹುದು. ಇವೆಲ್ಲ ವಿವರವಾಗಿ ನಾನು ರಿಪ್ಲೈ ತಯಾರು ಮಾಡುವಂಥ ಅಧಿಕಾರಿಗಳಿಗೆ ಹೇಳಿದ್ದೇನೆ. ಮತ್ತು ನನ್ನ ಜೊತೆಯಲ್ಲಿ ಆಗ ಯಾರು ಸೆಕ್ರೆಟರಿ ಇದ್ದರು ಅವರ ಜೊತೆಗೂ ಕೂಡ ನಾನು ಚರ್ಚೆ ಮಾಡಿದ್ದೇನೆ. ಅವರು ಇವತ್ತು ರಿಪ್ಲೈ ತಯಾರು ಮಾಡುತ್ತಾರೆ. ಅದನ್ನು ನಾನು ಈ ಸದನಕ್ಕೆ ಮತ್ತು ಮೇಲ್ಮನೆ ಸದನಕ್ಕೆ ವಿವರವಾದ ಹೇಳಿಕೆಯನ್ನು ಕೊಡುತ್ತೇನೆ ಮತ್ತು ತಾವು ವ್ಯಕ್ತ ಮಾಡಿದ ಉತ್ತಮ ಮಟ್ಟದ ಇಂತಹ ಸೂಕ್ಷ್ಮವಾದ ವಿಚಾರಗಳ ಬಗ್ಗೆ, ಹೆಚ್ಚು ಉತ್ತಮಮಟ್ಟದ ಚರ್ಚೆಮಾಡಿ ಈ ಸದನದ ಗೌರವವನ್ನು ತಾವು ಹೆಚ್ಚು ಮಾಡಿದ್ದೀರಿ. ಮತ್ತು ವೈಯಕ್ತಿಕವಾಗಿ ನನ್ನ ಬಗ್ಗೆ ಹೇಳಿದ ಮಾತುಗಳಿಗೆ ನಾನು ಚಿರಋಣಿಯಾಗಿದ್ದೇನೆ. ತಮ್ಮ ಆ ಭಾವನೆಗಳಿಗೆ ಸ್ಪಂದಿಸಲಿಕ್ಕೆ ನಾನು ಜೀವನ ಇಡೀ ಪ್ರಯತ್ನ ಮಾಡುತ್ತೇನೆ.

+ ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :- ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದ ರೀತಿಯಲ್ಲಿ ಲೋಕಾಯುಕ್ತ ತನಿಖೆಯನ್ನು ಮಾಡುತ್ತಾ ಇರುವುದರಿಂದ, ನಾನು ಇಲಾಖೆಯ ಮಂತ್ರಿಯೂ ಆಗಿರುವುದರಿಂದ ವಿವರಗಳನ್ನು ನಾನು ಹೇಳುವುದು ಅದು ಸರಿಯಾದ ಮಾರ್ಗ ಅಲ್ಲ. ಆದರೂ ಅದು ಒಂದು ಭಾಗ ಇದ್ದರೆ ಕೆಲವು ಹೇಳಿಕೆಗಳು ಮತ್ತು ಇದಕ್ಕಿಂತ ಮೇಲಾಗಿ ಅವರು ಇದ್ದಾಗಲೂ ಡ್ರಗ್ ಕಂಟ್ರೋಲರ್ ಮೇಲೆ ಕೆಲವು ಆಪಾದನೆಗಳೂ ಬಂದಿವೆ. ನಾನು ಇದ್ದಾಗಲೂ ಬಂದಿವೆ. ಇದನ್ನೆಲ್ಲಾ ನಮ್ಮ ಆಯುಕ್ತರಿಂದ ಪ್ರತ್ಯೇಕವಾದಂಥ ತನಿಖೆಯನ್ನು ಇವತ್ತು ನಾನು ಮಾಡಿಸುತ್ತೇನೆ. ಅದು ಅರ್ಥಂಬರ್ಧವಾಗಿದೆ ಇನ್ನು ಎರಡು-ಮೂರು ದಿವಸಗಳಲ್ಲಿ ಆ ವರದಿಯನ್ನು ನಾನು ತರಿಸುತ್ತಿದ್ದೇನೆ. ಆದ್ದರಿಂದ ಬಹಳ ಬೇಗ ಇದರ ಬಗ್ಗೆ ಒಂದು ಇತ್ಯರ್ಥಕ್ಕೆ ಬರುತ್ತೇವೆ. ನಾನು ಆಗಲೇ ಹೇಳಿದ ರೀತಿಯಲ್ಲಿ ಲೋಕಾಯುಕ್ತರಲ್ಲಿಗೆ ಇವತ್ತೇ ಸ್ವತಃ ನಮ್ಮ ಕಾರ್ಯದರ್ಶಿಯವರನ್ನು ಕಳುಹಿಸಿ ವರದಿಯನ್ನು ತರಿಸಿ, ಆ ವರದಿ ಏನಿದೆ ಎನ್ನುವುದನ್ನು ಕೂಡ ನಮ್ಮ ಸದನದ ಮುಂದೆ ಇಡುತ್ತೇನೆ. ಎರಡನೆಯದು, ಮಾನ್ಯ ಭೈರೇಗೌಡರು ಹೇಳಿದ ರೀತಿಯಲ್ಲಿ ಈಗ ಸ್ಪೂರಿಯಸ್ ಡ್ರಗ್ಸ್ ಏನಿದೆ, ಇದನ್ನು ಅವರು ತಯಾರು ಮಾಡುವುದಿಲ್ಲ. ಬೇರೆ ಮಾನ್ಯುಫ್ಯಾಕ್ಚರ್ ಮಾಡುವವರ ಲೇಬಲ್‌ಗಳನ್ನು ಇವರು ಹಚ್ಚುತ್ತಾರೆ ಮತ್ತು ಅದನ್ನು ಮಾರಾಟ ಮಾಡುತ್ತಿದ್ದಾರೆ. ಅವರು ಇದ್ದಾಗಲೂ ಇದನ್ನು ಹಿಡಿದಿದ್ದರು ಮತ್ತು ಈಗ ಒಂದು ತಿಂಗಳ ಈಚೆಗೆ ಒಂದು ಬ್ಯಾಚ್‌ನ್ನು ಹಿಡಿದು ಇವತ್ತು ಪ್ರಾಸಿಕ್ಯೂಶನ್‌ಗೆ ಟ್ರಯಲ್ ಮಾಡುತ್ತಿದ್ದೇವೆ. ನೀವು ಹೇಳಿದ ರೀತಿಯಲ್ಲಿ ಬೇಡಿ ಹಾಕುತ್ತೇವೆ. ಅಲ್ಲಿ ಏನಾಗಿದೆ ಎಂದರೆ ಎಲ್ಲೆಲ್ಲಿ ಔಷಧಿಗಳು ಸಿಕ್ಕಿದೆಯೋ ಅಲ್ಲೇ ಕೇಸ್‌ನ್ನು ಫೈಲ್ ಮಾಡಬೇಕಾಗಿತ್ತು. ಈಗಾಗಲೇ ನಾವು ಬರೆದಿದ್ದೇವೆ. ಅಲ್ಲಿ ನಮ್ಮ ಲೋಕಲ್ ಇನ್‌ಸ್ಪೆಕ್ಟರ್‌ಗಳು ಕೆಲವು ಕೇಸುಗಳನ್ನು ರಿಜಿಸ್ಟರ್ ಮಾಡಲಿಲ್ಲ. ಅದಕ್ಕೆ ಇವತ್ತು ಹೋಮ್ ಮಿನಿಸ್ಟರ್ ಹತ್ತಿರ ಹೋಗಬೇಕೆಂದು ಹೇಳಿ ನಿನ್ನೆ ಮಾತನಾಡಿಕೊಂಡಿದ್ದೇವೆ. ಇದರ ಬಗ್ಗೆ ಚರ್ಚೆಮಾಡಿ ಅವರಿಂದ ಸೂಚನೆಗಳು ಹೋಗಲಿ. ಈಗ ಇರುವ ಪ್ರಕಾರ ಏನಾಗಿದೆ ಎಂದರೆ ಕೆಮಿಕಲ್ ಅನಾಲಿಸೆಸ್ ಮಾಡಿದ್ದೇವೆ.ಕೆಮಿಕಲ್ ಅನಾಲಿಸಿಸ್ ಮಾಡಿದ್ದರಲ್ಲಿ ಈ ರಿಯಲ್ ಮ್ಯಾನುಫ್ಯಾಕ್ಚರರ್ಸ್ ಡ್ರಗ್ಸ್‌ಗೂ ಅದಕ್ಕೂ Comparitively there is no difference. ಈಗ ಇದೆಲ್ಲಾ ನೋಡಿದ್ದರಿಂದ ಬೇರೆ ಲ್ಯಾಬರೇಟರಿಗೆ ಕಳುಹಿಸಬೇಕೇ ಎನ್ನುವಂಥ ವಿಚಾರ ಮಾಡುತ್ತಿದ್ದೇನೆ. ಆದರೂ ಕೂಡ....

ಶ್ರೀ ಸಿ. ಬೈರೇಗೌಡ :- ಟೆಕ್ನಿಕಲ್ ಇನ್‌ಗ್ರೇಡಿಯೆಂಟ್ಸ್ ಏನು ಇರುತ್ತದೆ ಅದು ರೆಪ್ಯೂಟಡ್ ಮ್ಯಾನ್ಯುಫ್ಯಾಕ್ಚರರ್ಸ್ ಅವರದ್ದರಲ್ಲೂ ಕೂಡ ಒಂದೇ ತರಹ ಇರುತ್ತದೆ. ಇದು ಬರೇ ಮನುಷ್ಯರು ಉಪಯೋಗಿಸತಕ್ಕಂಥ ಔಷಧಿಗಳು ಅಲ್ಲ. ಕೃಷಿಯಲ್ಲಿ ಉಪಯೋಗಿಸತಕ್ಕಂಥ ಔಷಧಿಗಳಲ್ಲೂ ಕೂಡ ಇದೇ ತರಹ ಇರುತ್ತದೆ. ಆದರೆ ಇದು ನಕಲಿ ಮಾಡುತ್ತಾ ಇರತಕ್ಕಂಥಾದ್ದು ಬಹಳ ಮುಖ್ಯವಾದದ್ದು. ಆ ನಕಲಿ ಮಾಡುತ್ತಿರುವವರನ್ನು ಕಾನೂನು ಪ್ರಕಾರ ಅವರಿಗೆ ಬೇಡಿ ಹಾಕಿ ಮೆರವಣಿಗೆ ಮಾಡುವುದಕ್ಕೆ ಸಾಧ್ಯವಿದೆ. ಅದನ್ನು ನಾಲ್ಕು ಕಡೆ ಮಾಡಿಸಿ. ಆಮೇಲೆ ಅದರ ಪರಿಣಾಮ ಏನಾಗುತ್ತದೆ ಎಂದು ಗೊತ್ತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :- ಇದಕ್ಕೆ ನನ್ನ ಸಂಪೂರ್ಣ ಸಹಮತಿ ಇದೆ. ಅದನ್ನು ಮಾಡುವುದಕ್ಕೆ ಈಗಾಗಲೇ ಪ್ರೋಸೆಸ್ ನಡೆಯುತ್ತಿದೆ. ಇದನ್ನು ಮಾಡಿ ಒಂದು ತಿಂಗಳಾಯಿತು. ನಮಗೆ ರಿಪೋರ್ಟ್ ಬಂದಿದೆ ಮತ್ತು ಪ್ರಾಸಿಕ್ಯೂಟ್ ಮಾಡಬೇಕು ಎಂದು ಮಾಡಿದ್ದೇವೆ. ಕೇಸ್ ರಿಜಿಸ್ಟರ್ ಆಗಿಲ್ಲ. ಸ್ವಲ್ಪ ಲೋಕಲ್ ಆಗಿ ಎಲ್ಲಾ ಡಾಕ್ಯುಮೆಂಟ್ಸ್ ಬಗ್ಗೆ ಹೇಳಿದ್ದೇವೆ. we will do that.

ಶ್ರೀ ಸಿ. ಬೈರೇಗೌಡ :- ಕೇಸು ರಿಜಿಸ್ಟರ್ ಮಾಡಿಸಿ ಬೇಡಿ ಹಾಕಿಸಿ.

ಶ್ರೀ ಕಾಗೋಡು ತಿಮ್ಮಪ್ಪ :- ಇದು ನಡೆಯುತ್ತಿರುವ ಜಾಲದ ಬಗ್ಗೆ ನಮಗೆ ಗೊತ್ತಾಗಿದೆ ಈಗ ಮಾನ್ಯ ರಾಮದಾಸ್ ಅವರು ಹೇಳಿದ್ದಾರೆ. ನೀವು ಸುಲಭವಾಗಿ ಹೇಳಿಬಿಟ್ಟಿದ್ದೀರಿ. ಮಾಮೂಲಿ ಕೊಡುತ್ತೇವೆ ಎನ್ನುವಂಥಾದ್ದು ಮತ್ತು ಹೊರಗಡೆ ಅನಧಿಕೃತವಾಗಿ ಕೊಡುವಂಥಾದ್ದು, ವೈನ್‌ಶಾಪ್‌ನವರು ಮಾಡುವುದು ಇದರ ಬಗ್ಗೆ ಎಲ್ಲಾ ಗೊತ್ತು. ಆದರೆ ಅದನ್ನು ರುಜುವಾತು ಮಾಡುವುದು ಕಷ್ಟ. ಮೊನ್ನೆ ನಮ್ಮ ಒಬ್ಬ ಜರ್ನಲಿಸ್ಟ್ ಅವರೇ....

ಶ್ರೀ ಪಿ.ಜಿ.ಆರ್. ಸಿಂಧ್ಯ :- ಈಗ ತಿಮ್ಮಪ್ಪನವರೇ, all that is right. But as a Health Minister in-charge of this Department, Drug Control Department comes under you. Drug Controller is only a certifying authority, they are not the purchasing authority. Based on his certificate ಅಲ್ಲಿ ಏನು ಖರೀದಿ ಮಾಡಿ ಬೇರೆ ಬೇರೆ ಆಸ್ಪತ್ರೆಗಳಿಗೆ, ಸಂಸ್ಥೆಗಳಿಗೆ ಹೋಗಿದೆ ಅದರ ಬಗ್ಗೆ ತಕ್ಷಣ ನೀವು ಇವತ್ತೇ ಕ್ರಮ ತೆಗೆದುಕೊಳ್ಳಬೇಕು ಎಂಬುದು ನನ್ನ ಒತ್ತಯ. ಇದರ ಬಗ್ಗೆ ನೀವು ಸ್ಪಷ್ಟವಾಗಿ ಹೇಳಿಲ್ಲ. ಅದನ್ನು ಮಾಡಬೇಕು. ಈಗ ಡ್ರಗ್ ಕಂಟ್ರೋಲರ್ ಆಫೀಸ್‌ನಲ್ಲಿ ಬಾಂಡಿಕೂಟ್ಸ್ ಇರತಕ್ಕಂಥದ್ದು ಅವರನ್ನು ಬೇಡಿ ಹಾಕಿ ಎಳೆದುಕೊಂಡು ಹೋಗತಕ್ಕಂಥಾದ್ದು, ಸ್ಪೂರಿಯಸ್ ಡ್ರಗ್ ಮ್ಯಾನ್ಯುಫ್ಯಾಕ್ಚರರ್ಸ್‌ರನ್ನು ಬೇಡಿ ಹಾಕತಕ್ಕದ್ದು ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದೀರಿ. ಗೃಹಸಚಿವರಿಗೆ ನೀವು ಹೇಳತಕ್ಕಂಥಾದ್ದು, ಸಭೆಗಳನ್ನೆಲ್ಲಾ ನೀವು ಮಾಡಿ. ಅದು ಪ್ರಚಾರಕ್ಕೆ ಆಗುತ್ತದೆ. ಆದ್ದರಿಂದ ಮುಖ್ಯವಾಗಿ ನೀವು ಮಾಡಬೇಕಾಗಿರತಕ್ಕಂಥಾದ್ದು ಏನು ಎಂದರೆ ಇನ್ಸಿಟ್ಯೂಶನ್‌ಗಳು ಸರ್ಟಿಫೈ ಮಾಡಿದ್ದರ ಮೇಲೆ ಖರೀದಿ ಮಾಡಿದ್ದಾರೆ, ಅದರ ಬಗ್ಗೆ ನೀವು ಇಪ್ಪತ್ತನಾಲ್ಕು ಗಂಟೆಯೊಳಗೆ ಕ್ರಮ ತೆಗೆದುಕೊಳ್ಳಬೇಕು ಎನ್ನುವಂಥಾದ್ದು ನನ್ನ ಒತ್ತಾಯ.

ಶ್ರೀ ಕಾಗೋಡು ತಿಮ್ಮಪ್ಪ :- ಈಗ ಅದಕ್ಕೋಸ್ಕರ ಮಾನ್ಯ ಸಿಂಧ್ಯಾ ಅವರು ಹೇಳಿದ ರೀತಿಯಲ್ಲಿ ಆ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇವೆ. ಯಾವ್ಯಾವುದು ಲಿಸ್ಟ್ ಬಂದಿದೆ ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) :- ಈಗ ನಕಲಿ ಔಷಧಿಗಳು ಶಾಸಕರ ಭವನದಲ್ಲಿ ಇರತಕ್ಕಂಥ ಆಸ್ಪತ್ರೆಗೂ ಬರುತ್ತವೆ. ಇಲ್ಲಿ ಶಾಸಕರೂ ಕೂಡ ಬಹಳಷ್ಟು ಜನ ತೆಗೆದುಕೊಳ್ಳುತ್ತಾರೆ. ಅದನ್ನಾದರೂ ನೀವು ಇನ್‌ಸ್ಪೆಕ್ಟ್ ಮಾಡಿಸಿದ್ದೀರಾ? ಆ ತರಹ ಇದ್ದರೆ ಡ್ರಗ್ ಕಂಟ್ರೋಲರ್ ಹತ್ತಿರ ಕಳುಹಿಸಿಕೊಡಿ. ಆಗ ಅಲ್ಲಿ ಏನೇನು ನಕಲಿ ಔಷಧಿಗಳು ಬಂದಿದೆ ಎಂಬುದು ಗೊತ್ತಾಗುತ್ತದೆ. ಏಕೆಂದರೆ ಇದನ್ನು ನಾವು ಎಲ್ಲೋ ಮಾಡುವುದಕ್ಕಿಂತ ಮೊದಲು ಇಲ್ಲಿಂದಲೇ ಪ್ರಾರಂಭವಾಗಲಿ. ಇದನ್ನು ಶಾಸಕರ ಭವನದಿಂದಲೇ ಪ್ರಾರಂಭ ಮಾಡುವುದು ಒಳ್ಳೆಯದೆಂದು ನಾನು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :- ಶಾಸಕರ ಭವನಕ್ಕೆ ಸಪ್ಲೈ ಮಾಡುವುದು ಬ್ರಾಂಡಟ್ ಮೆಡಿಸಿನ್ಸ್‌ನ್ನು. ಆದ್ದರಿಂದ ಇದು ಅಲ್ಲಿ ಬರಲಿಕ್ಕೆ ಸಾಧ್ಯವಿಲ್ಲ. ಆದರೂ ವಿಚಾರ ಮಾಡೋಣ. ಈಗ ನನಗೆ ಏನಾಗಿದೆ ಎಂದರೆ ಕೆಲವು ಕಡೆ ಸಪ್ಲೈ ಮಾಡಿದ್ದರಲ್ಲಿ ನಮಗೆ ಇದು ಗೊತ್ತಾಗಿದೆ. ಇನ್ನು ಜಿಲ್ಲಾ ಆಸ್ಪತ್ರೆಗಳಿಗೂ ಕೂಡ ಒಂದು ಟೀಮ್‌ನ್ನು ಕಳುಹಿಸಿ ಇನ್‌ಸ್ಪೆಕ್ಷನ್ ಮಾಡುವಂಥ ಕೆಲಸವನ್ನು ಕೂಡ ನಾವು ಮಾಡುತ್ತೇವೆ. ಏಕೆಂದರೆ ಜಿಲ್ಲಾ ಆಸ್ಪತ್ರೆಗಳಲ್ಲಿ ಇನ್ನೂ ಚೆಕ್‌ಅಫ್ ಮಾಡಿಲ್ಲ. ಅದನ್ನು ನಾವು ಮಾಡುತ್ತೇವೆ. ಆದ್ದರಿಂದ ನೀವು ಏನು ಸಲಹೆಗಳನ್ನು ಕೊಟ್ಟಿದ್ದೀರಿ, ಅದನ್ನು ನಾವು ಗಂಭೀರವಾಗಿ ತೆಗೆದುಕೊಳ್ಳುತ್ತೇವೆ. ಇದನ್ನು ಮಾಡಲೇಬೇಕಾಗಿದೆ ಮತ್ತು ನಿಯಂತ್ರಿಸಲೇಬೇಕಾಗಿದೆ. ಒಟ್ಟಿನ ಮೇಲೆ ಸಲಹೆಗಳನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ :- ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ಏನು ಹೇಳಿದ್ದಾರೆ ಎಂದರೆ ಅಂಡರ್ ವಾಲ್ಯುಯೇಶನ್ ಮಾಡಿ ಮಾರಾಟ ಮಾಡಿದ್ದರ ಬಗ್ಗೆ ವರದಿಯನ್ನು ಕೊಟ್ಟಿದ್ದೇವೆ ಎಂದು ಆದರೆ ಸರ್ಕಾರ ಏನೂಕ್ರಮ ತೆಗೆದುಕೊಂಡಿಲ್ಲ ಎನ್ನುವಂಥ ಮಾತನ್ನು ಅಲ್ಲಿಯವರೇ ನಿಮ್ಮ ಅಧಿಕಾರಿಗಳು ಲೋಕಾಯುಕ್ತದ ಮುಂದೆ ಹೇಳಿದ್ದಾರೆ. ಈ ವರದಿ ಸರ್ಕಾರಕ್ಕೆ ಯಾವಾಗ ಬಂದಿದೆ? ಈಗ ಅಂಡರ್ ವಾಲ್ಯುಯೇಶನ್ ಅಂದರೆ ಒಂದು ಮೆಡಿಸಿನ್‌ಗೆ ಏನೊಂದು ವಾಲ್ಯುಯೇಶನ್ ಇರುತ್ತದೆ, ಅದನ್ನು ಕಂಪನಿಗಳಿಗೆ ಹೋಗಿ ಒರಿಜಿನಲ್ ವ್ಯಾಲ್ಯುವನ್ನು ಏನಿದೆ ಎಂದು ತಿಳಿದುಕೊಂಡು ಬಂದಿದ್ದಾರೆ. ಆದರೆ ಸರ್ಕಾರಕ್ಕೆ ಮಾರಾಟ ಮಾಡಿದ್ದು ಸಿಕ್ಕಾಪಟ್ಟೆ ಜಾಸ್ತಿ ಇದೆ. ಇವೆರಡರಲ್ಲಿ ವ್ಯತ್ಯಾಸ ಇದೆಯೆಂದು ಸರ್ಕಾರಕ್ಕೆ ಹೇಳಿದರೆ ನೀವು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಸರ್ಕಾರದವರು ಸುಮ್ಮನೆ ಇದ್ದಾರೆ ಎಂದು ಅಧಿಕಾರಿಗಳು ಲೋಕಾಯುಕ್ತ ಎದುರುಗಡೆಯೇ ಹೇಳಿದ್ದಾರೆ. ಔಷಧಿಗಳ ದರವನ್ನು ಜಾಸ್ತಿ ಮಾಡಿ ಸರ್ಕಾರಕ್ಕೆ ಮಾರಾಟ ಮಾಡಿದ್ದಾರೆ, ಒರಿಜಿನಲ್ ರೇಟ್‌ಗೂ ಇದಕ್ಕೂ ವ್ಯತ್ಯಾಸ ಉಂಟು ಎಂದು ವರದಿ ಕೊಟ್ಟಿದ್ದಾರಂತೆ.

ಶ್ರೀ ಕಾಗೋಡು ತಿಮ್ಮಪ್ಪ :- ವರದಿಯನ್ನು ಯಾವಾಗ ಕೊಟ್ಟಿದ್ದಾರೆ?

ಶ್ರೀ ಆರಗ ಜ್ಞಾನೇಂದ್ರ :- ಸರ್ಕಾರ ಕ್ರಮ ತೆಗೆದುಕೊಂಡಿಲ್ಲ ಎಂದು ನಿಮ್ಮ ಅಧಿಕಾರಿಗಳೇ ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :- ಯಾರು ವರದಿ ಕೊಟ್ಟಿದ್ದಾರೆ?

ಶ್ರೀ ಆರಗ ಜ್ಞಾನೇಂದ್ರ :- ಔಷಧ ನಿಯಂತ್ರಣ ಅಧಿಕಾರಿಗಳು ಎರಡರ ವ್ಯತ್ಯಾಸವನ್ನು ಹೇಳಿದ್ದಾರೆ. ಒರಿಜಿನಲ್ ಔಷಧಿ ಕಂಪನಿಗೆ ಹೋಗಿ ರೇಟ್‌ನ್ನು ಅವರು ತೆಗೆದುಕೊಂಡು

ಬಂದಿದ್ದಾರೆ. ಆಮೇಲೆ ಸರ್ಕಾರಕ್ಕೆ ಮಾರಿದ್ದಕ್ಕೂ ಮತ್ತು ಬೇಕಾಗಿದ್ದಂಥಾದ್ದನ್ನೂ ತಿಳಿದುಕೊಂಡಿದ್ದಾರೆ. ಅವೆರಡರ ಮಧ್ಯೆ ಕೋಟಿಗಟ್ಟಲೆ ವ್ಯತ್ಯಾಸ ಇದೆಯೆಂದು ನಿಮಗೆ ಅವರು ವರದಿಯನ್ನು ಕೊಟ್ಟಿದ್ದಾರೆ. ಆ ವರದಿ ನಿಮಗೆ ಯಾವಾಗ ಬಂದಿದೆ?

ಅಧ್ಯಕ್ಷರು :- ಇದು ವಿವರವಾಗಿ ಅಡ್ಮಿಟ್ ಆದಮೇಲೆ ನೋಡೋಣ.

ಡಾ॥ ಎ.ಬಿ. ಮಾಲಕರೆಡ್ಡಿ :- ವರದಿ ಬಂದಿದ್ದು ನಿಜ. ಸರ್ಕಾರ ಅವರ ವರದಿಯ ಮೇಲೆ ಪ್ರಾಸಿಕ್ಯೂಟ್ ಮಾಡುವಂಥ ತೀರ್ಮಾನ ತೆಗೆದುಕೊಂಡಿರುವುದೂ ಕೂಡ ನಿಜ. "ನೋವಾ" ಎಂಬುದು ಒಂದು ಇನ್‌ಸುಲಿನ್. ಅದು ಬಹಳ ಸೂಕ್ಷ್ಮವಾದ ಔಷಧಿ. ಡಯಾಬಿಟೀಸ್ ಕಾಯಿಲೆಗೆ ಅದನ್ನು ಕೊಡುತ್ತಾರೆ. ಅದರ ವಿರುದ್ಧವಾಗಿ ಡೆಪ್ಯುಟಿ ಡ್ರಗ್ ಕಂಟ್ರೋಲರ್ ಅವರು ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಇದರ ಮೇಲೆ ಪ್ರಾಸಿಕ್ಯೂಶನ್ ಮಾಡಬೇಕಾಗುತ್ತದೆ ಎಂದು ಹೇಳಿದ್ದಾರೆ. ತಕ್ಷಣ ಸರ್ಕಾರ ಪ್ರಾಸಿಕ್ಯೂಶನ್ ಮಾಡಿ ಎಂದು ಹೇಳಿ ಅನುಮತಿಯನ್ನು ಕೊಟ್ಟಿದ್ದೇವೆ.

ಶ್ರೀ ಆರಗ ಜ್ಞಾನೇಂದ್ರ :- ಅವರು ಹೇಳುತ್ತಾರೆ ಏನೆಂದರೆ ಅನಾವಶ್ಯಕವಾಗಿ ಆಪಾದನೆ ಮಾಡುತ್ತಿದ್ದಾರೆ ಎಂದು. ಏಕೆಂದರೆ ಈಗ ಎಲ್ಲವನ್ನೂ ಅನುಮಾನದಿಂದ ನೋಡುವಹಾಗೆ ಮಾಡಿಬಿಟ್ಟಿದ್ದಾರೆ. ಆ ದೃಷ್ಟಿಯಿಂದ ವರದಿ ಬಂದಂಥ ತಾರೀಖು ಯಾವುದು ಎಂದು ನಾನು ಕೇಳುತ್ತಿದ್ದೇನೆ. ಸರ್ಕಾರದಿಂದ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ? ಎಷ್ಟು ಕೋಟಿ ರೂಪಾಯಿಗಳ ವ್ಯತ್ಯಾಸ ಇರುವಾಗ......

ಶ್ರೀ ಕಾಗೋಡು ತಿಮ್ಮಪ್ಪ :- ನಾನು ವಿವರಗಳನ್ನು ತರಿಸುತ್ತೇನೆ. ಅದರ ಬಗ್ಗೆ ಮುಚ್ಚಿಡುವ ಪ್ರಶ್ನೆಯೇ ಇಲ್ಲ. ಆದು ಬಂದಿದ್ದರೆ ಅದರ ಪ್ರಕಾರ ಏನು ಸಜೆಸ್ಟ್ ಮಾಡಿದ್ದಾರೆ ಆ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಹಂಪನಗೌಡ ಬಾದರ್ಲಿ :- ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಸ್ವಲ್ಪ ಹೇಳಿ.

ಅಧ್ಯಕ್ಷರು :- ವಿವರವಾಗಿ ಸ್ಟೇಟ್‌ಮೆಂಟ್ ಕೊಡುತ್ತೇವೆ ಎಂದು ಅವರು ಹೇಳಿದ್ದಾರೆ.

ಶ್ರೀ ಎನ್. ಯೋಗೀಶ್ ಭಟ್ :- ಹನ್ನೊಂದು ತಿಂಗಳ ಹಿಂದೆ ದಾಖಲಾಗಿದೆ. ಅದಕ್ಕೆ ಸಂಬಂಧಪಟ್ಟಂತೆ ಡ್ರಗ್ ಕಂಟ್ರೋಲರ್ ಇಲಾಖೆಯಿಂದ ಇಷ್ಟು ನಕಲಿ ಔಷಧಿಗಳ ಬಗ್ಗೆ....

ಅಧ್ಯಕ್ಷರು :- ಇದಕ್ಕೆ ಅವರಲ್ಲಿ ಉತ್ತರ ಇರಬೇಕಲ್ಲಾ? ಇದ್ದಕ್ಕಿದ್ದ ಹಾಗೆ ಎದ್ದು ನಿಂತು ಹೇಳಿದರೆ ಹೇಗೆ?

ಶ್ರೀ ಆರಗ ಜ್ಞಾನೇಂದ್ರ :- ಅಧ್ಯಕ್ಷರೇ, ಇದು ನಿನ್ನೆ ದಿವಸ ನಡೆದಿರುವ ಪ್ರಕರಣ ಇಬ್ಬರು ಮಾನ್ಯ ಮಂತ್ರಿಗಳಿದ್ದಾರೆ. ಸಂಬಂಧಪಟ್ಟವರು ಮಾತನಾಡಿಕೊಂಡು ಇವತ್ತು ಹೇಗಿದ್ದರೂ ಶಾಸನಸಭೆಯಲ್ಲಿ ಬರುತ್ತದೆ ಎನ್ನುವಂಥಾದ್ದು ಗೊತ್ತಿದ್ದರೂ ಕೂಡ ಅವರಿಗೆ ಈಗ ಏನೂ ಗೊತ್ತಿಲ್ಲ ಎಂದು ತಾವು ಹೇಳುವುದು ಸರಿಯಲ್ಲ. ಇದು ಪತ್ರಿಕೆಗಳಲ್ಲಿ ಬಂದಿದೆ. ಅವರು ಅಧಿಕಾರಿಗಳನ್ನು ಕರೆಸಿ ಈಗಾಗಲೇ ಮಾತನಾಡಿರುತ್ತಾರೆ. ಅವರಿಗೂ ಬಹಳ ಜವಾಬ್ದಾರಿ ಇದೆ. ಅವರು ಅದನ್ನು ಮಾಡಿರುತ್ತಾರೆ. ಅವರಿಗೆ ಹೇಳುವುದಕ್ಕೆ ತಾವು ಅವಕಾಶ ಕೊಡಿ.

ಅಧ್ಯಕ್ಷರು :- ಉತ್ತರ ಇರಬೇಕಲ್ಲಾ. ನೀವು ,all of a sudeen ಎದ್ದು ಪ್ರಶ್ನೆ ಕೇಳಿದರೆ, ಮಾನ್ಯ ಯೋಗಿಶ್ ಭಟ್ಟರು ಹೊಸ ವಿಷಯ ಹೇಳಿದ್ದಾರೆ. ಅವರು ಎನ್‌ಕ್ವೈರಿ ಮಾಡಬೇಕಲ್ಲಾ.

ಶ್ರೀ ಜಗದೀಶ್ ಶೆಟ್ಟರ್ :- ಇದು ಬಹಳ ಹಳೆಯ ವಿಷಯ.

ಶ್ರೀ ಆರಗ ಜ್ಞಾನೇಂದ್ರ :- ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳುವುದಕ್ಕೆ ಹೇಗೆ ಬರುತ್ತದೆ?

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು :- ನಾಳೆ ಉತ್ತರ ಹೇಳುತ್ತೇನೆಂದು ಹೇಳಿದ್ದಾರಲ್ಲ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಇಲ್ಲಿ ಇವತ್ತು ಚರ್ಚೆಯಾಯಿತು. ಮುಂದೆ ಸರ್ಕಾರದಿಂದ ನಿರ್ಣಯ, ನಾವು ಕೇಳುತ್ತಿರುವುದು ನ್ಯಾಯಾಂಗ ತನಿಖೆ. ನಾನು ಇಲ್ಲಿ ಒಂದು ಪಾಯಿಂಟ್ ಇನ್‌ಸಿಸ್ಟ್ ಮಾಡುತ್ತಿದ್ದೇನೆ. ಆಗಲೇ ನಮ್ಮ ಸದಸ್ಯರಾದ ಶ್ರೀ ಜಯಪ್ರಕಾಶ್ ಹೆಗಡೆಯವರು ಮಾತನಾಡುವಾಗ ಒಂದು ಪಾಯಿಂಟ್ ರೇಸ್ ಮಾಡಿದರು, ಅವರು ಬಹಳ ರೆಲಿವೆಂಟ್ ಪಾಯಿಂಟ್ ರೇಸ್ಡ್ ಮಾಡಿದರು. ನಾನು ಈಗ ಇನ್‌ಸಿಸ್ಟ್ ಮಾಡುತ್ತಿರುವುದು ನ್ಯಾಯಾಂಗ ತನಿಖೆ. ಇವತ್ತು ಡಾಕ್ಟರ್ ಮಲಕ ರೆಡ್ಡಿಯವರ ಬಗ್ಗೆ ನಮಗೆ ಒಳ್ಳೆಯ ಅಭಿಪ್ರಾಯವಿದೆ. ನಾವೆಲ್ಲರೂ ಈ ಅಭಿಪ್ರಾಯವನ್ನು ಎಕ್ಸ್‌ಪ್ರೆಸ್ ಮಾಡಿದ್ದೇವೆ. ಇಲ್ಲಿ ಬರುವಂಥಾದ್ದು ಪ್ರಶ್ನೆ. ಇವತ್ತು ಡಾಕ್ಟರ್ ಮಲಕರೆಡ್ಡಿಯವರ ಹೆಸರು ಬಂತು. ಇವತ್ತು ನೇರವಾಗಿ ಅವರ ಹೆಸರು ಬಂದಿದೆ. ಹಿಂದೆ ಬೇರೆ ಬೇರೆ ಪ್ರಕರಣಗಲ್ಲಿ ಮಂತ್ರಿಗಳ ಹೆಸರು ಬರುತ್ತಿರಲಿಲ್ಲ. ಇವತ್ತು ನೇರವಾಗಿ ಬಂದಿದೆ. ಮತ್ತು ಇನ್ನೊಂದು ವಿಷಯವನ್ನು ಮಾನ್ಯ ಸದಸ್ಯರಾದ ಜಯಪ್ರಕಾಶ್ ಹೆಗಡೆಯವರು ಹೇಳಿದರು ಡಾಕ್ಟರ್ ಸುದರ್ಶನ್‌ರವರು ಟಿ ವಿ ಇಂಟರ್‌ವ್ಯೂನಲ್ಲಿ ನೇರವಾಗಿ ಅವರ ಮಾತುಗಳಲ್ಲಿ ಡಾಕ್ಟರ್ ಮಲಕರೆಡ್ಡಿಯವರ ಹೆಸರು ಹೇಳಿದ್ದಾರೆ. ಹಿಂದೆ ಈ ರೀತಿ ಯಾವಾಗಲೂ ಆಗಿರಲಿಲ್ಲ. ಇಲ್ಲಿ ಏನಾಗಿದೆ ಮಾನ್ಯ ಅಧ್ಯಕ್ಷರೇ, ಹಾಗಾದರೆ ಇಲ್ಲಿ ಡಾಕ್ಟರ್ ಮಲಕರೆಡ್ಡಿಯವರು ತಪ್ಪು ಮಾಡಿರಬೇಕು ಇಲ್ಲದಿದ್ದರೆ ಡಾಕ್ಟರ್ ಸುದರ್ಶನ್‌ರವರು ತಪ್ಪು ಮಾಡಿರಬೇಕು. ಅವರು ಸುಳ್ಳು ಹೇಳಿರಬೇಕು ಅಥವಾ ಇವರು ತಪ್ಪು ಮಾಡಿರಬೇಕು. ಇಲ್ಲಿ ಬರುತ್ತದೆ. ಪ್ರಶ್ನೆ ಇಲ್ಲಿ ನಾನು ಇನ್‌ಸಿಸ್ಟ್ ಮಾಡುತ್ತಿರುವುದು ನ್ಯಾಯಾಂಗ ತನಿಖೆ ಮಾಡಬೇಕೆಂದು ಕೇಳುತ್ತಿದ್ದೇನೆ. ಮತ್ತು ಲೋಕಾಯುಕ್ತರಿಗೆ ತಮ್ಮದೇ ಆದಂತಹ ಇತಿಮಿತಿಗಳು ಇವೆ. ಸಿಎಂಸಿ ಹಗರಣದ್ದು ಇದುವರೆಗೂ ಏನು ಮಾಡಿದಿರಿ? ಅದು ಎಲ್ಲಿಗೆ ಬಂತು? ಅವರು ಮಾಡುವಂತಹ ಕೆಲಸದ ಬಗ್ಗೆ ಧಾಳಿ ಮಾಡುವ ಬಗ್ಗೆ ನಾವು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದೇವೆ. ಆದರೆ ಅಂತಿಮವಾಗಿ ಯಾವ ಫೈಲ್ ಕೊನೆಯ ಹಂತಕ್ಕೆ ಬಂದಿವೆ. ಇವತ್ತು ಮೇಲ್ನೋಟಕ್ಕೆ ಪತ್ರಿಕೆಯಲ್ಲಿ ವರದಿಗಳು ಬಂದಿವೆ. ಸರ್ಕಾರ ಇವತ್ತು ಎಷ್ಟು ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೀರಿ? ಮೇಲ್ನೋಟಕ್ಕೆ ಇವತ್ತು ಮಾನ್ಯ ಮಂತ್ರಿಗಳ ಗಮನಕ್ಕೆ ಇಂತಹ ಒಬ್ಬ ಅಧಿಕಾರಿ ತಪ್ಪು ಮಾಡಿದ್ದಾರೆ, ಡ್ರಗ್ಸ್ ಕಂಟ್ರೋಲರ್ ಇವತ್ತು ಮಲಗಿದ್ದಕ್ಕೆ ಈ ಎಲ್ಲಾ ಹಗರಣಗಳು ಆಗಿವೆ. ಹಾಗಾದರೆ ಅವರನ್ನು ತಾವು ತಕ್ಷಣ ಸಸ್ಪೆಂಡ್ ಮಾಡಿದ್ದೀರಾ? ಇದು 5-6 ವರ್ಷಗಳಿಂದ ನಡೆದುಕೊಂಡು ಬಂದಿದೆ. ವರ್ಗಾವಣೆಗೆ ಕೆಲವರು ರೊಕ್ಕ ಕೊಟ್ಟು ಹಾಕಿಕೊಂಡಿದ್ದಾರೆಂದು ಬಂದಿದೆ. ಹಾಗಾದರೆ

ತಾವು ಎಷ್ಟು ಜನರನ್ನು ಸಸ್ಪೆಂಡ್ ಮಾಡಿದ್ದೀರಿ? ಅಂದರೆ ಇದರಲ್ಲಿ ಎಲ್ಲರ ಇನ್‌ವಾಲ್ವ್‌ಮೆಂಟ್ ಇದೆ. ಅದಕ್ಕಾಗಿ ನಾವು ಇಲ್ಲಿ ಏನು ಕೇಳುತ್ತಿದ್ದೇವೆ ಅಂದರೆ ನ್ಯಾಯಾಂಗ ತನಿಖೆಯಾಗಬೇಕು. ಇವತ್ತು ಯಾವ ಮಂತ್ರಿಗಳ ಮೇಲೆ ಆಪಾದನೆ ಬಂದಿದೆ. ಮಾನ್ಯ ಸುದರ್ಶನ್‌ರವರು ಓಪನ್ ಆಗಿ ಹೇಳುತ್ತಾರೆ ಅಂದರೆ ಹಾಗಾದರೆ ನನಗೆ ಒಂದು ಸಂಶಯ ಏನು ಬರುತ್ತದೆ ಅಂದರೆ ಹಿಂದಕ್ಕೆ ಡಾಕ್ಟರ್ ಮಲಕ ರೆಡ್ಡಿಯವರು ಒಂದು ಸಭೆಯಲ್ಲಿ ಮಾನ್ಯ ಲೋಕಾಯುಕ್ತರ ಬಗ್ಗೆ ಕಾಮೆಂಟ್ಸ್ ಮಾಡಿದ್ದು, ಅದರ ಬಗ್ಗೆ ಒಂದಷ್ಟು ಘರ್ಷಣೆ ಚಾಲೂ ಆಯಿತು. ಹಾಗಾದರೆ ಡಾಕ್ಟರ್ ಮಾಲರೆಡ್ಡಿಯವರನ್ನು ಏನಾದರೂ ಟ್ರಾಫ್ ಮಾಡಲು ಹೋಗುತ್ತಿದ್ದಾರೆಯೇ? ಡಾಕ್ಟರ್ ಸುದರ್ಶನ್‌ರವರ ಬಾಯಿಯಿಂದ ನೇರವಾಗಿ ಮಾನ್ಯ ಮಂತ್ರಿಗಳ ಹೆಸರು ಬರುತ್ತಿದೆ. ಹಾಗಾದರೆ ಡಾಕ್ಟರ್ ಮಾಲಕರೆಡ್ಡಿಯವರನ್ನೇ ನೇರವಾಗಿ ವಿಕ್ಟಿಮೈಜ್ ಮಾಡುವುದಕ್ಕೆ ಹೊರಟಿದ್ದಾರೆಯೇ? ಇದರ ಬಗ್ಗೆ ಎನ್‌ಕ್ವೈರಿ ಆಗಬೇಕಾಗುತ್ತದೆ. ಇವತ್ತು ಮಾನ್ಯ ಭೈರೇಗೌಡರು ಹೇಳಿದರು. ಮಾನ್ಯ ಸಿಂಧ್ಯಾರವರು ಹೇಳಿದರು, ಇನ್ನಿತರರು ಹೇಳಿದರು. ಮಾನ್ಯಮಂತ್ರಿಗಳಾದ ಮಾಲಕರೆಡ್ಡಿಯವರ ಬಗ್ಗೆ ಒಂದು ಒಳ್ಳೆಯ ಅಭಿಪ್ರಾಯವಿದ್ದಂತಹ ಸಂದರ್ಭದಲ್ಲಿ ಡಾಕ್ಟರ್ ಸುದರ್ಶನ್‌ರವರ ಬಾಯಿಂದ ಯಾವ ಮಂತ್ರಿಗಳ ಹೆಸರೂ ಬಂದಿಲ್ಲ. ಇವತ್ತು ಅವರ ಬಾಯಿಂದ ಮಾಲಕರೆಡ್ಡಿಯವರ ಹೆಸರು ಬರುತ್ತದೆ ಅಂದರೆ ಇದರಲ್ಲಿ ಏನಾದರೂ ಟ್ರಾಪ್ ಇದೆಯೇ? ಏಕೆಂದರೆ ಈ ಹಿಂದೆ ಒಂದು ಸಂಘರ್ಷವಾಗಿದೆ ಮಾನ್ಯ ಮಲಕರೆಡ್ಡಿಯವರಿಗೂ ಮತ್ತು ಲೋಕಾಯುಕ್ತರಿಗೂ, ಈ ಒಂದು ಹಿನ್ನೆಲೆ ಬಹಳ ಇದೆ ಇದರಲ್ಲಿ. ಅದಕ್ಕಾಗಿಯೇ ಜ್ಯುಡಿಷಿಯಲ್ ಎನ್‌ಕ್ವೈರಿಗೆ ನಾನು ಇನ್‌ಸಿಸ್ಟ್ ಮಾಡುತ್ತಿದ್ದೇನೆ. ಅದರ ಬಗ್ಗೆ ಸರ್ಕಾರ ಏನೂ ಹೇಳಲಿಲ್ಲ. ನ್ಯಾಯಾಂಗ ತನಿಖೆ ಬಗ್ಗೆ ಒಂದು ಶಬ್ದ ಹೇಳಲಿಲ್ಲ. ಅದಕ್ಕೆ ಮಾನ್ಯ ಮಂತ್ರಿಗಳು ಹೇಳಬೇಕಾಗುತ್ತದೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೂ ಇದರ ಜವಾಬ್ದಾರಿ ಇದೆ. ಅವರು ಹೇಳಲಿ ನ್ಯಾಯಾಂಗ ತನಿಖೆ ಮಾಡುತ್ತೇವೆಂದು. ಆಗಲೇ ಮಾನ್ಯ ಸದಸ್ಯರಾದ ರಾಮದಾಸ್‌ರವರು ಕೆಲವೊಂದು ವಿಷಯಗಳು ಎತ್ತಿದಾಗ ನಾವು ಯಾವುದೇ ಒಂದು ಎನ್‌ಕ್ವೈರಿಗೆ ತಯಾರಾಗಿದ್ದೇವೆ ಎನ್ನುವ ಮಾತನ್ನು ಹೇಳಿದರು. ಹಾಗಾದರೆ ಈಗ ಇದಕ್ಕೆ ತಯಾರಾಗಿ ಇದರ ಹಿನ್ನೆಲೆ ಇದರಲ್ಲಿ ಬರಬೇಕಾಗುತ್ತದೆ. ಅದಕ್ಕೆ ನಾನು ನ್ಯಾಯಾಂಗ ತನಿಖೆಗೆ ಇನ್‌ಸಿಸ್ಟ್ ಮಾಡುತ್ತಿದ್ದೇನೆ.

ಶ್ರೀ ಎ.ಬಿ ಪಾಟೀಲ್ :– ಮಾನ್ಯ ಅಧ್ಯಕ್ಷರೇ, ಡಾಕ್ಟರ್ ಸುದರ್ಶನ್‌ಗೆ ಈಗ ಯಾವ ಅಧಿಕಾರ ಕೊಟ್ಟಿದ್ದೀರಿ? ಸರ್ಕಾರ ಅದನ್ನು ಹೇಳಬೇಕಲ್ಲಾ. ಅದನ್ನೇ ಹೇಳುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :– ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಹೆಗಡೆಯವರು ಹೇಳಿದರು. ಲೋಕಾಯುಕ್ತರ ಜೊತೆಯಲ್ಲಿ ಸಹಕಾರ ಮಾಡತಕ್ಕಂಥ ಒಬ್ಬ ವ್ಯಕ್ತಿಯ ವಿಚಾರದಲ್ಲಿ ಪ್ರಸ್ತಾಪ ಮಾಡಿದರು. ಈ ಹಂತದಲ್ಲಿ ನಾನು ನನ್ನ ಓಪಿನಿಯನ್ ಅನ್ನು ಹೇಳುವುದಕ್ಕೆ ಬರುವುದಿಲ್ಲ. ಏಕೆಂದರೆ ನಾನು ಲೀಗಲ್ ಆಗಿ ಪರಿಶೀಲನೆ ಮಾಡಿ ಅವರಿಗೆ ಇರುವ ಪವರ್ಸ್ ಅಂಡ್ ಪಂಕನ್ಸ್ ಏನು ಎಂದು ತಿಳಿದುಕೊಂಡು ಹೇಳಬೇಕಾಗುತ್ತದೆ. ಮತ್ತು ಇದು ಡಿ.ಪಿ.ಎ.ಆರ್.ಗೆ ಬರುವುದರಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಿರುವ ವಿಚಾರ ಆದ್ದರಿಂದ ತಾವು ಪ್ರಸ್ತಾಪ ಮಾಡಿದ ವಿಚಾರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಇದರಬಗ್ಗೆ ಒಂದು ಕ್ಲಾರಿಫಿಕೇಶನ್ ಕೊಡಬೇಕಾದಂತಹ ಅಗತ್ಯ ಇದೆ. ಏಕೆಂದರೆ ನನ್ನದೇ ಆದಂತಹ ಒಂದು

ಅಭಿಪ್ರಾಯವನ್ನು ಇಲ್ಲಿ ನಾನು ಹೇಳುವುದಕ್ಕೆ ಬರುವುದಿಲ್ಲ ಆಮೇಲೆ ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳಿದರಲ್ಲಾ ನ್ಯಾಯಾಂಗ ತನಿಖೆ ನ್ಯಾಯಾಂಗ ತನಿಖೆ ಎಂದು ಈ ಹಂತದಲ್ಲಿ ನ್ಯಾಯಾಂಗ ತನಿಖೆ ಮಾಡಬೇಕಾದ ಅಗತ್ಯ ಇಲ್ಲ. ಆದಕ್ಕೆ ಕಾರಣವೇನೆಂದರೆ ಮಾನ್ಯ ಲೋಕಾಯುಕ್ತರೂ ಕೂಡ ಅವರೊಬ್ಬ ನಿವೃತ್ತ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿದ್ದವರು ಅವರ ಮೂಲಕವೇ ಈಗ ಮಾಡುತ್ತಿದ್ದಾರೆ. ಅವರು ಕೊಡುವಂತಹ ಅಭಿಪ್ರಾಯಕ್ಕೆ ನಾವು ಸಂಪೂರ್ಣ ಮನ್ನಣೆಯನ್ನು ಕೊಡುತ್ತೇವೆ, ಅದರಿಂದ ತಪ್ಪಿಸಿಕೊಂಡು ಹೋಗುವುದಿಲ್ಲ. ಅವರು ಏನು ಅಭಿಪ್ರಾಯ ಕೊಡುತ್ತಾರೋ ಆ ಬಗ್ಗೆ ನಾವು ಕಾನೂನು ಕ್ರಮ ಕೈಗೊಂಡೆ ಕೈಗೊಳ್ಳುತ್ತೇವೆ. ಬೇಗ ಮಾಡಿ ಎಂದು ಹೇಳುತ್ತೇನೆ, ಅದರ ಜೊತೆ ನಮ್ಮ ಇಲಾಖೆ ವತಿಯಿಂದಲೂ ಕೂಡ ಮತ್ತೊಂದು ತನಿಖೆಯನ್ನು ಕೂಡ ಮಾಡುವುದಕ್ಕೆ ಹೇಳಿದ್ದೇನೆ. ಏಕೆಂದರೆ ಕೆಲವು ಆಪಾದನೆಗಳು ಬಂದಿದ್ದರಿಂದ, ಆ ಆಪಾದನೆಗಳನ್ನೆಲ್ಲಾ ನಮ್ಮ ಹೆಲ್ತ್ ಕಮೀಷನರ್ ಅವರಿಗೆ ಅದನ್ನು ವಹಿಸಿಕೊಟ್ಟು ಬೇಗ ವಿಚಾರಣೆ ಮಾಡಿ ವರದಿಯನ್ನು ತರಿಸುವುದಕ್ಕೆ ಹೇಳಿದ್ದೇನೆ. ಏಕೆಂದರೆ ಮಾನ್ಯ ಸದಸ್ಯರಾದ ಭೈರೇಗೌಡರು ಮಾತನಾಡುತ್ತಾ ಹೇಳಿದರು. ಇದರ ಹಿನ್ನೆಲೆ ಏನು ಇದೆ ಎಂದು. ಇದನ್ನು ಸ್ವಲ್ಪ ವಿಚಾರ ಮಾಡಬೇಕೆಂದು ನಾನು ಈ ಹಂತದಲ್ಲಿ ಇದನ್ನು ಹೇಳಬಾರದು ಎಂದು, ಏಕೆಂದರೆ ಎನ್‌ಕ್ವೈರಿಗೆ ಪ್ರಿಜುಡೀಸ್ ಆಗಬಹುದು. ಆದ್ದರಿಂದ ತಮ್ಮ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ಗಮನದಲ್ಲಿಟ್ಟುಕೊಂಡು ಲೋಕಾಯುಕ್ತರ ವರದಿಯನ್ನು ಬಹಳ ಶೀಘ್ರವಾಗಿ ತರಿಸಿಕೊಳ್ಳುವಂತಹ ಪ್ರಯತ್ನ ಮಾಡುತ್ತೇವೆ. ಜೊತೆಗೆ ಇಲಾಖಾ ವತಿಯಿಂದಲೂ ಕೂಡ ತನಿಖೆ ಮಾಡಿ ತಮ್ಮ ಸಲಹೆ ಏನು ಇದೆಯಲ್ಲ ಅದರಂತೆ ಇದರಲ್ಲಿ ಏನು ಇರಬಹುದು ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ ಈ ಸದನಕ್ಕೆ ನಾನು ಮತ್ತೆ ಹೇಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು :- ಇದಕ್ಕೆ ಕೊನೆಯೇ ಇಲ್ಲವೇ? ಇದು ಪ್ರಿಲಿಮಿನರಿ ಸಬ್‌ಮಿಷನ್ ಎಕ್ಸಾಮಿನೇಶನ್, ಕ್ರಾಸ್ ಎಕ್ಸಾಮಿನೇಶನ್....

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಮಾನ್ಯ ಸಚಿವರು ಹೇಳಿದರು ಲೋಕಾಯುಕ್ತರ ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಇವತ್ತು ಲೋಕಾಯುಕ್ತ ಬಿಲ್ ಇಂಟರ್‌ಡ್ಯೂಸ್ ಆಗಿಲ್ಲ. ಅದರ ಬಗ್ಗೆ ಚರ್ಚೆಯಾಗಿಲ್ಲ. ಲೋಕಾಯುಕ್ತಕ್ಕೆ ಸಂಪೂರ್ಣ ಅಧಿಕಾರ ಕೊಟ್ಟಿಲ್ಲ. ಒಂದು ವೇಳೆ ಅಧಿಕಾರವನ್ನು ಕೊಟ್ಟರೂ ಮಂತ್ರಿಗಳು, ಅವರ ಕಾರ್ಯದರ್ಶಿಗಳು ಅವರ ಕೈ ಕೆಳಗೆ ಬರುವುದಿಲ್ಲ. ತನಿಖೆ ಆಗಲಿಕ್ಕೆ. ಆದ್ದರಿಂದ....

ಅಧ್ಯಕ್ಷರು :- ತಾವು ಎಲ್ಲಿಂದಲೋ ಎಲ್ಲೋ ಹೋದಿರಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಅದೆಲ್ಲಾ ಆಗಬೇಕಾಗುತ್ತದೆ. ಆ ಬಿಲ್ ವಿತ್‌ಡ್ರಾ ಮಾಡಿದ್ದಾರೆ.

ಅಧ್ಯಕ್ಷರು :- ನಾವು ಆ ಬಿಲ್ ಬಗ್ಗೆ ಇನ್ನೂ ಚರ್ಚೆಯೇ ಮಾಡಿಲ್ಲ. ಪಾಸ್ ಮಾಡಿಲ್ಲ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :- ಈ ಅನುಮಾನಗಳು ಹೋಗಬೇಕಾದರೆ ನಾನು ಹೇಳಿದ ಹಾಗೆ ನಾನು ಏನು ಸಲಹೆ ಕೊಟ್ಟಿದ್ದೇನೆ ಅದರ ಬಗ್ಗೆ ತಾವು ಸ್ವಲ್ಪ ಹೆಚ್ಚು ಗಮನಹರಿಸಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ನಾವು ನ್ಯಾಯಾಂಗ ತನಿಖೆಗೆ ಇನ್‌ಸಿಸ್ಟ್ ಮಾಡುತ್ತಿದ್ದೇವೆ. ಏಕೆಂದರೆ ಇವತ್ತು ಲೋಕಾಯುಕ್ತರು ಸಂಪೂರ್ಣವಾಗಿ ಎನ್‌ಕ್ವೈರಿ ಮಾಡುವುದಕ್ಕಾಗುವುದಿಲ್ಲ ಎನ್ನುವುದೇ ನಮ್ಮ ಸ್ಟ್ಯಾಂಡ್ ಇದೆ. ಇದು ಬಹಳ ಮುಖ್ಯವಾದುದು. ಡಾಕ್ಟರ್ ಸುದರ್ಶನ್ ರವರದ್ದು ಕಾಂಟ್ರವರ್ಷಿಯಲ್ ಸ್ಟೇಟ್‌ಮೆಂಟ್ ಬಂದಿದೆ. ಮತ್ತು ಒಬ್ಬ ಮಂತ್ರಿಗಳ ಹೆಸರು ಬಂದಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳ ಜವಾಬ್ದಾರಿಯು ಇದರಲ್ಲಿದೆ. ಹೀಗಾಗಿ ಕಳೆದ ಹಲವಾರು ವರ್ಷಗಳಿಂದ ಹಗರಣ ನಡೆಯುತ್ತಾ ಬಂದಿದೆ. 300 ಕೋಟಿ ರೂಪಾಯಿಗಳದ್ದು ಅದಕ್ಕೆ ನ್ಯಾಯಾಂಗ ತನಿಖೆಯನ್ನು ಇನ್‌ಸಿಸ್ಟ್ ಮಾಡುತ್ತಿದ್ದೇವೆ. ಸರ್ಕಾರ ಅದಕ್ಕೆ ಒಪ್ಪಬೇಕಾಗುತ್ತದೆ.

ಅಧ್ಯಕ್ಷರು :- ಅವರು ಒಪ್ಪುವುದಕ್ಕಾಗುವುದಿಲ್ಲವೆಂದು ಹೇಳಿದರಲ್ಲಾ ಮಾನ್ಯ ಕಾಗೋಡು ತಿಮ್ಮಪ್ಪನವರು.

ಶ್ರೀ ಜಗದೀಶ್ ಶೆಟ್ಟರ್ :- ಹಾಗಾದರೆ ಈ ಹಗರಣವನ್ನು ಮುಚ್ಚಿ ಹಾಕಲಿಕ್ಕೆ ಹೊರಟಿದ್ದಾರೆ ಶ್ರೀ ಆರಗ ಜ್ಞಾನೇಂದ್ರ ನ್ಯಾಯಾಂಗ ತನಿಖೆ ನಡೆಸಲು ಏತಕ್ಕಾಗಿ ಹೆದರುತ್ತಾರೆ?...... (ಬಿಜೆಪಿ ಪಕ್ಷದ ಎಲ್ಲಾ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡಲು ಪ್ರಾರಂಭಿಸಿದರು)

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೇ, ಸಿ.ಎಂ.ಸಿ ಹಗರಣವನ್ನು ಯಾವ ರೀತಿ ಮುಚ್ಚಿ ಹಾಕಿದ್ದಾರೆ ಅದೇ ರೀತಿ ಈ ಹಗರಣವನ್ನು ಮುಚ್ಚಿ ಹಾಕುತ್ತಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ :- ನ್ಯಾಯಾಂಗ ತನಿಖೆಗೆ ನೀವು ಹೆದರುವುದು ಏಕೆ?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೇ, ಹಗರಣವನ್ನು ಮುಚ್ಚಿ ಹಾಕಲು ನನಗೆ ಅವರು ಯಾರೂ ನಮ್ಮ ಸೋದರ ಮಾವನ ಮಕ್ಕಳಲ್ಲ. ಯಾವೋನು ಇದ್ದರೂ ಒಳಗೆ ಹಾಕುತ್ತೇನೆ. ತಿಳಿದುಕೊಳ್ಳಿ. ನಾವು ಬಹಳ ಪ್ರಾಮಾಣಿಕರರಾಗಿದ್ದೇವೆ. ಏನು ಮುಚ್ಚಿ ಹಾಕುವುದು? ಏನು ಮುಚ್ಚಿ ಹಾಕುವುದು? ಏಕೆ ಮುಚ್ಚಿ ಹಾಕಬೇಕು?

Sri Jagadish Shettar :- We inssist for Judicial enquiry..

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ :- ಬ್ಲಾಕ್‌ಲಿಸ್ಟ್‌ನಲ್ಲಿ ಇರುವಂತಹ ಕಂಪನಿಗಳಿಂದಲೂ ಪರ್ಚೇಸ್ ಮಾಡಿದ್ದಾರೆ ಆದ್ದರಿಂದ ನ್ಯಾಯಾಂಗ ತನಿಖೆಗೆ ಒಪ್ಪಿಕೊಳ್ಳಿ....

(ಈ ಹಂತದಲ್ಲಿ ನ್ಯಾಯಾಂಗ ತನಿಖೆ ಆಗಲೇಬೇಕೆಂದು ಒತ್ತಾಯಿಸಿ ಬಿಜೆಪಿ ಪಕ್ಷದ ಸದಸ್ಯರು ಸದನದ ಬಾವಿಗೆ ಧರಣಿ ಮಾಡಿದರು)

ಅಧ್ಯಕ್ಷರು :- ಡಾ॥ ರೆಡ್ಡಿಯವರು ಮಾತನಾಡಲು ಅವಕಾಶ ಕೇಳಿದ್ದಾರೆ, ಅವರು ಮಾತನಾಡಲಿ.

ಡಾ॥ ಎ.ಬಿ. ಮಾಲಕರೆಡ್ಡಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ನಾಯಕರು ಏನು ಹೇಳಿದರು ಆ ಪಾಯಿಂಟ್‌ಗೆ ನಾನು ಕ್ಲಾರಿಫೈ ಮಾಡಲಿಲ್ಲ. ಏಕೆಂದರೆ ಟಿವಿಯಲ್ಲಿ ಮತ್ತು ಎಲೆಕ್ಟ್ರಾನಿಕ್ ಮೀಡಿಯದಲ್ಲಿ ಕೂಡ ಹಾಗೆಯೇ ಬಂತು. ದಯವಿಟ್ಟು ಈ ವಿಷಯ ಸ್ವಲ್ಪ

ಕೇಳಬೇಕು. ಏಕೆಂದರೆ ಈ ಭ್ರಾಂತಿ ಎಲ್ಲಾ ಕಡೆ ಹರಡಿದೆ. ಅದನ್ನು ಕ್ಲಾರಿಫೈ ಮಾಡುವುದು ನನ್ನ ಕರ್ತವ್ಯ. ಇಲ್ಲದಿದ್ದರೆ ಏನಾಗುತ್ತದೆ ಅಂದರೆ ನಾವು ಬೇರೆಯೇ ಆಗುತ್ತೇವೆ. 300 ಕೋಟಿ ರೂಪಾಯಿಗಳ ಹಗರಣ ಆಗಿದೆ. ಅವ್ಯವಹಾರ ಆಗಿದೆ. ಎಂದು ಮೀಡಿಯಾದಲ್ಲಿ ಬಂತು ಮತ್ತು ಅವರೂ ಕೂಡ ಹೇಳಿದ್ದಾರೆ. ಲೋಕಾಯುಕ್ತರ ಜೊತೆಗೆ ಕೆಲಸ ಮಾಡತಕ್ಕಂಥವರೂ ಕೂಡ ಹೇಳಿದ್ದಾರೆ. ಸಾಧಾರಣವಾಗಿ ಜನರ ಅಭಿಪ್ರಾಯದಲ್ಲಿ ಏನಾಗುತ್ತದೆ? ನನಗೂ ಗಾಬರಿ ಆಯಿತು. ಏಕೆಂದರೆ ಆ ಡಿಪಾರ್ಟ್‌ಮೆಂಟ್‌ಗೆ ಬಜೆಟ್ 8 ಕೋಟಿ 36 ಲಕ್ಷ ಈಗಾಗಲೇ ನಮ್ಮ ಮಾನ್ಯ ಆರೋಗ್ಯ ಸಚಿವರು ಹೇಳಿದರು. ಆಪಾದನೆ 300 ಕೋಟಿ ಅವ್ಯವಹಾರ, ಆದರೆ ಎಲ್ಲಾ ದೃಷ್ಟಿಯಿಂದಲೂ ಪ್ರಧಾನ ಮಂತ್ರಿಗಳ ರೋಜ್‌ಗಾರ್, ಪ್ರಧಾನ ಮಂತ್ರಿಗಳ ಫ್ಲಡ್‌ಲೋನ್‌ನಲ್ಲಿ ಖರೀದಿಯಾಗತಕ್ಕಂಥಾದ್ದು ಮೆಡಿಕಲ್ ಎಜುಕೇಶನ್‌ನಲ್ಲಿ ಖರೀದಿಯಾಗತಕ್ಕಂಥಾದ್ದು ಅನೇಕ ಜಡ್.ಪಿ ಗಳಿಂದ ಸ್ಕೂಲ್ ಚಿಲ್ಡ್ರನ್‌ದ್ದು ಎಲ್ಲಾ ಸೇರಿ 80 ಕೋಟಿ ರೂಪಾಯಿಗಳ ಔಷಧಿ ಖರೀದಿಯಾಗುತ್ತದೆ.

1.10 ಪಿ.ಎಂ.

ಆದರೆ, ಅವ್ಯವಹಾರ 300 ಕೋಟಿ ಎಲ್ಲಿಂದ ಬಂತು? ಇದು ಗ್ರಹಿಕೆ ಏಕೆಂದರೆ ಈ ಸದನದ ಮುಖಾಂತರ ಜನರಿಗೆ ಮಾಹಿತಿ ಹೋಗತಕ್ಕಂಥಾದ್ದು ಬಹಳ ಅವಶ್ಯಕವಾಗಿದೆ. ಇದರ ಹಿನ್ನೆಲೆ ಇನ್ನೊಂದು ಹೇಳುತ್ತೇನೆ. ಏಕೆಂದರೆ, ಜನರಿಗೆ ಬಹಳ ತಪ್ಪು ಗ್ರಹಿಕೆ ಇದೆ. ಹೋದಸಲ ಎರಡು ತಿಂಗಳ ಹಿಂದೆ ಅಥವಾ ಮೂರು ತಿಂಗಳ ಹಿಂದೆ ಒಂದು ವಿಷಯ ಬಂತು. ಔಷಧಿ ಮಳಿಗೆಯಲ್ಲಿ, ಗವರ್ನಮೆಂಟ್ ಮೆಡಿಕಲ್ ಸ್ಟೋರ್ಸ್‌ನಲ್ಲಿ 30 ಕೋಟಿ ರೂಪಾಯಿ ಅವ್ಯವಹಾರ. ಅದಕ್ಕೆ 30 ಕೋಟಿ ರೂ. ಅಲಾಟ್‌ಮೆಂಟ್ ಇದ್ದರೂ ಕೂಡ ಹಣಕಾಸಿನ ಇಲಾಖೆಯವರು ವರ್ಷದ ಕೊನೆಯಲ್ಲಿ ಸ್ವಲ್ಪ ವಾಪಸ್ ತೆಗೆದುಕೊಂಡರು. ಆಮೇಲೆ ಜಿ.ಎಂ.ಎಸ್.ಗೆ ಪವರ್ ಇರುವುದೇ ಬರೀ 40 ಪರ್ಸೆಂಟ್. ಸನ್ಮಾನ್ಯ ಸಿಂಧ್ಯ ಸಾಹೇಬರು ಆರೋಗ್ಯ ಸಚಿವರಾಗಿ ಕೆಲಸ ಮಾಡಿದವರು, ಅವರು ಹೇಳಿದ್ದು ಸರಿ. ಅಲಾಟ್ ಆದಂಥಾದ್ದನ್ನೆಲ್ಲಾ ಅವರೇ ಪರ್ಚೇಸ್ ಮಾಡುವುದಿಲ್ಲ. 60 ಪರ್ಸೆಂಟ್ ಜಡ್.ಪಿ.ನವರು ಮಾಡುತ್ತಾರೆ. ಅಂದಮೇಲೆ 30 ಕೋಟಿ ರೂ ಎಂದು ತಿಳಿದುಕೊಂಡರೂ ಕೂಡ, 30 ಕೋಟಿ ರೂ. ಜಿ.ಎಂ.ಎಸ್.ನವರು ಪರ್ಚೇಸ್ ಮಾಡಿದ್ದಾರೆ, ಅಡಿಷನಲ್ ಡೈರೆಕ್ಟರ್ 30 ಕೋಟಿ ರೂ. ಅವ್ಯವಹಾರ ಮಾಡಿದ್ದಾರೆ. ಇದೆಲ್ಲಾ ಪೇಪರ್‌ನಲ್ಲಿ ಬಂದಿದೆ. ಇದನ್ನು ಯಾರೂ ಸೂಕ್ಷ್ಮವಾಗಿ ಆಲೋಚನೆ ಮಾಡುವುದಿಲ್ಲ ಮತ್ತು ಅನಾಲಿಸೀಸ್ ಕೂಡ ಮಾಡುವುದಕ್ಕೆ ಹೋಗುವುದಿಲ್ಲ. ಪರ್ಚೇಸೇ 30 ಕೋಟಿ ರೂ. ಮಾಡಿದರೆ, 30 ಕೋಟಿ ಅವ್ಯವಹಾರ ಮಾಡುವುದು ಹೇಗೆ? ಎಲ್ಲಾ ಪೇಪರ್‌ನಲ್ಲಿ ಹಾಗೆಯೇ ಹಾಕಿದರು. ಆಮೇಲೆ, ಅದು ಲೋಕಾಯುಕ್ತ ರಿಪೋರ್ಟ್ ಅಲ್ಲ. ಇವತ್ತು ನನಗೆ ಬಹಳ ಸಂತೋಷ ಅನ್ನಿಸುತ್ತದೆ. ಅನೇಕ ಜನರು ಬಹಳ ಚೆನ್ನಾಗಿ ವಿಶ್ಲೇಷಣೆ ಮಾಡಿರಬಹುದು. ಲೋಕಾಯುಕ್ತ ರಿಪೋರ್ಟ್ ಸರ್ಕಾರಕ್ಕೆ ಬರುತ್ತದೆ. ಅಲ್ಲಿ ಇಂಟರ್‌ನಲ್ ಆಡಿಟರ್ ಇರುತ್ತಾರೆ. Lok Ayukta is assisted by police Department as well as Audit Department i.e., State Accounts Department. ಸ್ಟೇಟ್ ಅಕೌಂಟ್ಸ್ ಡಿಪಾರ್ಟ್‌ಮೆಂಟಿನವರು ಲೋಕಾಯುಕ್ತಕ್ಕೆ ಅಟ್ಯಾಚ್ ಆಗಿರುತ್ತಾರೆ. ಆತ ಆಡಿಟ್ ಮಾಡಿರುತ್ತಾನೆ. ಅದು ಆಡಿಟರ್ಸ್ ರಿಪೋರ್ಟ್. ಅದು ಲೋಕಾಯುಕ್ತ ರಿಪೋರ್ಟ್ ಅಲ್ಲ. ಅದಕ್ಕೂ, ಇದಕ್ಕೂ ಟೋಟಲಿ ವ್ಯತ್ಯಾಸ ಇರುತ್ತದೆ. ಲೋಕಾಯುಕ್ತರ

ಇಂಟರ್‌ನಲ್ ಆಡಿಟರ್ ಏನಿರುತ್ತಾನೆ. ಅವ ಮಾಡಿದ್ದನ್ನು, it will be processed. Then it will be sent to the concerned department for clarification. ಆ ಕ್ಲಾರಿಫಿಕೇಷನ್ ತೆಗೆದುಕೊಂಡು, ಆ ಇಂಟರ್‌ನಲ್ ಆಡಿಟರ್ ರಿಪೋರ್ಟ್ ಎರಡೂ ತೂಕ ಮಾಡಿ ಲೋಕಾಯುಕ್ತ ರಿಪೋರ್ಟ್ ತಯಾರು ಮಾಡುತ್ತಾರೆ. ಅದು ತೂಕವಾದ ರಿಪೋರ್ಟ್ ಇರುತ್ತದೆ. ಆಮೇಲೆ, ಸರ್ಕಾರಕ್ಕೆ ಬರುತ್ತದೆ. ಸರ್ಕಾರ ಮುಂದೆ ಆಲೋಚನೆ ಏನು ಮಾಡುತ್ತದೋ ಬಿಡುತ್ತದೋ ಅದು ಬೇರೆ ವಿಷಯ. ಇಲ್ಲಿ ಮುನ್ನೂರು ಕೋಟಿ ರೂ. ಅವ್ಯವಹಾರ ನಡೆದಿಲ್ಲ; ಗಾಬರಿಯಾಗುವ ಕಾರಣ ಇಲ್ಲ. ಏಕೆಂದರೆ, ಅಷ್ಟು ಔಷಧಿಗಳ ಪರ್ಚೇಸ್ ಆಗುವುದಿಲ್ಲ. ಇನ್ನು ಅವ್ಯವಹಾರದ ಪ್ರಶ್ನೆ ಎಲ್ಲಿ ಬಂತು?

ಶ್ರೀ ಜಗದೀಶ್ ಶೆಟ್ಟರ್ :- ಸನ್ಮಾನ್ಯ ಅಧ್ಯಕ್ಷರೇ, ಇಲ್ಲೇನು ಮಂತ್ರಿಗಳು ಸ್ಪಷ್ಟೀಕರಣ ಮಾಡಿದರು, ಅದು ಒಂದು ವರ್ಷದ್ದು ಆಯಿತು. ಇವತ್ತು ಪತ್ರಿಕೆಯಲ್ಲಿ ಬಂದಂಥಾದ್ದು ಮತ್ತು ನಾನು ಮಾಹಿತಿ ತೆಗೆದುಕೊಂಡಿದ್ದು, ಇದು 1997 ರಿಂದ ಇಲ್ಲಿಯವರೆಗೆ ಆದಂಥಾದ್ದು 300 ಕೋಟಿ ರೂಪಾಯಿಗಳು. ಹಾಗಾದರೆ, ಈ ಮುನ್ನೂರು ಕೋಟಿ ರೂಪಾಯಿ ಒಂದೇ ವರ್ಷದ್ದು ಅಲ್ಲವೆಂದರೆ, ಇವತ್ತು ಸರ್ಕಾರದವರು ಲೋಕಾಯುಕ್ತಕ್ಕೆ ಜಾಡಿಸಬೇಕಾಗುತ್ತದೆ. ಈ ರೀತಿ ನೀವು ಪತ್ರಿಕಾ ಹೇಳಿಕೆ ಕೊಟ್ಟು, ಸಾರ್ವಜನಿಕರಿಗೆ ತಪ್ಪು ಭಾವನೆ ಏಕೆ ಕೊಡುತ್ತೀರಿ ಎಂದು ಸರ್ಕಾರದವರು ಕೇಳಬೇಕಾಗುತ್ತದೆ. ಇದು ಕೇವಲ ಒಂದು ವರ್ಷದ್ದು ಅಲ್ಲ. ಇದು 1997 ರಿಂದ ಇಲ್ಲಿಯವರೆಗೆ ಆದಂಥ ಹಗರಣ. ಇವತ್ತು ಡಾ|| ಮಾಲಕಾರೆಡ್ಡಿಯವರ ಕಾಲದಲ್ಲಿ ಅಷ್ಟೇ ಅಲ್ಲ. ಬೇರೆ ಬೇರೆ ಕಾಲದಲ್ಲಿ ಆದಂಥ ಹಗರಣ ಇದು. ಹೀಗಾಗಿ ಇದು 5-6 ವರ್ಷಗಳಿಂದ ಇರುವುದರಿಂದ, ಇಲ್ಲಿ ವಿಚಾರ ಮಾಡುವಂಥಾದ್ದು ಮತ್ತು ಡಾ|| ಸುದರ್ಶನ್‌ರವರು ಕೇವಲ ಅಡ್ವೈಸರ್ ಅಲ್ಲ. ಅವರು ನಿರ್ದೇಶಕರು ಲೋಕಾಯುಕ್ತದ ನಿರ್ದೇಶಕರಾಗಿದ್ದಾರೆ. ಹೀಗಾಗಿ, ಒಬ್ಬ ಜವಾಬ್ದಾರಿ ಇರತಕ್ಕ ಅಧಿಕಾರಿಯಾದ ವ್ಯಕ್ತಿಯ ಬಾಯಿಂದ ಈ ರೀತಿಯ ಅಭಿಪ್ರಾಯ ಬರುತ್ತದೆ ಎಂದರೆ, ಇದರಲ್ಲಿ ಯಾರದು ತಪ್ಪು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಇದು ಕೇವಲ ಡ್ರಗ್ ಕಂಟ್ರೋಲ್ ಆಫೀಸಿನಲ್ಲಿ ನಡೆದಂಥಾದ್ದು ಎಂದಲ್ಲ. ರಾಜ್ಯ ವ್ಯಾಪ್ತಿ, ಜಿಲ್ಲಾ ಪಂಚಾಯ್ತಿಯಲ್ಲಿ ಏನು ಸಪ್ಲೈ ಮಾಡಿದ್ದಾರೆ, ಅದೂ ಸೇರಿ ಆಗಿರತಕ್ಕಂಥ ಹಗರಣ. ಹೀಗಾಗಿ ಮುನ್ನೂರು ಕೋಟಿ ರೂಪಾಯಿ ಎನ್ನುವಂಥಾದ್ದು ಏನಿದೆ, ಇದು 5-6 ವರ್ಷಗಳಿಂದ ನಡೆದಂಥ ಹಗರಣವಾಗಿರುತ್ತದೆ. ನಮ್ಮ ರಾಜ್ಯದಲ್ಲಿ ಇದು ದೊಡ್ಡ ಹಗರಣ. ಸರ್ಕಾರ ಇದರಲ್ಲಿ ಮಲಗಿಕೊಂಡಿತ್ತು. ನಿದ್ರೆ ಮಾಡುತ್ತಾ ಇರುವಂಥಾದ್ದು. ಈ ರೀತಿ ಆಗಿದ್ದರೂ ಕೂಡ ಇವತ್ತು ಭ್ರಷ್ಟಾಚಾರ ನಡೆಯುತ್ತಾ ಇದೆ. ಯಾವ ಅಧಿಕಾರಿಗಳು ತಪ್ಪು ಮಾಡಿದ್ದಾರೆ. ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಎಂಬುದನ್ನು ತಕ್ಷಣ ಹೇಳಿ. ನೀವು ಕಳೆದ ಮೂರು ವರ್ಷಗಳಿಂದ ಸುಮ್ಮನೆ ಇದ್ದೀರಿ.

ಅಧ್ಯಕ್ಷರು :- ಅವರಿಗೆ ಎಲ್ಲವನ್ನೂ ನೋಡಲು ಸಮಯ ಬೇಕಲ್ಲಾ.

ಶ್ರೀ ಜಗದೀಶ್ ಶೆಟ್ಟರ್ :- ಹಾಗಾದರೆ ನ್ಯಾಯಾಂಗ ತನಿಖೆ ಮಾಡಿ. ಇವತ್ತು ಲೋಕಾಯುಕ್ತಕ್ಕೆ ಕೆಲವೊಂದು ಇತಿಮಿತಿಗಳು ಇವೆ. ಆ ಇತಿಮಿತಿಯಲ್ಲಿ ಅವರು ಎಲ್ಲವನ್ನೂ ಎನ್‌ಕ್ವೈರಿ ಮಾಡುವುದಕ್ಕಾಗುತ್ತದೆಯೇ? ಹಾಗಾಗಿ, ನಾವು ಜುಡಿಷಿಯರಿ ಎನ್‌ಕ್ವೈರಿ ಮಾಡಬೇಕೆಂದು ಇನ್‌ಸಿಸ್ಟ್ ಮಾಡುತ್ತಿದ್ದೇನೆ. ಅದನ್ನು ಸರ್ಕಾರ ಒಪ್ಪಬೇಕಾಗುತ್ತದೆ. ನಿಜವಾಗಿಯೂ ಅವರಿಗೆ

ಪ್ರಾಮಾಣಿಕತನ ಇದ್ದರೆ, ಇದರ ಬಗ್ಗೆ ಅವರಿಗೆ ಕಳಕಳಿ ಇದ್ದರೆ, ಈ ಒಂದು ಭ್ರಷ್ಟಾಚಾರದ ವಿರುದ್ಧ ಧರ್ಮಯುದ್ಧ ಮಾಡುವುದಾದರೆ ಅವರು ಜುಡಿಷಿಯಲ್ ಎನ್‌ಕ್ವೈರಿ ಮಾಡಲಿ.

ಶ್ರೀ ಕಾಗೋಡು ತಿಮ್ಮಪ್ಪ :- ಜುಡಿಷಿಯರಿ ಎನ್‌ಕ್ವೈರಿ ಮಾಡಬೇಕಾದಂಥ ಅಗತ್ಯ ಇಲ್ಲ. ನಮ್ಮ ಅಭಿಪ್ರಾಯಗಳನ್ನು ಹೇಳಿದ್ದೇವೆ. ಲೋಕಾಯುಕ್ತ ತನಿಖೆ ಪ್ರಾರಂಭ ಮಾಡಿದೆ. ಜೊತೆ ಜೊತೆಗೆ ಇಲಾಖಾ ತನಿಖೆಯನ್ನೂ ಮಾಡುತ್ತೇವೆ. ಯಾರ ಮೇಲೆ ಪ್ರೈಮಾಫೇಸಿ ಕಂಡುಬರುತ್ತೆ, ಅವರ ಮೇಲೆ ಅಗತ್ಯ ಕ್ರಮ ಕೈಗೊಳ್ಳುತ್ತೇವೆ.

Mr. Speaker :- There is a limit for every things. ನೀವು ಇಲ್ಲಿಗೆ ಬರುವುದು ಮತ್ತೆ ಅಲ್ಲಿ ಹೋಗಿ ಮಾತನಾಡುವುದು. ನಿಮ್ಮ ನಿಮ್ಮ ಸ್ಥಾನಗಳಲ್ಲಿ ಹೋಗಿ ಕುಳಿತುಕೊಳ್ಳಿ. ನಾನು ಅಲೋ ಮಾಡುವುದಿಲ್ಲ. ನೀವು ಇಲ್ಲಿ ಇರಿ ಅಥವಾ ಅಲ್ಲಿ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು :- ದಯವಿಟ್ಟು ನನಗೆ ಮಾತನಾಡಲು ಬಿಡಿ. ಮಾನ್ಯ ಸದಸ್ಯರಲ್ಲಿ ವಿನಂತಿ. ಮಾನ್ಯ ಶೆಟ್ಟರ್ ಅವರೇ, ತಮ್ಮ ಸದಸ್ಯರಿಗೆ ಹೇಳಿ. Please tell your Members.

(ಗೊಂದಲ)

ಅಧ್ಯಕ್ಷರು :- ಶೆಟ್ಟರ್ ಅವರೇ, ತಾವು ನಾಯಕರಿದ್ದೀರಿ. ನಿಮ್ಮ ಕಡೆಯ ಸದಸ್ಯರಿಗೆ ಹೇಳಿ. ನಾನು ನಿಮ್ಮನ್ನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. 11 ಗಂಟೆಗೆ ಪ್ರಾರಂಭವಾದದ್ದು, ಎರಡೂಕಾಲು ಗಂಟೆಗಳ ಕಾಲ ನೀವು ಹೇಳಲು ಅವಕಾಶ ಕೊಟ್ಟಿದ್ದೇನೆ. ನೀವು ನನ್ನ ಮಾತನ್ನು ಕೇಳಿ.

(ಗೊಂದಲ)

Mr. Speaker :- You please hear me. No. I am sorry. You please tell them to behave properly. No, No. I can't understand your attitude. As a leader, you must tell them. ಎರಡೂಕಾಲು ಗಂಟೆಯವರೆಗೆ ನಿಮ್ಮ ಅಭಿಪ್ರಾಯವನ್ನು ಕೇಳಿದ್ದೇನೆ. ಈಗ ನಾನು ಹೇಳುವುದನ್ನೂ ಕೇಳಬೇಕು ತಾನೆ. ಇದು ಯಾವ ನ್ಯಾಯ?

(ಗೊಂದಲ)

Mr. Speaker :- Mr. Shettar, you please tell your Members. Sri Shettar, are you allowing or not? Please. ತಾವು ತಮ್ಮ ತಮ್ಮ ಜಾಗಗಳಿಗೆ ಹೋಗಿ ಮಾತನಾಡಿ. ಇಲ್ಲಿ ಮಾತನಾಡಕೂಡದು.

(ಗೊಂದಲ)

ಅಧ್ಯಕ್ಷರು :- ಈ ಸಭೆಗೆ ನೀವೊಬ್ಬರೇ ಅಲ್ಲ. 90 ಪರ್ಸೆಂಟ್ ಮೆಜಾರಿಟಿ ಇದೆ. ನಿಮ್ಮದು ನನಗೆ ಅರ್ಥವಾಗುವುದಿಲ್ಲ. ನೋಡಿ ಡಿಸ್ಟರ್ಬ್ ಮಾಡಬೇಡಿ. ಎರಡೂಕಾಲು ಗಂಟೆಯವರೆಗೆ ನಿಮಗೆ ಅಲೋ ಮಾಡಿದ್ದೇನೆ. You must allow me to speak. ತಾವು, ತಮ್ಮ ತಮ್ಮ ಸೀಟುಗಳಿಗೆ ಹೋಗುತ್ತೀರೋ ಇಲ್ಲವೋ? Are you going to allow or not? Come on, tell me. ಇವತ್ತು ಎರಡರಲ್ಲಿ ಒಂದು ಆಗಬೇಕು. ನೀವು 30 ಜನ ಇಲ್ಲಿ ಬಂದು ನಿಂತುಕೊಂಡು, ಶೇಕಡ 80 ಭಾಗ ಸದಸ್ಯರಿಗೆ ತೊಂದರೆ ಕೊಡುವುದು ಸರಿಯಲ್ಲ. I don't like this kind of attitude.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅಧ್ಯಕ್ಷರೇ, ನಮ್ಮ ನಿಲುವನ್ನು ನಾವು ಹೇಳಿದ್ದೇವೆ. ಸುಮ್ಮನೇ ಪದೇ ಪದೇ ಅವರು ಅದಕ್ಕೆ ಇನ್‌ಸಿಸ್ಟ್ ಮಾಡಿದರೆ, ಅರ್ಥ ಏನಿದೆ?

ಅಧ್ಯಕ್ಷರು :- ಎರಡು ಗಂಟೆ ಇಪ್ಪತ್ತು ನಿಮಿಷ ಅಲೋ ಮಾಡಿದ್ದೇನೆ. Come on tell me. No, I can't allow.

(ಗೊಂದಲ)

ಅಧ್ಯಕ್ಷರು :- ಬರೆದುಕೊಳ್ಳಬೇಡಿ. I have not allowed them to speak. Don't take down. ಅವರು ಇಷ್ಟ ಬಂದಹಾಗೆ ಎಲ್ಲರೂ ಕೂಗಾಡುವುದು. ನಾವು ಎದ್ದುನಿಂತಾಗ ನಮಗೇ ಅವಕಾಶ ಕೊಡಲಿಲ್ಲವೆಂದರೆ, ಇದೇನಿದು? You are degrading the Chair's powers. I am very sorry. ನೀವು ಮೂವತ್ತು ಜನ ಶೇಕಡ 95 ಭಾಗ ಸದಸ್ಯರಿಗೆ ಈ ರೀತಿ ತೊಂದರೆ ಕೊಡುವುದು ತಪ್ಪಾಗುತ್ತದೆ. ತಾವು ದಯವಿಟ್ಟು ಅರ್ಥ ಮಾಡಿಕೊಂಡು ತಮ್ಮ ತಮ್ಮ ಸೀಟುಗಳಿಗೆ ಹೋಗಿ

[ಸದನದ ಸನ್ಮಾನ್ಯ ಸದಸ್ಯರುಗಳವರು ಉಪಸ್ಥಿತರಿದ್ದರು]

(ಗೊಂದಲ)

ಅಧ್ಯಕ್ಷರು :- ನೀವು 30 ಜನ ಸದಸ್ಯರು ಶೇಕಡ 90 ಜನ ಸದಸ್ಯರುಗಳಿಗೆ ತೊಂದರೆ ಕೊಡುವುದು ತಪ್ಪಾಗುತ್ತದೆ. ಇದನ್ನು ತಾವುಗಳು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು, ತಮ್ಮ ಸ್ಥಾನಗಳಿಗೆ ಹಿಂದಿರುಗಬೇಕು. ಮೊದಲು ತಮ್ಮ ಸ್ಥಾನಗಳಿಗೆ ಹೋಗಿ....

ಶ್ರೀ ಜಗದೀಶ್ ಶೆಟ್ಟರ್ :- ಸರಕಾರದವರು ಇಲ್ಲಿ ಬಹಳ ಮೊಂಡುತನ ಮಾಡುತ್ತಾ ಇದೆ. ಇದೊಂದು ಬಹಳ ಮಹತ್ವದ ವಿಚಾರ....

Mr. Speaker :- Don't disturb the House. I have to take the consensus of the House. No, you can't disturb like this.

ಶ್ರೀ ಜಗದೀಶ್ ಶೆಟ್ಟರ್ :- ಸರಕಾರ ಈ ವಿಚಾರದಲ್ಲಿ ಬಹಳ ಮೊಂಡುತನ ಮಾಡುತ್ತ ಇದೆ. ತಾವುಗಳು ಮಾತನಾಡಿ... ನಾವೇನೂ ಮಾತನಾಡುವುದಿಲ್ಲ. ತಾವು ಮಾತನಾಡಿ.....

ಅಧ್ಯಕ್ಷರು :- ನನಗೂ ಮಾತನಾಡಲು ಅವಕಾಶ ಮಾಡಿಕೊಡುತ್ತಾ ಇಲ್ಲ... ಇವರೇನು ತಮಾಶೆ ಮಾಡುತ್ತಾ ಇದ್ದಾರೆಯೇ? ಅದಕ್ಕೊಂದು ಲೆಕ್ಕಾಚಾರ ಬೇಡವೇ? ಎರಡೂವರೆ ಗಂಟೆಗಳ ಕಾಲ ನಾನು ಅವರಿಗೆ ಅಲೋ ಮಾಡಿದ್ದೇನೆ. What is this? They are unnecessarily disturbing the House. I can't understand. ಜನರು ತಾವುಗಳು ಏನು ಮಾಡುತ್ತಾರೆ ಎಂಬುದನ್ನು ನೋಡುತ್ತಾರೆ. ನಾವು ನೋಡುವುದಲ್ಲ...

ಶ್ರೀ ಜಗದೀಶ್ ಶೆಟ್ಟರ್ :- ಸರಕಾರದ ಬಣ್ಣವನ್ನು ಜನರು ನೋಡುತ್ತಾರೆ...

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ :- ನಿಮ್ಮ ಬಣ್ಣವನ್ನು ಜನ ನೋಡುತ್ತಾರೆ......

ಶ್ರೀ ಕರಿಯಣ್ಣ :- ನೀವುಗಳು ಹೇಳಿದ ಹಾಗೆ ಕೇಳುವುದಕ್ಕೆ ಸರಕಾರ ಇದೆಯೇ? ಸರಕಾರದವರು ಇರುವ ಉತ್ತರವನ್ನು ಕೊಡುತ್ತಾರೆ ಅದನ್ನು ಕೇಳುವುದಕ್ಕೆ ಸಮಾಧಾನ ಇಲ್ಲವೆಂದರೆ, ಹೇಗೆ? ಎರಡೂವರೆ ಗಂಟೆಗಳ ಕಾಲ ಆಗಿದೆಯಾದರೂ ಸಮಾಧಾನವಿಲ್ಲವೆಂದರೆ ಏನು?

ಅಧ್ಯಕ್ಷರು :- ಎಲ್ಲದಕ್ಕೂ ಒಂದು ಸಮಿತಿ ಇರಬೇಕು. ನಮ್ಮನ್ನು ಮಾತನಾಡಲೂ ಅಲೋ ಮಾಡದಿದ್ದರೆ ಹೇಗೆ? you must have some sense.....

ಶ್ರೀ ಕರಿಯಣ್ಣ :- ವಿರೋಧಪಕ್ಷದವರು ಇಷ್ಟು ಹೊತ್ತು ಮಾತನಾಡಲು ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದಾರೆ. ಅವರಿಗೂ ಗೌರವವಿಲ್ಲ. ಎಂದಾದರೆ ಹೇಗೆ?

(ಗೊಂದಲ)

ಅಧ್ಯಕ್ಷರು :- ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು, ಸಿಂಧ್ಯರವರು, ಚೆನ್ನಿಗಪ್ಪ ರವರು, ಮತ್ತು ಇತರ ಸದಸ್ಯರು ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ, ನೀಡಿದ ನಿಲುವಳಿ ಸೂಚನೆ ನಿಯಮ-ಅದರ ಪರಿಮಿತಿಯಲ್ಲಿ ಪೂರ್ವಭಾವಿ ಪ್ರಸ್ತಾಪ ಮಾಡಲು ಅನುಮತಿಸಿದಾಗ, ಈ ಚರ್ಚೆಗೆ ಸೂಕ್ತ ರೀತಿಯಲ್ಲಿ ಸರಕಾರ ಸ್ಪಂದಿಸಿದ ಹಿನ್ನೆಲೆಯಲ್ಲಿ, ಈ ನಿಲುವಳಿ ಸೂಚನೆಗೆ ಅನುಮತಿಯನ್ನು ನಿರಾಕರಿಸಿದ್ದೇನೆ.

ಈಗ ಮುಂದಿನ ಭಾಷಣಕಾರರು ರಾಮದಾಸ್‌ರವರು.... It you don't speak I will call some other person. Next speaker on the Budget is Mr. Ramdas.

(ಗೊಂದಲ)

ಅಧ್ಯಕ್ಷರು :- ರಾಮದಾಸ್‌ರವರೆ, ತಾವು ಬಜೆಟ್ ಮೇಲೆ ಮಾತನಾಡುತ್ತೀರೋ, ಬೇರೆಯವರನ್ನು ಕರೆಯ ಬೇಕೋ?

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೆ, ಅವರುಗಳು ತಮ್ಮಲ್ಲಿ ಒಂದು ಬೇಡಿಕೆಯನ್ನು ಇಟ್ಟಿದ್ದಾರೆ ಪ್ರಿಲಿಮಿನರಿ ಸಬ್‌ಮಿಶನ್ ಮಾಡಿರತಕ್ಕಂಥ ಕಾಲದಲ್ಲಿ ಸರಕಾರ ಕೊಟ್ಟಿರತಕ್ಕಂಥ ಉತ್ತರದಿಂದ ಅವರು ಸಮಾಧಾನವಾಗದೆ ಅವರು ಧರಣಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಕಾರ್ಯಕಲಾಪಗಳನ್ನು ನಡೆಸತಕ್ಕಂಥದ್ದು ಸರಿಯಲ್ಲ. ದಯವಿಟ್ಟು ಸಭೆಯನ್ನು ಮುಂದೆ ಹಾಕಿ, ನಾವು ಚರ್ಚೆ ಮಾಡಿ ಮತ್ತೆ ಸೇರೋಣ. Please adjourn the House. I request you to kindly adjourn the House.

Mr. Speaker :- You please hear me. ನಾನು ಮಾತನಾಡಲು ಕೂಡ ಅಲೋ ಮಾಡದೆ ಹೋದರೆ ಹೇಗೆ? I can't understand.

ಲೋಕಸಭೆಯಲ್ಲಿ ಹಾಗೆ ಮಾಡುತ್ತಾರೋ? ಪ್ರೈಮ್ ಮಿನಿಸ್ಟರ್‌ರವರು ಎದ್ದು ನಿಂತಾಗ ಎಷ್ಟು ಗೌರವ ಕೊಡುತ್ತಾರೆ. No, No I am very sorry.

ಶ್ರೀ ಕರಿಯಣ್ಣ :- ಸರಕಾರದವರು ಇವರು ಹೇಳಿದ ಹಾಗೆ ಉತ್ತರ ಕೊಡಬೇಕೆಂದು ಇದೆಯೇ? ಸರಕಾರದವರು ಇರುವ ದಾಖಲೆಗಳ ಆಧಾರದ ಮೇಲೆ ಉತ್ತರ ಕೊಡುತ್ತಾರೆ. ಅದನ್ನು ಕೇಳಿದ ಮೇಲೆ ಅವರವರು ತಮ್ಮ ಗೌರವವನ್ನು ಕಾಪಾಡಿಕೊಂಡು ಕುಳಿತುಕೊಳ್ಳಬೇಕು. ಎಲ್ಲ ವಿಚಾರಗಳಿಗೂ ಸರಿಯಿಲ್ಲವೆಂದು ಧರಣಿ ಕುಳಿತುಕೊಳ್ಳುತ್ತಾರೆ. ಇದು ಸರಿಯಲ್ಲ.

(ಗೊಂದಲ)

Mr. Speaker :- Don't take down. I have not allowed. ಒಟ್ಟಿನಲ್ಲಿ ಅವರು ನಿಲುವಳಿ ಸೂಚನೆಯನ್ನು ಏನು ಮೂವ್ ಮಾಡಿದ್ದಾರೆ ಅದನ್ನು ನಾನು ನಿರಾಕರಿಸಿದ್ದೇನೆ. ಈಗ ವಿರಾಮ ವೇಳೆ, ದಯವಿಟ್ಟು ಆ ಮೇಲೆ ಬನ್ನಿ ಮಾತನಾಡೋಣ. ಈಗ ಸದನವನ್ನು ಎರಡೂವರೆ ವರೆಗೆ ಮುಂದೂಡುತ್ತಿದ್ದೇನೆ.

(ಸದನವು ಒಂದು ಘಂಟೆ ಇಪ್ಪತ್ತಾರು ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಎರಡು ಘಂಟೆ ಮೂವತ್ತು ನಿಮಿಷಗಳಿಗೆ ಸೇರಲು ನಿರ್ಧರಿಸಿತು)

ಸದನವು ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಂಡಿತು.

[ಸಭಾಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು]

ಅಧ್ಯಕ್ಷರು :- ಈಗ ಬಜೆಟ್ ಮೇಲೆ ಮಾನ್ಯ ಸದಸ್ಯರಾದ ರಾಮದಾಸ್‌ರವರು ಮಾತನಾಡುವುದು.

(ಭಾರತೀಯ ಜನತಾ ಪಕ್ಷದ ಸದಸ್ಯರು ಸದನದ ಬಾವಿಗಿಳಿದು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು)

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ದಯವಿಟ್ಟು ತಾವು ವಿರೋಧ ಪಕ್ಷದ ನಾಯಕರನ್ನು ತಮ್ಮ ಕೊಠಡಿಗೆ ಕರೆದು ಐದು ನಿಮಿಷ ಮಾತನಾಡುವ ಮೂಲಕ ಉದ್ಭವಿಸಿರುವ ಸಮಸ್ಯೆಯನ್ನು ಪರಿಹರಿಸಿ ಸರಿಪಡಿಸಬೇಕು.

Mr. Speaker :- Let us see.

ಶ್ರೀ ಸಿ.ಎಸ್. ನಾಡಗೌಡ (ಸರ್ಕಾರಿ ಮುಖ್ಯ ಸಚೇತಕರು) :- ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತದ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ಆಧಾರವಾಗಿಟ್ಟುಕೊಂಡು ಬಿಜೆಪಿ ಸದಸ್ಯರು ಸದನದ ಬಾವಿಗಿಳಿದು ಆ ಕುರಿತು ತನಿಖೆಯಾಗಬೇಕೆಂದು ಗಲಾಟೆ ಮಾಡುತ್ತಿದ್ದಾರೆ. ಇದು ಒಂದು ಕಡೆಯಾದರೆ, ಮತ್ತೊಂದು ಕಡೆ ಅವರು, ಬಜೆಟ್ ಮೇಲೆ ಚರ್ಚಿಸುವುದಕ್ಕೆ ಸರ್ಕಾರ ನಮಗೆ ಅವಕಾಶ ಕೊಡದೆ ಬುಲ್ಡೋಜ್ ಮಾಡಿದರು ಎಂದು ಹೇಳುತ್ತಾರೆ. ಈಗ ತನಿಖೆಗೆ ಮತ್ತು ತನಿಖೆಗೆ ಅಡ್ಡಿಪಡಿಸುವ ಕೆಲಸವನ್ನು ಯಾರೂ ಮಾಡುತ್ತಿಲ್ಲ. ಅದು ತನ್ನ ಪಾಡಿಗೆ ನಡೆಯುತ್ತಿದೆ. ಅದರ ಬಗ್ಗೆ ವರದಿ ಕೂಡ ಆಗಿದೆ. ಮುಂದೆ ನಾವು ಪತ್ರಿಕಾ ವರದಿಗಳ ಮೇಲೆಯೇ ಅವಲಂಬಿಸುವುದಕ್ಕಾಗುವುದಿಲ್ಲ. ಸತ್ಯಾಂಶ ಹೊರಗೆ ಬರಲೇಬೇಕಾಗುತ್ತದೆ. ಯಾರು ಮುಚ್ಚಿಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇವೊತ್ತು ಟ್ರೆಜರಿ ಬೆಂಚ್‌ನವರಾದ ನಮ್ಮ ಸದಸ್ಯರಿಗೆ ಪ್ರತಿ ಸಲ ಏನಾಗುತ್ತಿದೆಯೆಂದರೆ, ಅವರು ಬರುವುದು, ಗಲಾಟೆ ಕೇಳುವುದು ಇದೇ ಆಗಿದೆ. ಈಗ ಮಾನ್ಯ ಸದಸ್ಯರಾದ ನಂಜಯ್ಯನಮಠರವರನ್ನು ತಾವು 2-3 ಸಲ ಕರೆದಿರಿ. ಆದರೆ, ಅದನ್ನು ಮುಂದೆ ಹಾಕುತ್ತಾ ಹೋಗಲಾಯಿತು ಅದಕ್ಕೋಸ್ಕರ, ತಮ್ಮ ಮುಖಾಂತರ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ……

(ಗೊಂದಲ)

ಅಧ್ಯಕ್ಷರು :- ನಾನು ಯಾರಿಗೆ ಮಾತನಾಡಲು ಅವಕಾಶ ನೀಡುತ್ತೇನೋ ಅದನ್ನು ಮಾತ್ರ ಬರೆದುಕೊಳ್ಳಬೇಕು. I have allowed Mr. Nadagowda to speak.

ಶ್ರೀ ಸಿ.ಎಫ್. ನಾಡಗೌಡ :- ಸರ್ಕಾರಿ ಮುಖ್ಯ ಸಚೇತಕರು ಕೇವಲ 15-20 ಜನ ವಿರೋಧ ಪಕ್ಷದ ನಾಯಕರುಗಳು ಇಡೀ ಸದನವನ್ನೇ ಹೈಜಾಕ್ ಮಾಡುವುದಕ್ಕಾಗುವುದಿಲ್ಲ. ನಿಯಮದ ಪ್ರಕಾರ ಏನು ಪ್ರತಿಪಾದಿಸುತ್ತೀರೋ ಅದನ್ನು ಮಾಡಿ. ಅದಕ್ಕೆ ಉತ್ತರ ಕೊಡಲು ಸರ್ಕಾರ ಸಿದ್ಧವಿದೆ, ಅದಕ್ಕೋಸ್ಕರ ನಾವು ಇಲ್ಲಿ ಕುಳಿತುಕೊಂಡಿದ್ದೇವೆ. ಅದು ಬಿಟ್ಟು ಪ್ರತಿ ದಿವಸ ಈ ರೀತಿ ಗಲಾಟೆ ಮಾಡುತ್ತಿದ್ದರೆ ಪರಿಹಾರ ಕಂಡುಹಿಡಿಯುವುದಕ್ಕಾಗುವುದಿಲ್ಲ. ಮೇಲ್ಮನೆಯಲ್ಲೂ

ಕೂಡ ಒಳ್ಳೆ ರೀತಿಯಲ್ಲಿ ಚರ್ಚೆಯಾಗಿ ಅದನ್ನು ಮೊಟಕುಗೊಳಿಸಿದರು. ಮೇಲ್ಮನೆಯಲ್ಲಿನ ಕೆಲವು ವಿಷಯಗಳನ್ನಾದರೂ ಗಮನಿಸಿ ಅದನ್ನು ಇಲ್ಲಿ ಪರಿಪಾಲಿಸೋಣ.

(ಗೊಂದಲ)

ಸ್ವಾಮಿ, ಮಾನ್ಯ ಅಧ್ಯಕ್ಷರೆ, ಇದು ಸರಿಯಲ್ಲವೆಂದು ಹೇಳುತ್ತಿದ್ದೇನೆ. ಅವರು ಆ ರೀತಿ ಗಲಾಟೆ ಮಾಡುತ್ತಿದ್ದರೆ ಅದಕ್ಕೆ ಪ್ರತಿಯಾಗಿ ನಾವು ಎದ್ದು ನಿಂತು ಗಲಾಟೆ ಮಾಡುವುದರಿಂದ ಪ್ರಯೋಜನವಾದರೂ ಏನು? ಇಲ್ಲಿ ಕುಳಿತುಕೊಂಡು ಸಾರ್ವಜನಿಕರ ಹಣ ಮತ್ತು ಸಮಯವನ್ನು ವ್ಯಯ ಮಾಡುವುದಕ್ಕಾಗುತ್ತದೆಯೇ? ನಾಳೆ ಅಥವಾ ನಾಡಿದ್ದು ನಾವು ಉತ್ತರಿಸಬೇಕಾಗಿದೆ. ಆದರೆ, ಕೊನೆಯಲ್ಲಿ ಸರ್ಕಾರ ಬುಲ್ಡೋಜ್ ಮಾಡಿದೆಯೆಂದು ಅವರು ಹೇಳುತ್ತಾರೆ.

Sri S.P. Mudda Hanumegowda :- ಮಾನ್ಯ ಅಧ್ಯಕ್ಷರೆ, Lokayukha is our creation. I cannot understand why the Opposition is not imposing confidence with Lokayuktha?

ಅಧ್ಯಕ್ಷರು :- ದಯವಿಟ್ಟು ನಾನು ರಿಕ್ವೆಸ್ಟ್ ಮಾಡಿಕೊಳ್ಳುವುದೇನೆಂದರೆ, ಬೇರೆಯವರು ಮಾತನಾಡುವಾಗ ನೀವು ಅಡ್ಡಿಪಡಿಸಬಾರದು.

ನೋಡಿ, ನೀವು ಸದನಕ್ಕೆ ಗೌರವ ಕೊಟ್ಟು ಮಾತನಾಡಬೇಕು. ದಯವಿಟ್ಟು ಈ ತರಹ ಮಾಡಬೇಡಿ. ಇದು ನ್ಯಾಯವಲ್ಲ. ಇದರ ಬಗ್ಗೆ ಹೊರಗಡೆ ಟಿವಿ ಮಾಧ್ಯಮಗಳಲ್ಲಿ ಪ್ರಸಾರವಾಗುತ್ತಿರುತ್ತದೆ. ಸಾರ್ವಜನಿಕರು ಏನು ತಿಳಿದುಕೊಳ್ಳುತ್ತಾರೆಂಬ ಯೋಚನೆ ಮಾಡಿ. ತಾವು ಇದೇ ರೀತಿ ಮಾಡುವುದಾದರೆ ಮಾಡಿ. ನೋಡೋಣ. We will See.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :- ಮಾನ್ಯ ಅಧ್ಯಕ್ಷರೆ, ಅತ್ಯಂತ ಗೌರವದಿಂದ ಮಾನ್ಯ ಶಾಸಕ ಮಿತ್ರರು ನಡೆದುಕೊಳ್ಳುತ್ತಿದ್ದಾರೆ. ಇದು ಇವರ ರಾಷ್ಟ್ರೀಯ ಪಕ್ಷಕ್ಕೆ ಹಾಗೂ ಅದರ ಸದಸ್ಯರುಗಳಿಗೆ ಘನತೆ-ಗೌರವ ತರತಕ್ಕಂಥಾದ್ದಲ್ಲ. ನಾವೂ ಸಹ ಈ ಸದನದ ಸದಸ್ಯರಾಗಿದ್ದೇವೆ. ಇವರಂತೆಯೇ ನಾವೂ ಸಹ ಚುನಾಯಿತರಾಗಿ ಬಂದಿದ್ದೇನೆ. ಮಾತನಾಡುವ ನಮ್ಮ ಹಕ್ಕನ್ನು ಮೊಟಕುಗೊಳಿಸುವುದಕ್ಕೆ ಇವರಿಗೆ ಹಕ್ಕಿಲ್ಲ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ :- ಮಾನ್ಯ ಸಭಾಧ್ಯಕ್ಷರೆ, ಇವರು ಇದೇ ರೀತಿ ಮಾಡುತ್ತಿದ್ದರೆ ಇವರುಗಳನ್ನು ಸದನದಿಂದ ಹೊರಗೆ ಹಾಕಬೇಕಾಗುತ್ತದೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಸನ್ಮಾನ್ಯ ಅಧ್ಯಕ್ಷರೆ, ಈಗ ವಿರೋಧ ಪಕ್ಷದವರು ಒಂದು ಬೇಡಿಕೆಯನ್ನಿಟ್ಟು ಅದನ್ನು ಈಡೇರಿಸಬೇಕೆಂದು ಧರಣಿ ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗುವುದಿಲ್ಲ. ಇದು ನಮಗ್ಯಾರಿಗೂ ಕೂಡ ಗೌರವ ತರತಕ್ಕಂಥ ವಿಚಾರವಲ್ಲ. ಸರ್ಕಾರದವರು ಸಹ ಹಟ ಮಾಡದೆ ಸಂಸದೀಯ ವ್ಯವಹಾರಗಳ ಮಂತ್ರಿಗಳಾದವರು ಇಂತಹ ಸಂದರ್ಭದಲ್ಲಿ ಅಧಿಕೃತ ವಿರೋಧ ಪಕ್ಷದ ನಾಯಕರನ್ನು ಕರೆಸಿ ಮಾತನಾಡುವುದು ಸಾಮಾನ್ಯವಾಗಿ ಈ ಸದನದಲ್ಲಿ ನಡೆದು ಬಂದಿರುವ ನಡವಳಿಕೆಗಳಾಗಿದೆ. ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಭೋಜನ ವಿರಾಮದ ಸಂದರ್ಭದಲ್ಲಿ ತಾವು ನಮ್ಮೆಲ್ಲರನ್ನೂ ಕರೆಸಿ ಮಾತನಾಡಬೇಕಾಗಿತ್ತು. ನೀವು ನನ್ನ ಜೊತೆ ಮಾತನಾಡಿದ್ದೀರಿ. ತಾವು ವಿರೋಧ ಪಕ್ಷದ ನಾಯಕರನ್ನು ಕರೆಸಿ, ಸಂಸದೀಯ ವ್ಯವಹಾರಗಳ ಮಂತ್ರಿಗಳ ಅಥವಾ ಗೃಹ

ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳು ಬಹಶಃ ಬೇರೊಂದು ಕಡೆ ಸಭೆಯಲ್ಲಿರಬಹುದು. ಅವರನ್ನು ಹಾಗೂ ಮುಖ್ಯ ಸಚೇತಕರನ್ನು ಆಡಳಿತ ಪಕ್ಷದಿಂದ ಕರೆಸಿ ಐದು ನಿಮಿಷಗಳ ಕಾಲ ಮಾತನಾಡಿದರೆ ಈ ಸಮಸ್ಯೆಯನ್ನು ಬಗೆಹರಿಸಬಹುದು. ಆಯವ್ಯಯದ ಅಂದಾಜು ಮೇಲೆ ಮಾತನಾಡುವ ಗೌರವಾನ್ವಿತ ಸದಸ್ಯರು ಬಹಳಷ್ಟಿದ್ದಾರೆ. ಮಾತನಾಡಲು ಅವರಿಗೂ ಕೂಡ ಆಸೆ ಇದೆ. ಆದರೆ, ಅವರು ಒಂದು ಬೇಡಿಕೆಯನ್ನಿಟ್ಟಿದ್ದಾರೆ. ಅವರ ಬೇಡಿಕೆಯನ್ನು ಈಡೇರಿಸತಕ್ಕದ್ದು, ಬಿಡತಕ್ಕದ್ದು ಸರ್ಕಾರಕ್ಕೆ ಬಿಟ್ಟ ವಿಚಾರ. ಪ್ರಜಾಪ್ರಭುತ್ವದಲ್ಲಿ ಪ್ರತಿಭಟನೆಯ ಸ್ವರೂಪ ಮೊದಲಿನಿಂದಲೂ ಬೆಳೆದು ಬಂದಿರುವಂಥದ್ದು, ದಯಮಾಡಿ ತಾವು ಸದನವನ್ನು ಐದು ನಿಮಿಷ ಮುಂದಕ್ಕೆ ಹಾಕಿ ವಿರೋಧ ಪಕ್ಷದ ನಾಯಕರನ್ನು, ಸಂಸದೀಯ ಸಚಿವರನ್ನು ಕರೆಸಿ ಮಾತನಾಡಿದರೆ ಕಾರ್ಯಕಲಾಪಗಳನ್ನು ನಡೆಸಲು ಸುಗಮವಾಗುತ್ತದೆ. ಏಕೆಂದರೆ ಇವತ್ತು ನಾಳೆ ಹೋದಮೇಲೆ ಏನೂ ಉಪಯೋಗವಾಗುವುದಿಲ್ಲ. ಬಜೆಟ್ ಬಗ್ಗೆ ಅನೇಕ ವಿಚಾರಗಳನ್ನು ಹೇಳಬೇಕಾಗಿದೆ. ಚರ್ಚೆ ಮಾಡಬೇಕಾಗಿದೆ. ತೆರಿಗೆ ಕೊಡತಕ್ಕ ಜನ, ತೆರಿಗೆ ಹಾಕಿಸಿಕೊಳ್ಳತಕ್ಕ ಜನ, ಸಾರ್ವಜನಿಕರ ಹಿತದೃಷ್ಟಿಯ ಕಾರ್ಯಕ್ರಗಳು, ಈ ರೀತಿ ಬಹಳಷ್ಟು ವಿಚಾರಗಳನ್ನು ಮಾತನಾಡಲು ಅನೇಕ ಗೌರವಾನ್ವಿತ ಸದಸ್ಯರುಗಳು ತಯಾರಿ ಮಾಡಿಕೊಂಡು ಬಂದಿದ್ದಾರೆ. ದಯಮಾಡಿ ತಾವು ಅದಕ್ಕೆ ಅನುವು ಮಾಡಿಕೊಡಬೇಕು. ತಾವು ನಮ್ಮನ್ನೆಲ್ಲಾ ಬಹಳ ಪ್ರೀತಿ ವಿಶ್ವಾಸದಿಂದ ನೋಡಿದ್ದೀರ. ಆದ್ದರಿಂದ ತಾವು ದಯಮಾಡಿ ಈಗಲೂ ಹತ್ತು ನಿಮಿಷ ಸಭೆಯನ್ನು ಮುಂದೆ ಹಾಕಿ ಅವರುಗಳನ್ನು ಕರೆದು ಮಾತನಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ವೈ.ಕೆ. ರಾಮಯ್ಯ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸ್ನೇಹಿತರು ಹೇಳಿದ ರೀತಿಯಲ್ಲಿ ಈ ಸದನದ ಎಲ್ಲಾ ಗೌರವಾನ್ವಿತ ಸದಸ್ಯರನ್ನು ಇಡೀ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಮಾಡಬೇಕಾದರೆ ತಾವು ಐದು ನಿಮಿಷ ಅವರನ್ನು ಕರೆದು ಮಾತನಾಡುವುದು ಉತ್ತಮ. ಸಂಜೆಯವರೆಗೆ ಇದನ್ನೇ ಮಾಡಿಕೊಂಡು ಹೋಗುವ ಬದಲಾಗಿ ತಮ್ಮ ಐದು ನಿಮಿಷ ಕಾಲ ವ್ಯಯವಾದರೂ ಚಿಂತೆ ಇಲ್ಲ ಆ ಕೆಲಸವನ್ನು ದಯಮಾಡಿ ಮಾಡಿ. ಏಕೆಂದರೆ, ಲೋಕಾಯುಕ್ತವಿರಬಹುದು, ಮತ್ತೊಂದು ಇರಬಹುದು, ಸಾರ್ವಜನಿಕ ಜೀವನದಲ್ಲಿರುವಂಥ ಭ್ರಷ್ಟತನವನ್ನು ತೊಡೆದು ಹಾಕುವಲ್ಲಿ ಮಾಡುವಂಥ ಪ್ರಯತ್ನದಲ್ಲಿ ಅದು ಒಂದು ದೊಡ್ಡ ಪ್ರಯತ್ನ. ಸಾರ್ವಜನಿಕ ಜೀವನದ ಭ್ರಷ್ಟತನವನ್ನು ತೊಡೆದು ಹಾಕಬೇಕು, ಸಾರ್ವಜನಿಕ ಜೀವನ ಸ್ವಚ್ಛವಾಗಬೇಕು, ಆಡಳಿತ ನಿರರ್ಗಳವಾಗಿ ನಡೆಯಬೇಕು ಎಂದು ಅವರುಗಳಿಗೆಷ್ಟು ಆಸೆ ಇದೆಯೋ ನನಗೂ ಅಷ್ಟೇ ಇದೆ. ಆದರೆ ಆ ಕೆಲಸವನ್ನು ಕಾನೂನಿನ ಚೌಕಟ್ಟಿನಲ್ಲಿ ಮಾಡಬೇಕಾಗುತ್ತದೆ. ಲೋಕಾಯುಕ್ತದವರು ಏನು ಮಾಡಬೇಕು? ಸಿ.ಒ.ಡಿ ಯವರು ಏನು ಮಾಡಬೇಕು? ಸಿ.ಎ.ಜಿ. ರವರು ಏನು ಮಾಡಬೇಕು? ಶಾಸಕರು ಏನು ಮಾಡಬೇಕು ಎಂಬ ಬಗ್ಗೆ ಈ ದೇಶದಲ್ಲಿ ನೀತಿ ನಿಯಮಗಳನ್ನು ರೂಪಿಸಿ ಅದರ ಚೌಕಟ್ಟಿನಲ್ಲಿ ನಿಯಮಗಳನ್ನು ರೂಪಿಸಿದ್ದಾರೆ. ಆ ನಿಯಮಗಳ ಪ್ರಕಾರ ಸಾರ್ವಜನಿಕ ಬದುಕನ್ನು ಸ್ವಚ್ಛ ಮಾಡಬೇಕು ಎನ್ನುವುದರಲ್ಲಿ ನಾವೂ ಅವರ ಜೊತೆ ಸೇರಿಕೊಂಡು ಒತ್ತಾಯ ಮಾಡುತ್ತೇವೆ. ಆದರೆ ಲೋಕಾಯುಕ್ತದವರು ಏನು ಮಾಡಬೇಕು? ನ್ಯಾಯಾಂಗದವರೇನು ಮಾಡಬೇಕು ಎಂಬ ವಿಷಯ ಪುಸ್ತಕದಲ್ಲಿ ಬರೆದಿಟ್ಟಿದೆ. ಅದರ ಪ್ರಕಾರ ಮಾಡಿಕೊಂಡು ಹೋಗಲು ನಮ್ಮ ಅಭ್ಯಂತರವೇನಿಲ್ಲ. ಆದ್ದರಿಂದ ದಯಮಾಡಿ ಸದನವನ್ನು

ಐದು ನಿಮಿಷ ಮುಂದಕ್ಕೆ ಹಾಕಿ ಸಚಿವರನ್ನು, ಚೀಫ್‌ವಿಫ್ ಅವರನ್ನು, ವಿರೋಧ ಪಕ್ಷದ ನಾಯಕರನ್ನು, ಕರೆಸಿ ಮಾತನಾಡಿ ಬೇಗ ಬಗೆಹರಿಸಿ ಮುಂಗಡ ಪತ್ರದಂಥ ಮುಖ್ಯವಾದ ವಿಚಾರದ ಬಗ್ಗೆ ಮಾತನಾಡುವಂಥ ನನ್ನ ಸ್ನೇಹಿತರಿಗೆ ಅವಕಾಶಮಾಡಿಕೊಡಬೇಕು. ನಾವೂ ಕೂಡ ಕಾತುರರಾಗಿದ್ದೇವೆ. ತಾವು ಆ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ತಾವು ಹೇಳಿದ ಬಗ್ಗೆ ಒಪ್ಪುತ್ತೇನೆ. ಆದರೆ ಅಧ್ಯಕ್ಷರಿಗೇ ಮಾತನಾಡಲು ಬಿಡಲಿಲ್ಲವಲ್ಲಾ ಇದಕ್ಕೆ ಯಾವ ನ್ಯಾಯವನ್ನು ಹೇಳುತ್ತೀರಿ?

(ಗೊಂದಲ)

I am very sorry ವಿರೋಧ ಪಕ್ಷದ ನಾಯಕರೇ, ಅಧ್ಯಕ್ಷರಿಗೆ ಮಾತನಾಡಲು ಬಿಡದಿದ್ದರೆ ಇದಕ್ಕೇನು ಹೇಳುತ್ತೀರಿ ಇದು ಯಾವ ನ್ಯಾಯ ದಯಮಾಡಿ ಹೇಳಿ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೆ, ತಾವು ತಾಯಿಯಾಗಿ ಎಲ್ಲಾ ಸದಸ್ಯರಿಗೂ ಇರಬೇಕು. ಮಾರಿಯಾಗಬಾರದು. ತಾವು ತಾಯಿಯಾಗಿ ತಾವು ಆಕ್ರೋಶವನ್ನು ಯಾರ ಮೇಲೂ ತೋರಿಸಬಾರದು. ತಾವು ಎಲ್ಲವನ್ನೂ ನುಂಗಬೇಕು. ವಿಷಕಂಠವಾಗಬೇಕು ತಾವು.

ಅಧ್ಯಕ್ಷರು :- ನನಗೆ ಆಕ್ರೋಶ ತೋರಿಸುವುದೇ ಬರುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ನೀವು ಮಾತನಾಡುವುದಕ್ಕೆ ನಾವೂ ಎಂದೂ ಅಡ್ಡಿಮಾಡಿಲ್ಲ. ಕಳೆದ ಮೂರು ವರ್ಷಗಳಿಂದ ನೋಡುತ್ತಿದ್ದೇವೆ, ನಿಮ್ಮ ಸ್ಥಾನಕ್ಕೆ ಅಗೌರವ ಕೊಡುವಂಥದ್ದು, ತಮ್ಮ ಸ್ಥಾನಕ್ಕೆ ಅಗೌರವ ಉಂಟು ಮಾಡುವಂಥ ಕೆಲಸವನ್ನು ನಾವು ಎಂದೂ ಮಾಡಿಲ್ಲ. ನಮ್ಮ ಹೋರಾಟ ಏನಿದ್ದರೂ ಸರ್ಕಾರದ ವಿರುದ್ಧ ತಮ್ಮ ಪೀಠದ ವಿರುದ್ಧ ನಮ್ಮ ಹೋರಾಟವಲ್ಲ. ತಮ್ಮ ಬಗ್ಗೆ ಸ್ಥಾನದ ಬಗ್ಗೆ ನಮಗೆ ಬಹಳ ಗೌರವವಿದೆ. ಸರ್ಕಾರವೇನು ಈ ನೀತಿಯನ್ನು ಅನುಕರಣೆ ಮಾಡುತ್ತಿದೆ ಅದರ ವಿರುದ್ಧ ನಮ್ಮ ಪ್ರತಿಭಟನೆ ಅಷ್ಟೆ.

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೆ, ತಾವು ಬಹಳ ಬೇಸರದಿಂದ ನನ್ನನ್ನೇ ಮಾತನಾಡಲು ಬಿಡಲಿಲ್ಲವೆಂದು ಹೇಳಿದ್ದೀರಿ. ನಾವು ಎಂದೂ ಆ ರೀತಿ ಅಸಹಕಾರವನ್ನು ತಮಗೆ ಕೊಟ್ಟಿಲ್ಲ. ನಮ್ಮ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರೂ ಅಷ್ಟೆ. ತಾವು ಮನಸ್ಸಿನಲ್ಲಿ ದಯವಿಟ್ಟು ಆ ರೀತಿಯಾದ ಭಾವನೆಯನ್ನು ಇಟ್ಟುಕೊಳ್ಳಬಾರದು. ತಮಗೆ ನಾವುಗಳು ಅಪಾರ ಗೌರವಕೊಟ್ಟು, ತಾವೂ ನಾವುಗಳೆಲ್ಲರೂ ಸದನವನ್ನು ನಡೆಸಿಕೊಂಡು ಹೋಗುತ್ತಿದ್ದೇವೆ. ಆದ್ದರಿಂದ ಆ ರೀತಿ ದಾಖಲೆಗಳಿಗೆ ಹೋಗುವುದು ಸರಿಯಲ್ಲ. ನನ್ನನ್ನೇ ಮಾತನಾಡಲು ಬಿಡಲಿಲ್ಲ, ನಾನು ಹೇಗೆ ಸದನವನ್ನು ನಡೆಸುವುದು ಎಂಬುದು ದಾಖಲೆಗಳಿಗೆ ಹೋಗುವುದು ಸರಿಯಲ್ಲ.

ಅಧ್ಯಕ್ಷರು :- ಸದನ ನಡೆಯಲು ಬಿಟ್ಟರಾ?

ಶ್ರೀ ಬಿ.ಎನ್. ಬಚ್ಚೇಗೌಡ :- ನಮಗೆ ತಮ್ಮ ಮೇಲೆ ಬಹಳ ಗೌರವವಿದೆ. ಆ ದೃಷ್ಟಿಯಿಂದ ಈ ಪರಿಸ್ಥಿತಿಯಲ್ಲಿ ಸದನವನ್ನು ಐದು, ಹತ್ತು ನಿಮಿಷ ಮುಂದೂಡಿ ತಮ್ಮ ಕೊಠಡಿಯಲ್ಲಿ ಅವರನ್ನು ಕರೆದು ಮಾತನಾಡಿ, ಮಾನ್ಯ ಗೃಹ ಸಚಿವರಾದ ಖರ್ಗೆಯವರಿದ್ದಾರೆ, ನಮ್ಮ

ಸಿಂಧ್ಯಾರವರಿದ್ದಾರೆ, ವಿರೋಧ ಪಕ್ಷದ ನಾಯಕರಾದ ಜಗದೀಶ್‌ಶೆಟ್ಟರ್‌ರವರೆಲ್ಲರನ್ನು ಕೂರಿಸಿ ಮಾತನಾಡಿ ಒಂದು ತೀರ್ಮಾನ ತೆಗೆದುಕೊಳ್ಳಬಹುದು.

ಅಧ್ಯಕ್ಷರು :- ಮಾನ್ಯ ಖರ್ಗೆಯವರೆ, ಮಾನ್ಯ ಸಿಂಧ್ಯಾರವರು ಹೇಳಿದಂತೆ ನಾನು ತಾಯಿಯ ಹಾಗೆಯೇ ಆ್ಯಕ್ಟ್ ಮಾಡುತ್ತೇನೆ, ತಾವು ದಯವಿಟ್ಟು ತಮ್ಮ ಅಭಿಪ್ರಾಯವನ್ನು ಹೇಳಿ. ತಾಯಿಯ ಆ್ಯಕ್ಟ್ ಎಂದು ಅಲ್ಲ, ತಾವು ಹೇಳಿದಂತೆ ಅನುಸರಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ತಪ್ಪು ಮಾಡಿದಾಗ ತಾವು ಯಾವಾಗಲೂ ತಾಯಿಯ ಸ್ವರೂಪದಲ್ಲಿ ಕ್ಷಮಿಸಬಹುದು. ಆದರೆ ಕೆಲವು ಸಲ ನಿರ್ಣಯ ತೆಗೆದುಕೊಳ್ಳಬೇಕಾದರೆ, ಅಥವಾ ಸರಿಪಡಿಸಬೇಕು, ಶಿಸ್ತನ್ನು ಕಾಪಾಡಬೇಕು ಎಂದರೆ ಸ್ವಲ್ಪ ತಂದೆಯ ಸ್ವರೂಪವೂ ಬೇಕಾಗುತ್ತದೆ. ಅದಕ್ಕಾಗಿ ಇವೆರಡರ ಮಧ್ಯದಲ್ಲಿ ನಾವೆಲ್ಲರೂ ತಮ್ಮ ಕೊಠಡಿಗೆ ಹೋಗಿ ಮಾತನಾಡೋಣ.

ಅಧ್ಯಕ್ಷರು :- ಆಗಲಿ, ಈಗ ಸದನವನ್ನು ಐದು ನಿಮಿಷ ಮುಂದೂಡೋಣ.

(ಸದನವು 3.15ಕ್ಕೆ ಮುಂದೂಡಲ್ಪಟ್ಟು ಮತ್ತೆ ಐದು ನಿಮಿಷಗಳ ನಂತರ ಸಮಾವೇಶಗೊಳ್ಳಲು ತೀರ್ಮಾನಿಸಿತು)

ವಿಷಯ :- ಔಷಧ ನಿಯಂತ್ರಣ ಕಛೇರಿ ಮೇಲೆ ಲೋಕಾಯುಕ್ತ ಧಾಳಿ ಬಗ್ಗೆ

(ಸದನವು ಪುನಃ 4-10 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು ಶ್ರೀ ಎ.ವಿ. ವೆಂಕಟಪ್ಪ) ನವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

(ಬಿ.ಜೆ.ಪಿ. ಸದಸ್ಯರು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು).

ಅಧ್ಯಕ್ಷರು :- ತಿಮ್ಮಪ್ಪನವರೇ, ತಾವು ಸರ್ಕಾರದ ಪರವಾಗಿ ಏನಾದರೂ ಹೇಳಿಕೆ ಕೊಡುವುದು ಇದೆಯೇ?

+ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಕುಟುಂಬ ಕಲ್ಯಾಣ ಮತ್ತು ವಾರ್ತಾ ಸಚಿವರು) :- ಮಾನ್ಯ ಅಧ್ಯಕ್ಷರೆ, ಮಧ್ಯಂತರ ವರದಿಯನ್ನು ತತ್‌ಕ್ಷಣ ಸಲ್ಲಿಸಿ ಎಂದು ಈಗಾಗಲೇ ಲೋಕಾಯುಕ್ತಕ್ಕೆ ನಾವು ವಿನಂತಿ ಮಾಡಿಕೊಂಡಿದ್ದೇವೆ. ಆ ವರದಿ ಬಂದಾದಮೇಲೆ ಯಾವ ರೀತಿ ಕ್ರಮ ಕೈಗೊಳ್ಳಬೇಕು ಎನ್ನತಕ್ಕಂಥದ್ದನ್ನು ಕೂಡ ನಾವು ತೀರ್ಮಾನ ಮಾಡುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡತಕ್ಕಂಥ ಸಂದರ್ಭದಲ್ಲಿ ನಮ್ಮ ಡ್ರಗ್ಸ್ ಕಂಟ್ರೋಲ್ ಡಿಪಾರ್ಟ್‌ಮೆಂಟ್‌ನ ಕಾರ್ಯವೈಖರಿಯಲ್ಲಿ ನಡೆದಿರತಕ್ಕಂಥ ವ್ಯವಸ್ಥೆ ಅವ್ಯವಸ್ಥೆ ಬಗ್ಗೆ ತನಿಖೆ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಈಗಾಗಲೇ ಈ ವಿಷಯ ಲೋಕಾಯುಕ್ತದ ಮುಂದೆ ಇದೆ ಮತ್ತು ಅದರ ಮಧ್ಯಂತರ ವರದಿ ಕೂಡ ಬರಬೇಕು. ಆದರೂ ಅವರ ಸಂಶಯವನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಮಧ್ಯಂತರ ವರದಿ ಬಂದಾದ ಮೇಲೆ ಯಾವ ರೀತಿಯಾದ ತನಿಖೆಯನ್ನು ಮಾಡುವುದಕ್ಕೆ ಸಾಧ್ಯ ಕಾನೂನಿನ ಚೌಕಟ್ಟಿನಲ್ಲಿ ಎನ್ನುವುದನ್ನು ನಾನು ಕಾನೂನು ಇಲಾಖೆಯವರ ಜೊತೆ ಸಮಾಲೋಚನೆ ಮಾಡಿ ಲೋಕಾಯುಕ್ತ ವಿಚಾರಣೆಗೆ ಯಾವುದೇ ಬಾಧಕವೂ ಬರದಿದ್ದ ಹಾಗೆ ಕಾನೂನಿನ ಚೌಕಟ್ಟಿನಲ್ಲಿ ಯಾವ ರೀತಿ ಮಾಡುವುದಕ್ಕೆ ಸಾಧ್ಯ ಇದೆ ಎನ್ನುವುದನ್ನು ಸಂಪೂರ್ಣ ಪರಿಗಣನೆಗೆ ತೆಗೆದುಕೊಂಡು ಸೂಕ್ತವಾದಂಥ ವಿಚಾರಣೆಯನ್ನು ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಒಟ್ಟಿನಲ್ಲಿ ಕಾನೂನಿನ ಚೌಕಟ್ಟಿನ ಮೇಲೆಯೇ ನಾವು ತೀರ್ಮಾನ ಮಾಡಬೇಕಾಗುತ್ತದೆ. ಕಾನೂನು ಇಲಾಖೆಯ ಸಲಹೆಯನ್ನು ಸಹ ನಾವು

ಪಡೆಯಬೇಕಾಗುತ್ತದೆ. ಆದ್ದರಿಂದ ಅವರ ಸಂಶಯವನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಸರ್ಕಾರ ಮುಕ್ತವಾದ ಮನಸ್ಸಿನಿಂದ ಇದೆ. ಅದನ್ನು ನಾನು ಗಂಭೀರವಾಗಿ ಗಮನಕ್ಕೆ ತೆಗೆದುಕೊಂಡು ಸರ್ಕಾರ ಪರಿಶೀಲನೆ ಮಾಡುತ್ತದೆ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರು ಈ ಧರಣಿಯನ್ನು ಮುಕ್ತಾಯ ಮಾಡಿ ಸರ್ಕಾರದ ಜೊತೆ ಸಹಕರಿಸಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ಶ್ರೀ ಶೆಟ್ಟರ್‌ರವರೇ, I think, this is a proper answer ಎಂದು ಕಾಣುತ್ತದೆ. ದಯವಿಟ್ಟು ತಾವು ತಮ್ಮ ಸದಸ್ಯರನ್ನೆಲ್ಲರನ್ನು ಕರೆದು-ಕೊಂಡು ತಮ್ಮ ತಮ್ಮ ಸ್ಥಾನಗಳಿಗೆ ಹೋದರೆ ಮುಂದೆ ಕಾರ್ಯಕ್ರಮ ನಡೆಸಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ.

(ಈ ಹಂತದಲ್ಲಿ ಧರಣಿ ನಿರತರಾಗಿದ್ದ ಬಿ.ಜೆ.ಪಿ. ಸದಸ್ಯರು ಸದನದ ಬಾವಿಯಿಂದ ತಮ್ಮ ತಮ್ಮ ಸ್ಥಾನಗಳಿಗೆ ವಾಪಸ್ಸಾದರು)

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ತನಿಖೆ ಮಾಡಲಿಕ್ಕೆ ಮುಕ್ತ ಮನಸ್ಸು ಇದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಕಾನೂನು ಚೌಕಟ್ಟಿನೊಳಗೆ ನೋಡಿಕೊಂಡು ತನಿಖೆ ಮಾಡುವುದಕ್ಕೆ ನಿರ್ಣಯ ಕೈಗೊಳ್ಳುತ್ತೇವೆಂದು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸರ್ಕಾರ ಈ ಸಂದರ್ಭದಲ್ಲಿ ತನಿಖೆ ಮಾಡಿರುವ ದೃಷ್ಟಿಯಿಂದ ಮುಕ್ತ ಮನಸ್ಸಿನಿಂದ ಇದ್ದದ್ದು ಒಳ್ಳೆಯ ವಿಚಾರ. ಇದನ್ನು ನಾವು ಸಾರ್ವಜನಿಕ ಹಿತದೃಷ್ಟಿಯಿಂದ ಚರ್ಚೆ ಮಾಡಿರುವಂಥದ್ದು. ಚರ್ಚೆ ಮಾಡುವಂಥ ಸಂದರ್ಭದಲ್ಲಿ ಸ್ವಲ್ಪ ಮಾತಿನ ಘರ್ಷಣೆ ಆಗುವಂಥ ರೀತಿಯಲ್ಲಿ ನಡೆಯಿತು. ಮಾನ್ಯ ಸಭಾಧ್ಯಕ್ಷರು ಕಳೆದ ಮೂರುವರೆ ವರ್ಷದಲ್ಲಿ ಇವತ್ತು ಸಿಟ್ಟಾದಷ್ಟು ಬೇರೆ ಯಾವ ದಿನವೂ ನೋಡಿರಲಿಲ್ಲ.

ಅಧ್ಯಕ್ಷರು :- ಈ ರೀತಿ ಕಳೆದ ಮೂರು ವರ್ಷದಲ್ಲಿ ನೀವೂ ಸಹ ಮಾಡಿರಲಿಲ್ಲವಲ್ಲಾ.

ಶ್ರೀ ಜಗದೀಶ್ ಶೆಟ್ಟರ್ :- ಮಾತನಾಡುವಾಗ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ದಯವಿಟ್ಟು ಅದಕ್ಕೆ ಯಾವುದೇ ಬೇರೆ ರೀತಿಯ ತಪ್ಪು ಅರ್ಥ ಮಾಡಿಕೊಳ್ಳುವುದು ಬೇಡ. ತಮ್ಮ ಸ್ಥಾನಕ್ಕೆ ನಮ್ಮೆಲ್ಲರ ಗೌರವ ಇದೆ ಎನ್ನುವ ಮಾತನ್ನು ಹೇಳಿ ಇನ್ನು ಮುಂದಿನ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ತಾವು ದೊಡ್ಡ ಮನಸ್ಸು ಮಾಡಿ ಕ್ಷಮಿಸಿಬಿಡಿ ಸರ್.

ಅಧ್ಯಕ್ಷರು :- ಇಲ್ಲಿ ಕ್ಷಮಿಸುವಂಥದ್ದು ಏನಿದೆ? ಆಯಿತು. ಇನ್ನು ಮುಂದಿನ ವಿಷಯಕ್ಕೆ ಹೋಗೋಣ.

2. ವಿತ್ತೀಯ ಕಾರ್ಯಕಲಾಪ

2003-2004ನೇ ಸಾಲಿನ ಆಯವ್ಯಯದ ಮೇಲಿನ (ಮುಂದುವರಿದ ಚರ್ಚೆ)

_+ ಶ್ರೀ ಎ. ರಾಮದಾಸ್ (ಕೃಷ್ಣರಾಜ) :- ಮಾನ್ಯ ಅಧ್ಯಕ್ಷರೆ, ಪ್ರಮುಖವಾಗಿ ಈ ಸಾಲಿನ ಆಯವ್ಯಯದ ಬಗ್ಗೆ ವಿಚಾರದ ಮಂಡನೆಗೋಸ್ಕರವಾಗಿ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ನಾನು ಧನ್ಯವಾದಗಳನ್ನು ಹೇಳುತ್ತಾ, ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಅರ್ಥಮಂತ್ರಿಗಳು ಮತ್ತು ರಾಜ್ಯದ ಮುಖ್ಯಮಂತ್ರಿಗಳು ಹೀಗೆ ಎರಡೂ ಸ್ಥಾನಗಳನ್ನು ಹೊಂದಿರುವಂಥ ಮಾನ್ಯ ಮುಖ್ಯಮಂತ್ರಿಗಳಿಂದ ನಾವು ಏನನ್ನು ನಿರೀಕ್ಷಣೆ ಮಾಡಿದ್ದೇವೆ. ಏನೇನು ಒಳ್ಳೆಯದು ಆಗಿದೆ,